Mr. DEPUTY SPEAKER—Amendment moved :

"For the words occurring after the word 'should' the following words should be substituted :

'take effective steps to speedily implement all the irrigation projects in the Cauvery Basin in order to utilise our share of water by the end of the IV Five Year Plan period as far as possible'."

Mysore after Integration—Survey of development of different regions—laying of :

Sri VEERENDRA PATIL.—Sir, with your permission I would like to place on the table of the House a statement prepared by me : "Mysore after Integration : Survey of Development of different regions.

ಶ್ರೀ ಎನ್. ಹುಚ್ಚ ಮಾಸ್ತಿಗೌಡ.—On a point of order. ಸ್ವಾಮಿ, ರೂಲ್ ಪ್ರಕಾರ ನಡೆಯಬೇಕು. ಇದು ಇವೊತ್ತಿನ ಕಾರ್ಯಕ್ರಮದ ನಿಯಮದ ಪ್ರಕಾರ ಇದೆಯೇ ? ಈ ರೀತಿ ಮಧ್ಯದಲ್ಲಿ ಅದನ್ನು ಮೂವ್ ಮಾಡುವುದಕ್ಕೆ ತಾವು ಮುಖ್ಯ ಮಂತ್ರಿಗಳಿಗೆ ಅವಕಾಶವನ್ನು ಕೊಡುವುದು ಸರಿಯೇ ?

He is placing something on the Table of the House. It is not in order.

Mr. DEPUTY SPEAKER.—He has sought the permission of the Chair. He was allowed to place it on the Table. I have not permitted him to make any speech.

Motion *re* : funds for implementing all the Irrigation Projects in the Cauvery Basin by 1974

ಶ್ರೀ ಎನ್. ಹುಚ್ಚಮಾಸಿ ಗೌಡ.—ಕಾವೇರಿ ಬೇಸಿನ್ನಿನಲ್ಲಿರತಕ್ಕ ಯೋಜನೆಗಳನ್ನು ಕಾರ್ಯಗತ ಮಾಡುವ ಸಂಬಂಧದಲ್ಲಿ ಒಂದು ರೆಸಲ್ಯೂಷನ್ನು ಶ್ರೀಮಾನ್ ಶಿವಪ್ಪನವರು ಈ ಸಭೆಯಲ್ಲಿ ಮೂವ್ ಮಾಡಿದ್ದಾರೆ. ಆದ್ದರಿಂದ ಮುಖ್ಯವಾಗಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾದ್ದು ಒಂದು ಕ್ರಮ. ಹೀಗಿರುವಾಗ ಬೇರೆ ಯಾವುದೋ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆಯೇ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಉಪಾಧ್ಯಕ್ಷರು.—ನಾನು ಅವರಿಗೆ ಅದನ್ನು ಓದುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಅವರು ಅದನ್ನು ಈ ಸಭೆಯ ಮೇಜಿನಮೇಲಿಡುವುದಕ್ಕೆ ನಾನು ಪರ್ಮಿಷನ್ ಕೊಟ್ಟಿದ್ದೇನೆ.

[Mr. SPEAKER in the Chair]

Sri H. M. CHANNABASAPPA.—Sir, it would facilitate the discussion if the Chief Minister were to make two clarifications. There was a Tripartite Conference on 20th August 1969 at New Delhi and the minutes of the same must have been sent to Mysore Government by now. We would like to know whether the Chief Minister is prepared to furnish a copy of the minutes of this Tripartite Conference to the member so that members may be aware of the latest position. The second point is that on 21st July 1969 the Chief Minister told this House that there is a document prepared by Government to show that even after 1974 our rights on Cauvery water under the agreement will not lapse

(SRI H. M. CHANNABASAPPA)

If the Chief Minister could kindly place that document on the Table of the House it would facilitate discussion.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಚನ್ನಬಸಪ್ಪನವರು 1967ರಲ್ಲಿ ಈ ವಿಚಾರದಲ್ಲಿ ಚರ್ಚೆಯಾದಾಗ ನಾನು 1974ರ ನಂತರವೂ ಕೂಡ ನಮ್ಮ ಹಕ್ಕು ಹೋಗುವುದಿಲ್ಲ ವೆಂದು ನಾನು ಹೇಳಿದ್ದೇನೆ, ಮತ್ತು ಆ ಬಗ್ಗೆ ಒಂದು ರಿಪೋರ್ಟನ್ನು ತಯಾರು ಮಾಡಲಾಗಿದೆ ಎಂಬ ಅಂಶವನ್ನು ನಾನು ಹೇಳಿದ್ದೇನೆ ಎನ್ನತಕ್ಕಂಥ ವಿಚಾರವನ್ನು ಹೇಳಿದರು. 1967ರಲ್ಲಿ ನಾನು ಏನು ಹೇಳಿದ್ದೇನೆ ಎನ್ನತಕ್ಕಂಥ ವಿಚಾರ ಈಗ ನನ್ನ ಮುಂದೆ ಇಲ್ಲ. ರಿಪೋರ್ಟ್ ವಿಚಾರದಲ್ಲಿ ಈಗಾಗಲೇ ನಾನು ಅನೇಕ ಸಲ ಮಾನ್ಯ ಸಭೆಗೆ ಹೇಳಿದ್ದೇನೆ. ಕಾವೇರಿ ನೀರಿನ ವಿವಾದ ಬಹುಶಃ 1974ರಲ್ಲಿ ನಮ್ಮ ಮತ್ತು ಮದ್ರಾಸ್ ಸರ್ಕಾರದ ನಡುವೆ ಮತ್ತೆ ಪ್ರಾರಂಭವಾಗುತ್ತದೆ. ಆಗ ನಮ್ಮ ನಿಲುವು ಏನಿರಬೇಕು, ನಮ್ಮ ಹಿತರಕ್ಷಣೆ ಮಾಡಿಕೊಳ್ಳುವುದಕ್ಕೆ ನಾವು ಏನೇನು ಕಾರ್ಯಕ್ರಮ ಕೈಕೊಳ್ಳಬೇಕು ಮತ್ತು ನಮ್ಮ ಹಕ್ಕನ್ನು ದೃಢೀಕರಿಸುವುದಕ್ಕೆ ಏನೇನು ತಯಾರಿ ಮಾಡಬೇಕು ಎಂಬ ಬಗ್ಗೆ ಒಂದು ಟೆಕ್ನಿಕಲ್ ಕಮಿಟಿಯನ್ನು ನೇಮಕ ಮಾಡಲಾಗಿತ್ತು, ಅವರು ತಮ್ಮ ವರದಿಯನ್ನು ಒಪ್ಪಿಸಿದ್ದಾರೆ ಎಂಬ ಮಾತನ್ನು ಹೇಳಿದ್ದೇನೆ.

ಬಹುಶಃ ಮಾನ್ಯ ಸದಸ್ಯರು ಇಲ್ಲಿ ಒಂದು ವರದಿಗೆ ಸಂಬಂಧಪಟ್ಟಂತೆ ಹೇಳುತ್ತಿದ್ದಾರೋ ಏನೋ. ನನಗನಿಸುವುದು ಇದರ ಬಗ್ಗೆ ಹೇಳಬೇಕಾದರೆ ಇವೊತ್ತು ನಮ್ಮ ಚೀಫ್ ಇಂಜಿನಿಯರು ಗಳಿಂದ ಕೂಡಿದ ಒಂದು ಟೆಕ್ನಿಕಲ್ ಕಮಿಟಿ ಮಾಡಿದ್ದೆವು. ಇವರು ಕೂಲಂಕಷವಾಗಿ ಎಲ್ಲಾ ವಿಚಾರಗಳನ್ನೂ ವಿಚಾರ ಮಾಡಿ ಸರಕಾರಕ್ಕೆ ವರದಿ ಒಪ್ಪಿಸಿದ್ದಾರೆ. ಇದು ಕಾನ್‌ಫಿಡೆನ್‌ಷಿಯಲ್ ಸ್ವರೂಪದ್ದಾಗಿದೆ. ಇದು ಪಬ್ಲಿಕ್ ಡಾಕ್ಯುಮೆಂಟಾಗುವುದಿಲ್ಲ. ಪಬ್ಲಿಕ್ ಡಾಕ್ಯುಮೆಂಟಾಗಿ ಇದನ್ನು ಈಗ ರಾಜ್ಯದ ಹಿತದೃಷ್ಟಿಯಿಂದ ಕೇಳತಕ್ಕ ವಿಚಾರವಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈ ಸಭೆಯ ಪ್ರೊಸೀಡಿಂಗ್ಸನಲ್ಲಿ 21-7-67 ರಲ್ಲಿ (ಪುಟ 274) ಮಾನ್ಯ ಸದಸ್ಯರಾದ ಶ್ರೀ ಸಿದ್ದವೀರಪ್ಪನವರು ಒಂದು ಪ್ರಶ್ನೆ ಕೇಳಿದರು. ಅದು ಹೀಗಿದೆ :

> ''ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು 1974ರೊಳಗೆ ಉಪಯೋಗಿಸದೇ ಹೋದರೆ ನಮ್ಮ ಹಕ್ಕು ಹೋಗುತ್ತದೆ.
>
> ''ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಹಕ್ಕು ಏನೂ ಹೋಗುವುದಿಲ್ಲ. ನಮ್ಮ ಹಕ್ಕು ಏನೂ ಹೋಗುವುದಿಲ್ಲ ಎನ್ನುವುದಕ್ಕೆ ಈಗಾಗಲೇ ಒಂದು ಡಾಕ್ಯುಮೆಂಟನ್ನು ತಯಾರು ಮಾಡಲಾಗಿದೆ. 1974 ರೊಳಗೆ ಆ ನೀರನ್ನು ಉಪಯೋಗಿಸದಿದ್ದರೆ ನಮ್ಮ ಹಕ್ಕು ಹೋಗುತ್ತದೆ ಎನ್ನುವ ವಿಷಯವೇನೂ ಇಲ್ಲ. ಅದು ಸತ್ಯಕ್ಕೆ ದೂರವಾದಂತ ವಿಷಯ.''

ಇದರಲ್ಲಿರುವುದನ್ನು ಹೇಳದೆ ತಾವು ಬೇರೆ ವಿಷಯಕ್ಕೆ ಸ್ಕಿಪ್ ಆಫ್ ಮಾಡಿ ಇಲ್ಲಿ ಹೇಳಬಾರದು. ಇದಕ್ಕಾಗಿ ತಮ್ಮ ಗಮನವನ್ನು ಇಲ್ಲಿ ಸೆಳೆಯುತ್ತಿದ್ದೇನೆ. ಈಗಾಗಲೇ ಒಂದು ಡಾಕ್ಯುಮೆಂಟು ತಯಾರಾಗಿದೆ. ಇದು ಪಬ್ಲಿಕ್ ಡಾಕ್ಯುಮೆಂಟು ಆಗುವುದಿಲ್ಲವೇ? ಇದನ್ನು ಇಲ್ಲಿ ತಂದು ಚರ್ಚೆ ಮಾಡಿದರೆ ಇದರಲ್ಲಿ ನ್ಯಾಯವಾದ ವಿಚಾರಗಳು ಇದ್ದರೆ ಮುಂದೆ ನಾವು ಇದರ ಬಗ್ಗೆ ಚರ್ಚೆ ಮಾಡುವುದೇ ಅನಗತ್ಯವಾಗಬಹುದು. ಯಾವುದೋ ಬೇರೆ ಡಾಕ್ಯುಮೆಂಟು ಎಂದು ಇಲ್ಲಿ ರೆಫರು ಮಾಡುವುದು ಸರಿಯಲ್ಲ.

†ಶ್ರೀ ವೀರೇಂದ್ರ ಪಾಟೀಲ್.—ನಾನು ಏನು ಹೇಳಬಹುದೋ ಅದನ್ನು ಇಲ್ಲಿ ಹೇಳುತ್ತಿದ್ದೇನೆ. ಇದರ ಬಗ್ಗೆ ಅಭಿಪ್ರಾಯ ತೆಗೆದುಕೊಳ್ಳುವುದು ಮಾನ್ಯ ಸದಸ್ಯರಿಗೆ ಬಿಟ್ಟಿದ್ದು. ಅವರು ಯಾವ ರೀತಿಯಾಗಿ ನನ್ನ ಹೇಳಿಕೆಯ ಬಗ್ಗೆ ಅಭಿಪ್ರಾಯ ಇಟ್ಟುಕೊಳ್ಳುತ್ತಾರೆ ಎನ್ನುವುದರ ಬಗ್ಗೆ ನಾನೇನೂ ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಎರಡು ಆ್ಯಸ್‌ಪೆಕ್ಟ್ಸ್‌ಗಳಿವೆ. ಒಂದು ಲೀಗಲ್ ಆ್ಯಸ್‌ಪೆಕ್ಟ್ಸ್ ಇನ್ನೊಂದು ಟೆಕ್ನಿಕಲ್ ಆಸಪೆಕ್ಟ್ಸ್‌ಗಳು. 1924ರ ಅಗ್ರಿಮೆಂಟು ಪ್ರಕಾರ ಒಂದು ಲೀಗಲ್ ಆ್ಯಸ್‌ಪೆಕ್ಟ್ಸ್ ಬಂದಾಗ ಇದಕ್ಕಾಗಿ ಒಂದು ಟೆಕ್ನಿಕಲ್ ಕಮಿಟಿಯವರನ್ನು ನೇಮಕ ಮಾಡಿದಾಗ ಇದರಲ್ಲಿ ನೀರಿನ ಪ್ರಶ್ನೆ ಬಂತು, ಎಷ್ಟು ನೀರು ನಮಗೆ ಬೇಕಾಗುತ್ತದೆ ಮತ್ತು ಎಷ್ಟು ನೀರು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ ಮತ್ತು ಇಲ್ಲಿರುವ ನೀರನ್ನು ಪೂರ್ತಿ ಉಪಯೋಗ ಮಾಡಿಕೊಳ್ಳಲು ಸಾಧ್ಯ ಇದೆಯೇ ಇಲ್ಲವೇ ಎನ್ನುವುದನ್ನೆಲ್ಲಾ ವಿಚಾರ ಮಾಡಿ ಒಂದು ನಿರ್ಣಯಕ್ಕೆ

ಬರುವುದರ ಸಲುವಾಗಿ ಒಂದು ಕಮಿಟಿ ಮಾಡಿದ್ದೆವು. ಆ ಕಮಿಟಿಯವರು ಅವರ ವರದಿಯನ್ನು ಒಪ್ಪಿಸಿದ್ದಾರೆ. ಆ ವರದಿಯಲ್ಲಿರುವ ಅಂಶಗಳನ್ನು ಹೊರಗೆಡುವುದಕ್ಕೆ ಆಗುವುದಿಲ್ಲ. ನಮ್ಮ ಸ್ಟ್ಯಾಂಡು ಏನು ಎನ್ನುವುದನ್ನು ಪೂರ್ತಿಯಾಗಿ ಬಯಲು ಮಾಡುವ ಹಾಗಿಲ್ಲ. ಇದು ರಾಜ್ಯದ ಹಿತದೃಷ್ಟಿಯಿಂದ ಮಾಡಬೇಕಾದುದು ಹಾಗೆಮಾಡಿದರೆ ಮುಂದೆ ಆಡಳಿತ ಮುಂದುವರಿಯುವ ಹಾಗಿಲ್ಲ. ಇದಕ್ಕೆ ಸಂಬಂಧಪಟ್ಟ ಡಾಕ್ಯುಮೆಂಟುಗಳೆಲ್ಲಾ ಹೊರಗೆ ಇಡುವುದು ಸಾಧ್ಯವಿಲ್ಲ.

ಎರಡನೇ ವಿಚಾರ ಮಾನ್ಯ ಸದಸ್ಯರಾದ ಶ್ರೀ ಚೆನ್ನಬಸಪ್ಪನವರು ಸಲಹೆ ಮಾಡಿರುವುದು ಹೇಮಾವತಿ ಬಗ್ಗೆ ಕಳೆದ ಬಾರಿ ಕೂಡ ಚರ್ಚೆಯಾಗಿದೆ ಮತ್ತು ಕೇಂದ್ರದವರೊಡನೆ ಚರ್ಚೆಯಾಗಿದೆ ಕೇಂದ್ರದವರೊಡನೆ ಚರ್ಚೆ ನಡೆದಾಗ ಹಾಗೂ ಮದ್ರಾಸಿನವರ ಜೊತೆ ಚರ್ಚೆ ನಡೆದಾಗ ಏನೇನು ಆಗಿದೆಯೋ ಅವೆಲ್ಲಾ ಪ್ರೊಸೀಡಿಂಗ್ಸ್ ಆಗುವುದಿಲ್ಲ. ನಾವು ಯಾವುದನ್ನೂ ಬರೆದುಕೊಂಡಿಲ್ಲ. ನನಗೆ ನೆನಪಿರುವಂತೆ ಅವರೊಡನೆ ಚರ್ಚೆ ಮಾಡಿದ್ದೇವೆ. ಅವರೇನಾದರೂ ಪ್ರೊಸೀಡಿಂಗ್ಸ್ ಕಳುಹಿಸುತ್ತಾರೋ ನೋಡಬೇಕು. ನನಗೆ ಗೊತ್ತಿರುವಂತೆ ಹೇಮಾವತಿ ಹಾಗೂ ಹಾರಂಗಿ ಪ್ರಾಜೆಕ್ಟ್‌ಗಳ ಬಗ್ಗೆ ಚರ್ಚೆ ಏನೋ ಮಾಡಿದೆವು. ಯಾವುದನ್ನೂ ಲಿಖಿತ ರೂಪದಲ್ಲಿ ಹೇಳಲಿಲ್ಲ.

MR. SPEAKER.—I would like to bring to the notice of the Hon. Members that we have to close the debate on this Resolution today. I do not know whether the Hon. Deputy Speaker has brougth to the notice of the House that four hours have been allotted for this Resolution. Even if we were to sit a little late, we should finish it today. The other Resolution will come tomorrow, I think the Whips might be having some idea about the number of persons desirous of participating in the debate. A time-limit for the speeches has also been fixed. My request to the hon. Members is that the time-limit should be observed meticulously, so that we might conclude the debate today.

ಶ್ರೀ ಎಸ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ಕಾವೇರಿನದಿ ನೀರಿನ ಕೆಳಗಡೆ ಇರುವ ನೀರಾವರಿ ಯೋಜನೆಗಳನ್ನು ನಾವು 1974ನೇ ಇಸವಿಯೊಳಗೇ ಪೂರೈಕೆ ಮಾಡುವ ಕರ್ತವ್ಯವನ್ನು ಸರಕಾರ ಜರೂರಾಗಿ ಮಾಡಬೇಕೆಂದು ಇಲ್ಲಿ ಇಂತಹ ಒಂದು ನಿರ್ಣಯವನ್ನು ತರುವುದರ ಉದ್ದೇಶವಾಗಿದೆ. ಈಗಾಗಲೇ ಸರಕಾರ ನಮಗೆ ಒದಗಿಸಿರುವ ಅಂಕೆ ಸಂಖ್ಯೆಗಳನ್ನು ನಾವು ನೋಡುವುದಾದರೆ ಈ ಸರಕಾರ ಕಳೆದ ಹದಿಮೂರು ವರ್ಷಗಳಲ್ಲಿ 1956ನೇ ಇಸವಿಯಲ್ಲಿ ವಿಶಾಲ ಮೈಸೂರು ಆದ ಮೇಲೆ ಇದ್ದ ಕಾಂಗ್ರೆಸ್ ಸರಕಾರ ಈ ದೇಶದಲ್ಲಿರುವ ನೀರಾವರಿ ಅಭಿವೃದ್ಧಿ ಕಾರ್ಯಗಳಲ್ಲಿ ಏನೇನು ಕಾರ್ಯಗಳನ್ನು ಮಾಡಿದ್ದಾರೆ ಎನ್ನುವುದನ್ನು ಸೂಕ್ಷ್ಮವಾಗಿ ವಿಮರ್ಶೆ ಮಾಡುವುದಾದರೆ ಸರಕಾರ ತಮ್ಮ ಹದಿಮೂರು ವರ್ಷದ ಅವಧಿಯಲ್ಲಿ ಇಂತಿಂತಹ ನೀರಾವರಿ ಯೋಜನೆಗಳನ್ನು ಆರಂಭ ಮಾಡಿ ಪೂರೈಕೆ ಮಾಡಿದ್ದೇವೆ ಮತ್ತು ಇದರಿಂದ ಜನಕ್ಕೆ ಉಪಯೋಗವಾಗಿದೆ ಎಂದು ಎದೆಮುಟ್ಟಿ ಹೇಳುತ್ತಿದ್ದರೆ ಆಗ ನಾವೂ ಕೂಡ ಸೈ ಎನ್ನಬಹುದಾಗಿತ್ತು. ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಎಲ್ಲಿಯಾದರೂ ಸರಿ ಹತ್ತು ಸಾವಿರ ಎಕರೆಗೆ ಇಲ್ಲವೇ ಐದು ಸಾವಿರ ಎಕರೆಗೆ ನೀರಾವರಿ ಯೋಜನೆಮಾಡಿ ಪೂರೈಸಿದ್ದೇವೆ ಎಂದು ನೋಡಿದರೆ ಯಾವುದನ್ನೂ ಪೂರೈಕೆ ಮಾಡಿಲ್ಲ ಮತ್ತು ನಾವು ಮಾಡಿದ ನಿರ್ಣಯವನ್ನು ನೀವು ಕಾರ್ಯಗತ ಮಾಡದೇ ವಿಫಲರಾಗಿದ್ದೀರಿ ಎಂದು ವಿಷಾದದಿಂದ ಹೇಳಬೇಕಾಗಿದೆ. ಇಡೀ ಭಾರತ ದೇಶದಲ್ಲಿ ನಮ್ಮ ಮೈಸೂರು ದೇಶ ಬೇರೆ ರಾಜ್ಯಗಳಲ್ಲಿ ಮಾಡಿರುವಂತೆ ಪೂರ್ತಿಯಾಗಿ ಎರಡು ಮೂರು ಯೋಜನೆಗಳನ್ನಾದರೂ ಪೂರೈಕೆ ಮಾಡಿದ್ದೀರಾ? ನಿಮ್ಮ ನೀರಾವರಿ ಸರಾಸರಿ ಶೇಕಡಾ 8.5 ರಷ್ಟು ಇದೆ. ಎರಡು ಮೂರು ಯೋಜನೆಗಳನ್ನು ಮಾಡಿ ಇಷ್ಟು ಕಡಿಮೆ ನೀರಾವರಿ ಪ್ರದೇಶ ಇದೆ ಎನ್ನುವುದು ಗೊತ್ತಾಗುತ್ತದೆ. ನೀರಾವರಿ ಯೋಜನೆಗಳಿಗಾಗಿ ನೀವು ಎಷ್ಟು ಹಣ ಖರ್ಚು ಮಾಡಿದ್ದೀರಿ ಎನ್ನುವದನ್ನು ಲೆಕ್ಕ ಮಾಡಿ ನೋಡಿದರೆ ಆದರಿಂದ ಚೆನ್ನಾಗಿ ಗೊತ್ತಾಗುತ್ತದೆ. ಇದೇ ಅಧಿವೇಶನದಲ್ಲಿ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಒಂದು ಪ್ರಶ್ನೆ ಕೇಳಿದಾಗ ಸರಕಾರ ಇದರ ಬಗ್ಗೆ ಉತ್ತರ ಕೊಟ್ಟು ಇರುವ ಅಂಕೆ ಅಂಶಗಳ ಪ್ರಕಾರ ಕಾವೇರಿ ನದಿ ನೀರಿನ ಕೆಳಗೆ ಆಗುವ ನೀರಾವರಿ ಯೋಜನೆಗಳಿಗೆ ಒಂದು, ಎರಡು ಹಾಗೂ ಮೂರು ಯೋಜನೆಗಳಾದರೂ ನೀವು ಇಲ್ಲಿಯವರೆಗೆ ಖರ್ಚು ಮಾಡಿರುವುದು ಕೇವಲ ನಾಲ್ಕೂವರೆ ಅಥವಾ ಐದು ಕೋಟಿಯವರೆಗೆ ಮಾತ್ರ. ಕಾವೇರಿ ಯೋಜನೆಗಳಿಗಾಗಿ ಸುಮಾರು ನಾಲ್ಕೂವರೆ ಕೋಟಿ ಖರ್ಚು ಮಾಡಿದ್ದೀರಿ. ಶರಾವತಿ ಯೋಜನೆಗಳಿಗಾಗಿ ಎಷ್ಟು ಖರ್ಚು ಮಾಡಿದ್ದೀರಿ ಮತ್ತು ಯಾವರೀತಿಯಾದ ಕೆಲಸಕಾರ್ಯಗಳು ನಡೆದಿವೆ ಎನ್ನುವು

(ಶ್ರೀ ಎಸ್. ಶಿವಪ್ಪ)

ದನ್ನೆಲ್ಲಾ ಪರಿಶೀಲನೆ ಮಾಡಿ ನೋಡಿದರೆ ಇದುವರೆಗೂ ಯಾವ ಯೋಜನೆಗಳಿಂದಲೂ ಸಾಕಷ್ಟು ಪ್ರತಿಫಲ ಪಡೆದಿಲ್ಲ ಎನ್ನುವುದು ಗೊತ್ತಾಗುತ್ತದೆ. ಮೊದಲಿನಿಂದಲೂ ಇದರ ಬಗ್ಗೆ ಈ ಸಭೆಯಲ್ಲಿ ಚರ್ಚೆಗಳು ನಡೆಯುತ್ತಲೇ ಇವೆ. ಆಗಿನಿಂದಲೂ ಮೈಸೂರು ಹಾಗೂ ಮದ್ರಾಸು ಸರಕಾರಕ್ಕೆ ಆಗಿರುವ ಒಪ್ಪಂದ ಎಂದರೆ 1924ರಲ್ಲಿ ದಿವಾನ ಬ್ಯಾನರ್ಜಿಯವರ ಕಾಲದಲ್ಲಿ ನಡೆದದ್ದು 1974ನೇ ಇಸವಿಯೊಳಗೇ ಮುಗಿಯುವುದರಲ್ಲಿದೆ. ಇದರೊಳಗಾಗಿ ಎಲ್ಲ ಕಾವೇರಿ ನೀರನ್ನು ಉಪಯೋಗ ಮಾಡಿಕೊಳ್ಳಬೇಕು ಇಲ್ಲದೇ ಹೋದರೆ ನಮಗೆ ನೀರೇ ಉಳಿಯುವುದಿಲ್ಲ ಎಂದು ಇದರ ಬಗ್ಗೆ ಬಹಳ ತೀವ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರಕಾರದಲ್ಲಿ ಒತ್ತಾಯ ತರುತ್ತಲೇ ಇದ್ದೇವೆ. ಆದುದರಿಂದ ಇಲ್ಲಿ ಆದಷ್ಟು ಹೆಚ್ಚು ನೀರಾವರಿ ಯೋಜನೆಗಳನ್ನು ಮಾಡಿ ಹೆಚ್ಚು ನೀರನ್ನು ಉಪಯೋಗಿಸಿಕೊಳ್ಳಬೇಕು ಎಂದು ಹೇಳುತ್ತಲೇ ಬರುತ್ತಿದ್ದೇವೆ. ಆದರೆ ಇದರ ಬಗ್ಗೆ ಈಗ ಪುನಃ ವಿಮರ್ಶೆ ಮಾಡಿ 1974ನೇ ಇಸವಿ ಅಗ್ರಿಮೆಂಟ್‌ನಂತೆ ಮೈಸೂರಿಗೆ ಎಷ್ಟು ನೀರು ಬರುತ್ತೆ ಮತ್ತು ಮದ್ರಾಸಿಗೆ ಎಷ್ಟು ನೀರು ಉಳಿಯುತ್ತೆ ಎನ್ನುವುದಕ್ಕೆ ಆಗ ಆಗಿರುವ ಒಪ್ಪಂದದಲ್ಲಿ ಇರುವ 11ನೇ ಷೆಡ್ಯೂಲನ್ನು ಇಲ್ಲಿ ಸಭೆಯ ಅವಗಾಹನೆಗಾಗಿ ಓದುತ್ತೇನೆ. ಅದು ಈ ರೀತಿ ಇದೆ:

> "The Mysore Government and the Madras Government further agree that the l mitations and arrangements embodied in clauses (iv), to (viii) *supra* shall, at the expiry of fifty years from the date of the execution of these presents be opened to reconsideration in the light of the experience gained and of an examination of the possibilities of the further extension of irrigation within the territories of the respective Governments and to such modifications and additions as may be mutually agreed upon as the result of such reconsideration."

1974ನೇ ಇಸವಿಯಲ್ಲಿ ಎರಡೂ ಸರ್ಕಾರದವರು ಕೂಡ ಪುನರ್ವಿಮರ್ಶೆ ಮಾಡತಕ್ಕಂಥ ಒಂದು ಕಲಮನ್ನು ಇದರಲ್ಲಿ ಸೇರಿಸಿಕೊಂಡಿದ್ದಾರೆ. ಆ ರೀತಿ 1974ನೇ ಇಸವಿಯಲ್ಲಿ ಪುನರ್ವಿಮರ್ಶೆ ಮಾಡತಕ್ಕಂಥ ಕಾಲದಲ್ಲಿ ಬರೀ ಫೌಂಡೇಷನ್ ಸ್ಟೋನ್ ಹಾಕಿ ಯೋಜನೆಗಳನ್ನು ಜಾರಿಗೆ ತರದೇ ಇರುವುದನ್ನು ನೋಡುವಾಗ ಮೈಸೂರು ಸರ್ಕಾರಕ್ಕೆ ಕಾವೇರಿ ನದಿಯ ನೀರನ್ನು ಬಳಸಿಕೊಳ್ಳುವ ಬಗ್ಗೆ ಆಸಕ್ತಿ ಇಲ್ಲ ಎನ್ನುವ ಸಂಶಯ ಬಂದೇ ಬರುತ್ತದೆ. ಮತ್ತು ಇವರಿಗೆ ಬೇಕಾಗಿಲ್ಲ ಬೇರೆಯವರಿಗೆ ಕೊಡಬೇಕು ಎನ್ನುವ ವಿಚಾರವೂ ಬರುತ್ತದೆ. ಆ ಸಂದರ್ಭದಲ್ಲಿ ಮದ್ರಾಸ್ ಸರ್ಕಾರದವರು ನಮ್ಮ ಮೇಲೆ ಈ ಒಂದು ನಿರ್ಬಂಧವನ್ನು ಹಾಕಿದರೆ ನಮ್ಮ ಕೈ ಕಟ್ಟಬೇಡಿ. ನಮಗೆ ನೀರು ಕೊಡಿ ಎಂದು ಹೇಳುತ್ತಾರೆಯೇ? ಆ ರೀತಿ 1974ರ ಒಳಗೆ ಈ ಒಂದು ಒಪ್ಪಂದದ ಪ್ರಕಾರ ನಾವು ಎಷ್ಟು ನೀರನ್ನು ಉಪಯೋಗಿಸಕೊಳ್ಳಬೇಕೋ ಅದಕ್ಕೆ ಸಾಕಷ್ಟು ಕೆಲಸ ಮಾಡದಿದ್ದರೆ ಅವರು ನಮ್ಮನ್ನು ಏನು ಬೇಕಾದರೂ ಕೇಳುವುದಕ್ಕೆ ಅವಕಾಶವಾಗುತ್ತದೆ. ಅಂತಹ ಒಂದು ಕಲಮನ್ನು ಅದರಲ್ಲಿ ಸೇರಿವೆ. ಇದರ ಬಗ್ಗೆ ಶ್ರೀಮಾನ್ ಚೆನ್ನಬಸಪ್ಪನವರು ಕೇಳಿದರು. ಏನೆಂದರೆ 1974ನೇ ಇಸವಿಯವರೆಗೆ ನಾವು ಆತುರ ಪಡದೇ ಇದ್ದರೂ ಪರವಾಯಿಲ್ಲ, 1974ನೇ ಇಸವಿಗೆ ನಮಗೆ ಏನೂ ಇದರಿಂದ ಧಕ್ಕೆ ಬರುವುದಿಲ್ಲ ಎಂದು ಏನು ಹೇಳಿದರಲ್ಲ ಅದರ ಒಂದು ಕಾಪಿಯನ್ನು ಕೊಡಿ ಎಂದು. ಶ್ರೀಮಾನ್ ಚೆನ್ನಬಸಪ್ಪನವರು ಇದನ್ನು ಒಂದು ಒಳ್ಳೆಯ ಉದ್ದೇಶದಿಂದ ಕೇಳಿದ್ದಾರೆ. ಇದು ಮೂಲಭೂತವಾದ ಪ್ರಶ್ನೆ. ಇದು ನಮ್ಮ ರಾಜ್ಯವನ್ನು ಎದುರಿಸತಕ್ಕಂಥ ಪ್ರಶ್ನೆ. ನಮಗೆ ಕಾವೇರಿ ನದಿಯಲ್ಲಿ ಇರತಕ್ಕಂಥ ಒಂದೊಂದು ತೊಟ್ಟು ನೀರು ಬಹಳ ಪ್ರಾಮುಖ್ಯವಾದುದು. ಈ ನೀರು ಈಗ ಕನಿಷ್ಠ ಪ್ರಮಾಣದಲ್ಲಿರುವಾಗ 1974ರ ತನಕವೂ ಈ ಯೋಜನೆಯಲ್ಲಿ ಏನು ಕೆಲಸ ಮಾಡಬೇಕೋ ಅದನ್ನು ಮಾಡದೇ ಹೋದರೆ ನಮ್ಮ ದೇಶಕ್ಕೆ ಎಂತಹ ಮೋಸ ಮಾಡಿದಂತಾಗುತ್ತದೆ ಎಂದು ಸರ್ಕಾರಕ್ಕೆ ಹೇಳುತ್ತೇನೆ. ಈವೊತ್ತು ಶ್ರೀಮಾನ್ ನಿಜಲಿಂಗಪ್ಪನವರಾಗಲಿ, ಶ್ರೀಮಾನ್ ಜತ್ತಿಯವರಾಗಲಿ, ಶ್ರೀಮಾನ್ ವೀರೇಂದ್ರಪಾಟೀಲರೇ ಆಗಲಿ ದೇಶಕ್ಕೆ ದೊಡ್ಡ ದ್ರೋಹ ಮಾಡಿದ್ದಾರೆ ಎಂದು ಹೇಳಬೇಕಾಗುತ್ತದೆ. ಏತಕ್ಕೆಂದರೆ ಈ 13ವರ್ಷದ ಅವಧಿಯಲ್ಲಿ ಅವರು ಇದರ ಬಗ್ಗೆ ಏನು ಕಾರ್ಯ ಸಾಧನೆ ಮಾಡಿದ್ದಾರೆ ಎಂದು ಕೇಳುತ್ತೇನೆ. ಇವರು ಮಾಡಿರುವ ಸಾಧನೆ ಕೋಟಿಕೋಟಿಗಟ್ಟಲೆ ರೂಪಾಯಿಯನ್ನು ಕೈಗಾರಿಕೆಗಳಿಗೆ ಹಾಕಿ ಈವೊತ್ತು ನಮ್ಮ ದೇಶದ ಹಣವನ್ನು ಲೂಟಿ ಮಾಡಿದ್ದಾರೆ, ಪೋಲು ಮಾಡಿದ್ದಾರೆ. ಈವೊತ್ತಿನ

ವರೆಗೂ ಕಾವೇರಿ ನದಿಯಲ್ಲಿ ಒಂದು ಅಣೆಕಟ್ಟೆಯನ್ನೂ ಕೂಡ ಕಟ್ಟಿಸಿಲ್ಲ. ಆದ್ದರಿಂದ ಈ ದೇಶದಲ್ಲಿ ತಾವು ರಾಜ್ಯದ ಆಡಳಿತವನ್ನು ಕಳೆದುಕೊಂಡಿದ್ದೀರಿ ಎಂದು ಹೇಳುತ್ತೇನೆ. ಪರದೇಶಕ್ಕೆ ಹೋಗಿ ನಮ್ಮ ಅಸಮಾನತೆಯನ್ನು ಹೋಲಿಸಿದ್ದೀರಿ. ಅಲ್ಲಿ ದೊಡ್ಡ ಹೇಳಿಕೆ ಕೊಟ್ಟಿದ್ದೀರಿ. ನೀವು ಆ ರೀತಿ ಹೇಳಿಕೆ ಕೊಟ್ಟರೆ ಅದು ಜನಗಳನ್ನು ಮೆಚ್ಚಿಸುವಂಥ ಮಾತಲ್ಲ. 2½ ಕೋಟಿ ಪ್ರಜಾಸಂಖ್ಯೆ ಇರ ತಕ್ಕಂಥ ನಮ್ಮ ದೇಶದಲ್ಲಿ ಎಲ್ಲರೂ ನೆಮ್ಮದಿಯಿಂದ ಬಾಳತಕ್ಕಂಥ ಸರ್ಕಾರ ಇರಬೇಕು ಎನ್ನು ವುದರಲ್ಲಿ ನಾನು ಮೊದಲಿಗನು. ಅಂತಹ ನೆಮ್ಮದಿಯನ್ನು ಉಂಟುಮಾಡುವುದು ಜನಗಳ ಪ್ರತಿನಿಧಿ ಯಾಗಿ ಜವಾಬ್ದಾರಿ ಹೊತ್ತಿರತಕ್ಕಂಥ ಸರ್ಕಾರದ್ದು ಕರ್ತವ್ಯವಾಗಿದೆ. ಮತ್ತು ಈ ಜವಾಬ್ದಾರಿ ಹೊತ್ತಿರತಕ್ಕ ಜನ ಕೂಡ ಕೆಲಸ ಮಾಡಿಕೊಂಡು ಹೋಗಬೇಕಾದರೆ ಈವೊತ್ತಿನ ದಿವಸ ಜನಗಳಲ್ಲಿ ಎಮೋಷನಲ್ ಇಂಟಿಗ್ರೇಷನ್ ಬೆಳೆಸಬೇಕು. ರಾಜ್ಯದ ಜನಗಳಲ್ಲಿ ನೆಮ್ಮದಿ ಹುಟ್ಟಿಸಬೇಕಾದರೆ ನೀವು ಏನು ಒಂದು ಹಕ್ಕನ್ನು ಸಾಧನೆ ಮಾಡಬೇಕಾಗಿದೆಯೋ ಆ ಗುರುತರವಾದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಸರ್ಕಾರ ಸಾಧನೆ ಮಾಡಿದರೆ ದೇಶ ಸ್ವತಂತ್ರವಾಗಿ ಆಗಬಲ್ಲದು ಮತ್ತು ದೇಶವು ಸುಂದರವೂ ಆಗುತ್ತದೆ. ಈ ಮಾತನ್ನು ಮನಬಿಚ್ಚಿ ಹೇಳಬೇಕಾಗುತ್ತದೆ. ಈ 13 ವರ್ಷದಿಂದ ಮದ್ರಾಸ್ ಸರ್ಕಾರದವರು ಕಾವೇರಿ ಕಣಿವೆ ಏರಿಯಾದಲ್ಲಿರತಕ್ಕಂಥ ಎಲ್ಲಾ ಪ್ರಾಜೆಕ್ಟ್‌ಗಳನ್ನು ಕಟ್ಟಿಕೊಂಡಿದ್ದಾರೆ. ಮತ್ತು ಆ ಪ್ರಾಜೆಕ್ಟ್‌ನಿಂದ 20 ಲಕ್ಷ ಎಕರೆಗಳಿಗಾಗುವಷ್ಟು ನೀರಾವರಿ ಕೆಲಸಗಳನ್ನು ಮಾಡಿಕೊಂಡಿದ್ದಾರೆ. ಅದಲ್ಲದೆ ಇನ್ನು ಬೇರೆ ಬೇರೆ ಅಣೆಕಟ್ಟುಗಳನ್ನು ಕಟ್ಟಿಕೊಂಡಿ ದ್ದಾರೆ. ಈ ರೀತಿ ಅವರು ಕೆಲಸ ಮಾಡಿಕೊಂಡಿರುವುದಕ್ಕೆ ಶ್ರೀಮಾನ್ ವೀರೇಂದ್ರ ಪಾಟೀಲರು ಏನು ಹೇಳುತ್ತಾರೆ ಎಂದು ನಾನು ಕೇಳುತ್ತೇನೆ. ಈವೊತ್ತಿನ ದಿವಸ ದೊಡ್ಡ ದೊಡ್ಡ ಕೈಗಾರಿಕೆ ಆಗಬೇಕು ಎನ್ನುವ ಆಸೆ ನಮಗಿಲ್ಲ. ನನಗೆ ಚರ್ಚೆ ಮಾಡುವುದಕ್ಕೆ ಇಚ್ಛೆ ಇಲ್ಲ. ಆ ಚರ್ಚೆಯಿಂದ ಏನೂ ಪ್ರಯೋಜನವಾಗುವುದಿಲ್ಲ. ಶ್ರೀಮಾನ್ ವೀರೇಂದ್ರ ಪಾಟೀಲರು ಈಗ ಎದ್ದು ಹೇಳಲಿ. ನಮ್ಮ ಸರ್ಕಾರ 1974ನೇ ಇಸವಿಯೊಳಗೆ ಇಂತಿಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಇದಕ್ಕಾಗಿ ಇಷ್ಟು ಹಣವನ್ನು ಒದಗಿಸಿದ್ದೇವೆ ಅಥವಾ ಹಣವನ್ನು ಒದಗಿಸಿಕೊಳ್ಳುವುದಕ್ಕೆ ಇಂತಹ ಧೋರಣೆ ಇಟ್ಟುಕೊಂಡಿದ್ದೇವೆ ಅಥವಾ ಇದರ ಬಗ್ಗೆ ಇನ್ನು ಏನು ಕಾರ್ಯಕ್ರಮ ಹಾಕಿಕೊಂಡಿ ದ್ದಾರೋ ಅದರ ಬಗ್ಗೆ ಒಂದು ಆಶ್ವಾಸನೆಯನ್ನು ಈ ಸಭೆಗೆ ಕೊಡಲಿ ಕಳೆದ ಅಧಿವೇಶನದಲ್ಲಿ ಮುಖ್ಯ ಮಂತ್ರಿಗಳು ಹೇಳಿದರು ಟೆಕ್ನಿಕಲ್ ಡಾಟಾ ಇಲ್ಲದೇ ಇದ್ದುದರಿಂದ ಈ ವಿಷಯದ ಬಗ್ಗೆ ಚರ್ಚಿಸಲು ಹೋಗುವುದಿಲ್ಲ, ಇದಕ್ಕೆ ಪ್ರತ್ಯೇಕವಾಗಿಯೇ ಸಂಬಂಧಪಟ್ಟ ಎಂ. ಎಲ್. ಎ. ಗಳ ಒಂದು ಮೀಟಿಂಗ್ ಕರೆದು ಇವನ್ನು ಚರ್ಚಿಸೋಣ ಎಂದು ಹೇಳಿದರು. ಇವಾದಮೇಲೆ ಎರಡು ಮೀಟಿಂಗ್‌ಗಳನ್ನು ಮಾಡಿದಿರಿ. ಅದರಲ್ಲಿ ಏನು ಹೇಳಿದಿರಿ ಈ ಯೋಜನೆಯನ್ನೆಲ್ಲಾ ಮಾಡುವುದಕ್ಕೆ ನಮ್ಮಲ್ಲಿ ಹಣ ಎಲ್ಲಿದೆ ಎಂದು ಕೇಳುತ್ತೀರಿ. ನಾವು ಹಿಂದೆ ಈ ವಿಷಯದಲ್ಲಿ ಎಷ್ಟೋ ಚರ್ಚೆ ಮಾಡಿದೆವು. ಆ ಚರ್ಚೆಯಿಂದ ಈವೊತ್ತಿನವರೆಗೂ ಏನೂ ಪ್ರಯೋಜನವಾಗಲಿಲ್ಲ. ಕಾವೇರಿ ನದಿ ಯೋಜನೆ, ಕೃಷ್ಣಾ ನದಿ ಯೋಜನೆ ಇವೆಲ್ಲಾ ಕಟ್ಟಬೇಕು. ಹಣ ಇಲ್ಲ ಎನ್ನುವುದನ್ನು ನಾನೂ ಒಪ್ಪುತ್ತೇನೆ. ಬರೇ ರೆವಿನ್ಯೂನಲ್ಲೇ ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ, ಈವೊತ್ತು ಇದಕ್ಕೆ ಹಣ ಬೇಕು, ಹಣವನ್ನು ಯಾವುದರಿಂದಲಾದರೂ ಹೆಚ್ಚಿಸಿ ಬೇರೆ ರೀತಿಯಲ್ಲಿ ತಂದು ಈ ಕೆಲಸವನ್ನು ಮಾಡಬೇಕು. ಎನ್ನುವುದನ್ನು ನಾನೂ ಒಪ್ಪುತ್ತೇನೆ. ಈವೊತ್ತು ನಾನು ಈ ಸರ್ಕಾರವನ್ನು ಕೇಳುತ್ತೇನೆ ಏನೆಂ ದರೆ ಈ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕು ಎಂದು ಆವಾಗ ಯೋಚನೆ ಮಾಡಿದಿರಲ್ಲಾ ಆಗ ಯಾವ ತರಹದಲ್ಲಿ ಇದಕ್ಕೆ ಹಣ ಒದಗಿಸಲಾಗಿತ್ತು ಎಂದು. ಮತ್ತು ಇದುವರೆಗೆ ನೀವು ಯಾವ ಯಾವ ಅಭಿವೃದ್ಧಿ ಕೆಲಸಕಾರ್ಯಗಳಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂದು ಮೇಲಿಂದ ಮೇಲೆ ಈ ಶಾಸನಸಭೆಯಲ್ಲಿ ಕೇಳುತ್ತಲೇ ಬಂದಿದ್ದೇನೆ. ಮತ್ತು ಸರ್ಕಾರದ ಹಣವನ್ನು ಪೋಲು ಮಾಡಿದ್ದೀರಿ ಎನ್ನುವ ಬಗ್ಗೆ ಅನೇಕ ಸಲ ನಾವು ಇದೇ ಸಭೆಯಲ್ಲಿ ಅವಿಶ್ವಾಸ ನಿರ್ಣಯನ್ನು ತಂದಿ ದ್ದೇವೆ. ನಾನು ಹೇಳುವುದು ಏನೆಂದರೆ ನೀವು ಯಾವ ಅಭಿವೃದ್ಧಿ ಕಾರ್ಯಗಳಿಗಾಗಿ ಹಣ ಖರ್ಚು ಮಾಡಬೇಕೋ ಅದಕ್ಕೆ ಖರ್ಚು ಮಾಡದೆ ರಾಜಕೀಯ ಯೋಜನೆಗಳಿಗೆ ಹಣ ಕೊಟ್ಟು ರಾಜ್ಯದಲ್ಲಿ ರಾಜಕೀಯವನ್ನು ತಯಾರು ಮಾಡಿದ್ದೀರಿ. ನೀವು ದೇಶದ ಅಭ್ಯುದಯದ ಕಡೆಗೆ ಹಣವನ್ನು ಖರ್ಚು ಮಾಡದೆ ಬೇರೆ ಕಡೆಗೆ ಖರ್ಚು ಮಾಡುವುದು ಸರಿಯಾದುದಲ್ಲ. ಈವೊತ್ತಿನ ದಿವಸ ಮುಳುಗಿ ಹೋಗುತ್ತಿರುವ ಮಿಲ್ಲುಗಳಿಗೆ, ನಷ್ಟವಾಗುತ್ತಿರುವ ಸಹಕಾರ ಸಂಘಗಳಿಗೆ ಇಂತಹ ರಾಜಕೀಯ ಯೋಜನೆಗಳಿಗೆ ಹಣ ಕೊಟ್ಟಿದ್ದೀರಿ. ಉದಾಹರಣೆಗೆ ಹೇಳುವುದಾದರೆ ಎಂ. ಎಸ್. ಕೆ. ಮಿಲ್, ಗುಲ್ಬರ್ಗ ಅವರಿಗೆ 2 ಕೋಟಿ ರೂಪಾಯಿ ಸಾಲ ಕೊಟ್ಟಿದ್ದೀರಿ, ಫಿಲಂ ಸ್ಟುಡಿಯೋ ಸ್ಥಾಪಿಸ ವುದಕ್ಕೆ ಲಕ್ಷಾಂತರ ರೂಪಾಯಿ ಕೊಡುತ್ತಾ ಇದ್ದೀರಿ, ಅಲ್ಲದೆ ನಿಮ್ಮ ಬಂಧುಗಳಿಗೋಸ್ಕರವಾಗಿ ಕಾಟನ್ ಮಿಲ್ ಇಟ್ಟುಕೊಂಡಿರತಕ್ಕಂಥ ಮಿಲ್ ಮಾಲೀಕರುಗಳಿಗೆ ಹೆಚ್ಚು ಹೆಚ್ಚು ಸಾಲವನ್ನು ಕೊಟ್ಟಿದ್ದೀರಿ. ಈ ರೀತಿ ಅನಾವಶ್ಯಕವಾದ ಕೆಲಸಗಳ ಮೇಲೆ ಹಣವನ್ನು ಕೊಡುತ್ತಾ ಬಂದಿದ್ದೀರಿ

(ಶ್ರೀ ಎಸ್. ಶಿವಪ್ಪ)

ಆದರೆ ನಮ್ಮ ದೇಶದ ಪ್ರಾಮುಖ್ಯವಾದ ಯೋಜನೆಗಳಿಗೆ ಹಣ ಇಲ್ಲ ಎಂದು ಹೇಳಿದರೆ ಮತ್ತೆಲ್ಲಿಂದ ಹಣ ಬರಬೇಕು ಎಂದು ನಾನು ಕೇಳುತ್ತೇನೆ. ಈವೊತ್ತಿನ ದಿವಸ ನಮ್ಮಲ್ಲಿ ಹಣ ಇಲ್ಲ, ಹಣವನ್ನು ಒದಗಿಸಿ ಎಂದು ಕೇಳುತ್ತೀರಿ, ಇರುವ ಹಣವನ್ನು ಅನಾವಶ್ಯಕವಾದ ಬಾಬುಗಳಿಗೆ ಖರ್ಚು ಮಾಡುತ್ತಿದ್ದೀರಿ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಭಾವನೆ ಒಂದೇ ಎಂದು ತಿಳಿಯಬೇಕಾದರೆ ಈವೊತ್ತಿನ ದಿವಸ ಕೇಂದ್ರ ಸರ್ಕಾರದವರು ಬ್ಯಾಂಕ್ ರಾಷ್ಟ್ರೀಕರಣ ಏನು ಮಾಡಿಕೊಂಡಿದ್ದಾರೆ ಅದರಲ್ಲಿ ದೇಶದಲ್ಲಿ ಎಲ್ಲೆಲ್ಲಿ ಅಭಿವೃದ್ಧಿ ಕಾರ್ಯಗಳು ಆಗಬೇಕೋ ಅಲ್ಲಿಗೆ ಸಹಾಯ ಮಾಡಬೇಕು. ಪ್ರಧಾನಿಗಳೂ ಕೂಡ ಅಭಿವೃದ್ಧಿ ಕಾರ್ಯಗಳನ್ನು ದೇಶದಲ್ಲೆಲ್ಲಾ ಮಾಡಬೇಕು ಎಂದು ಹೇಳಿದ್ದಾರೆ. ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದಲ್ಲೇ ಸೇರಿರುತ್ತದೆ ಎಂದು ತಿಳಿಯಬೇಕು. ಆದುದರಿಂದ ಈವೊತ್ತಿನ ದಿವಸ ಈ ರಾಜ್ಯ ಸರ್ಕಾರದ ಸತ್ವ ಪರೀಕ್ಷೆ ಆಗಬೇಕಾಗಿದೆ ಎಂದು ಹೇಳುತ್ತೇನೆ.

ಬ್ಯಾಂಕುಗಳ ರಾಷ್ಟ್ರೀಕರಣವಾದ ಮೇಲೆ ಅಭಿವೃದ್ಧಿ ಕಾರ್ಯಗಳಿಗೆ ಅದರಲ್ಲಿಯೂ ನೀರನ್ನು ಒದಗಿಸಿತಕ್ಕ, ರೈತನಿಗೆ ಮೂಲಭೂತವಾದ ಹಕ್ಕನ್ನು ಒದಗಿಸತಕ್ಕ ಕಾರ್ಯಕ್ಕೆ ಹಣದ ಕೊರತೆ ಇದೆಯೇ ಎನ್ನುವುದನ್ನು ಅರಿತುಕೊಳ್ಳಬೇಕಾಗಿದೆ. ಬ್ಯಾಂಕುಗಳ ರಾಷ್ಟ್ರೀಕರಣದಿಂದ ಪ್ರಯೋಜನ ಹೊಂದತಕ್ಕ ಶಕ್ತಿ ಈ ಸರ್ಕಾರಕ್ಕೆ ಇಲ್ಲವೆಂದರೆ, ಈ ಕಾಂಗ್ರೆಸ್ಸಿನ ಹೇಳಿಕೆ ಏನಿದೆ ಅದು ಬರೀ ಗಾಳಿಗೋಪುರ ಎಂದು ಹೇಳಬೇಕಾಗುತ್ತದೆ. ಬರೀ ಪ್ರಚಾರಕ್ಕಾಗಿ ರಾಷ್ಟ್ರೀಕರಣ ಮಾಡಲಾಗಿದೆ ಎಂದು ಹೇಳುವುದಾದರೆ ಅದಕ್ಕೆ ಅಡ್ಡಿ ಇಲ್ಲ. ರಾಷ್ಟ್ರೀಕರಣದಿಂದ ಹೇರಳವಾದಷ್ಟು ದುಡ್ಡಿದೆ ಎಂದು ಪ್ರಧಾನಿಯವರು ಹೇಳುತ್ತಿದ್ದಾರೆ. ರಾಷ್ಟ್ರೀಕರಣವಾದ ಬ್ಯಾಂಕುಗಳಿಂದ ಕೋಟಿಗಟ್ಟಲೆ ಹಣವನ್ನು ತರಬಹುದು. ಅದನ್ನು ಬಿಟ್ಟು ರೈತರಿಂದ ಅಡ್ವಾನ್ಸ್ ಕಂಟ್ರಿಬ್ಯೂಷನ್ ತೆಗೆದುಕೊಂಡು ಮಾಡುತ್ತೇವೆ ಎಂದರೆ ಸಾಧ್ಯವಾಗಲಾರದು. ಯಾವ ಪ್ರಾಜೆಕ್ಟ್ ಕಟ್ಟಬೇಕು ಎಂದು ಇದ್ದಾರೆ ಅಂಥ ಪ್ರಾಜೆಕ್ಟ್‌ಗಳನ್ನು ಈಡುಮಾಡಿ, ಅಡ ಮಾಡಿ, ಭೋಗ್ಯ ಮಾಡಿ ಆ ಪ್ರಾಜೆಕ್ಟ್‌ಗಳ ಆಧಾರದ ಮೇಲೆ ಅದಕ್ಕೆ ಬೇಕಾದ ಹಣವನ್ನು ತರಬಹುದಾಗಿತ್ತು. ಇದನ್ನು ಮಾಡುವುದಕ್ಕೆ ಸರ್ಕಾರಕ್ಕೆ ಮನಸ್ಸು ಬೇಕು. ದಿಟ್ಟತನ ಬೇಕು. ಸರ್ಕಾರ ಮನಸ್ಸು ಮಾಡಿದರೆ ರಾಷ್ಟ್ರೀಕರಣವಾಗಿರತಕ್ಕ ಬ್ಯಾಂಕುಗಳಿಂದ ಹಣವನ್ನು ಪಡೆದು ಕಾವೇರಿ ಕಣಿವೆಯಲ್ಲಿನ ಯೋಜನೆಗಳಿಗೆ ಆದ್ಯತೆಯನ್ನು ಕೊಡಬಹುದು, ಬೇರೆ ಕಡೆಗೆ ಗಮನ ಹರಿಸಬಾರದು ಎನ್ನುವುದು ಬಹಳ ಮುಖ್ಯವಾದುದು. 1974ನೇ ಇಸವಿಯೊಳಗಾಗಿ ಆ ನೀರಾವರಿ ಯೋಜನೆಗಳನ್ನು ಪೂರ್ಣ ಮಾಡಿ ಅದರ ಪ್ರಯೋಜನವನ್ನು ಹೊಂದಬೇಕು ಎನ್ನುವ ಕಾರಣದಿಂದ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದೆ ಎನ್ನುವುದನ್ನು ಸರ್ಕಾರಕ್ಕೆ ತಿಳಿಸಬೇಕು ಎಂಬುದೇ ನಿರ್ಣಯದ ಮುಖ್ಯ ಉದ್ದೇಶ. ಸರ್ಕಾರ ಕಾವೇರಿ ನದಿ ನೀರಿನ ಪೂರ್ಣ ಪ್ರಯೋಜನವನ್ನು ಪಡೆಯುವ ಕಾರ್ಯವನ್ನು ಮಾಡತಕ್ಕ ಜವಾಬ್ದಾರಿಯನ್ನು ಹೊಂದಿದೆ. ನಾವು 13 ವರ್ಷಗಳಿಂದ ಹೇಳುತ್ತಿದ್ದೇವೆ. ಅದು ಬರೀ ಪ್ರಲಾಪವಾಗಿದೆ. ಕಾವೇರಿ ನದಿ ನೀರಿನ ಪೂರ್ಣ ಪ್ರಯೋಜನವನ್ನು 1974ರ ಒಳಗಾಗಿ ಮಾಡುತ್ತಾರೆಯೇ ಇಲ್ಲವೇ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಚರ್ಚೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ಹೇಳಬೇಕು. ಮಂತ್ರಿಮಂಡಲ ಯುವಕೋತ್ಸಾಹದಿಂದ ಕಾರ್ಯವನ್ನು ಮಾಡುತ್ತದೆ ಎಂದು ಅವರು ಹೇಳಿದ್ದಾರೆ. ಅದು ಬಹಳ ಸಂತೋಷ. ಈ ಯುವಕೋತ್ಸಾಹ ಕಾರ್ಯದಕ್ಷತೆಯ ಮೇಲೆ ನಿಂತಿದೆಯೇ ಹೊರತು ಮಾತಿನಲ್ಲಿ ಪ್ರಚಾರಕ್ಕಾಗಿ ಹೇಳಿದರೆ ಅದಕ್ಕೆ ಜನ ಮರುಳಾಗುವುದಿಲ್ಲ. ಸರ್ಕಾರದ ಕಾರ್ಯದಕ್ಷತೆ ನೀರಾವರಿ ಯೋಜನೆಗಳನ್ನು ಪೂರಕ ಮಾಡುವುದರಲ್ಲಿ ತೋರಿಸಿದರೆ ಒಳ್ಳೆಯದು. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ನಾನು ನಿರೀಕ್ಷೆ ಮಾಡುತ್ತೇನೆ.

†ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಸಭಾಪತಿಗಳೇ, ಮಾನ್ಯ ಸಭೆಯ ವಿರೋಧಪಕ್ಷದ ನಾಯಕರಾದ ಶಿವಪ್ಪನವರು ಮಂಡಿಸಿರತಕ್ಕ ನಿರ್ಣಯಕ್ಕೆ ನಾನು ಒಂದು ತಿದ್ದುಪಡಿಯನ್ನು ಕಳಿಸಿದ್ದೇನೆ. ಅವರು ಸೂಚಿಸಿರತಕ್ಕ ನಿರ್ಣಯ ಕಾವೇರಿ ದಂಡೆಯಲ್ಲಿರುವ ನೀರಾವರಿ ಯೋಜನೆಗಳು ಕಾರ್ಯಗತವಾಗಬೇಕು, ಅದು 1974ರ ಒಳಗಾಗಿ ಆಗಬೇಕು ಎಂದು ಹೇಳಿ ಅವರು ಮುಖ್ಯವಾದ ನೀರಾವರಿ ಯೋಜನೆಗಳ ಹೆಸರನ್ನು ಕೂಡ ಪ್ರಸ್ತಾಪಿಸಿದ್ದಾರೆ. ಹಾರಂಗಿ, ಹೇಮಾವತಿ, ಕಬಿನಿ ಇತ್ಯಾದಿ ಪ್ರಾಮುಖ್ಯವಾದ ನೀರಾವರಿ ಯೋಜನೆಗಳು ಈ ರಾಜ್ಯದಲ್ಲಿ 1974ರ ಒಳಗಾಗಿ ಆಗಬೇಕು ಅದರಿಂದ ಈ ಭಾಗದ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕು ಎನ್ನುವ ಸದುದ್ದೇಶದಿಂದ ಅವರು ನಿರ್ಣಯವನ್ನು ತಂದಿದ್ದಾರೆಂದು ನಾನು ಭಾವಿಸುತ್ತೇನೆ ಅವರ ನಿರ್ಣಯಕ್ಕೆ ನನ್ನ ತಿದ್ದುಪಡಿಯ ಅಗತ್ಯವಾದರೂ ಏನು ಎನ್ನುವುದನ್ನು ಸಮರ್ಥಿಸತಕ್ಕದ್ದು ನನ್ನ ಕರ್ತವ್ಯವಾಗಿದೆ. ಅವರ ನಿರ್ಣಯದ ಜೊತೆಗೆ, ಅವರು ಹೇಳಿರತಕ್ಕ ಕಾಲಾವಧಿ, ಪ್ರಾಜೆಕ್ಟ್‌ಗಳ

ಹೆಸರುಗಳನ್ನು ನಾನು ಹೇಳಿದೆ, ಅದರಲ್ಲಿ ಈ ರೀತಿಯಾದ ತಿದ್ದುಪಡಿಯನ್ನು ನಾನು ಮಂಡಿಸಿದ್ದೇನೆ.

> "To take effective steps to speedily implement all the irrigation projects under the Cauvery basin in order to utilise our share of water by the end of Fourth Plan period as far as possible."

ಈ ತಿದ್ದುಪಡಿಯ ಉದ್ದೇಶವಾದರೂ ಕೂಡ ಕಾವೇರಿ ದಂಡೆಯ ಯೋಜನೆಗಳನ್ನು ಸರ್ಕಾರ ಕಳೆದ ಹತ್ತಾರು ವರ್ಷಗಳಿಂದಲೂ ಬಹಳ ತುರ್ತಾದ ಕಾರ್ಯಕ್ರಮದಲ್ಲಿ ಸೇರಿಸಿ ಸಾಕಷ್ಟು ಹಣವನ್ನು ಈ ಯೋಜನೆಗಳಿಗೆ ವೆಚ್ಚಮಾಡಿ ಇಲ್ಲಿಯ ತನಕ ಅರ್ಧ ಭಾಗದಷ್ಟು ಆಗಲೀ, ಮುಕ್ಕಾಲು ಭಾಗದಷ್ಟಾಗಲೀ ತಂದಿದ್ದರೆ ಚೆನ್ನಾಗಿತ್ತು ಎಂದು ಅಭಿಪ್ರಾಯಪಡುವವರಲ್ಲಿ ನಾನೂ ಒಬ್ಬ. ಕಾರಣವೇನೆಂದರೆ ಈ ಯೋಜನೆಗಳು ಕಾರ್ಯಗತವಾಗಬೇಕಾದರೆ ನಾವು ಒಂದೇ ದೃಷ್ಟಿಯಿಂದ ಸರ್ಕಾರ ಇತರ ಇಲಾಖೆಗಳಿಗೆ ಹಣವನ್ನು ಹಂಚುವ ಹಾಗೆ ನೀರಾವರಿ ಯೋಜನೆಗಳಿಗೆ ಕೂಡ ಒಂದು ನಿರ್ದಿಷ್ಟವಾದ ಕ್ರಮದಲ್ಲಿ ಹಣವನ್ನು ಹಂಚಿದರೆ ಈ ನೀರಾವರಿ ಯೋಜನೆಗಳನ್ನು ಪೂರೈಸುವುದು ಬಹಳ ಕಷ್ಟವಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಈ ಮಾನ್ಯ ಸಭೆಯಲ್ಲಿ ಹೇಳಿರುವಂತೆ, ಮೊನ್ನೆ ಕೂಡ ಈ ವಿಷಯದಲ್ಲಿ ಮಸೂದೆಯಮೇಲೆ ಮಾತನಾಡುತ್ತಾ ನಾನು ಸಾಕಷ್ಟು ಹೇಳಿದ್ದೇನೆ. ಬಹುಶಃ ಅದಕ್ಕಿಂತಲೂ ಉತ್ತಮವಾಗಿ ಹೇಳಲಾರೆ ಎಂದು ನನಗನ್ನಿಸುತ್ತದೆ. ತಮಗೆಲ್ಲ ಗೊತ್ತಿರುವ ಹಾಗೆ ನಮ್ಮ ರಾಜ್ಯದಲ್ಲಿ ನೀರಾವರಿ ಅಭಿವೃದ್ಧಿ ಬಹಳ ಕಡಮೆ ಪ್ರಮಾಣದಲ್ಲಿದೆ. ಕೃಷ್ಣಾ ನದಿ ಮೊದಲ್ಗೊಂಡು ಎಲ್ಲ ನೀರಿನ ಉಪಯೋಗವನ್ನು ಕೂಡ ನಾವು ಮಾಡಿಕೊಂಡರೆ ನಮ್ಮ ದೇಶದಲ್ಲಿ 25 ಪರ್ಸೆಂಟ್ ನೀರಾವರಿಯಾಗತಕ್ಕದ್ದು ಹೆಚ್ಚು. ಇಷ್ಟು ಹೆಚ್ಚು ಕಷ್ಟಸ್ಥಿತಿಯಲ್ಲಿರುವಂಥ ನಾವು ಯೋಜನೆಗಳಿಗೆ ಹೆಚ್ಚಿನ ರೀತಿಯಲ್ಲಿ ಹಣವನ್ನು ಒದಗಿಸಿಕೊಂಡು ಯೋಜನೆಗಳನ್ನು ಪೂರೈಸಬೇಕಾದ್ದು ನಮ್ಮ ಆದ್ಯ ಕರ್ತವ್ಯವಾಗಿತ್ತು. ಈ ಹೊತ್ತು ಏನಾಗಿದೆ ಎಂದರೆ, ಯಾರೇ ಸರ್ಕಾರದಲ್ಲಿ ಇರಲಿ, ಯಾವುದೇ ಪಕ್ಷ ಸರ್ಕಾರವನ್ನು ನಡೆಸಲಿ, 'ನುಂಗಿದ ತುತ್ತಿಗೆ ರುಚಿ ನೋಡದ ಹಾಗೆ' ಕಾಲ ಮಿಂಚಿ ಹೋಗಿದೆ. ಎಷ್ಟು ಪಶ್ಚಾತ್ತಾಪ ಪಟ್ಟರೂ, ಎಷ್ಟು ವ್ಯಥೆಪಟ್ಟರೂ, ಯಾವ ಟೀಕೆ ಮಾಡಿದರೂ, ಕಾಲ ವಾಪಸ್ಸು ಬರುವುದಿಲ್ಲ. ಕಾಲ ಗತಿಸಿ ಹೋಗಿದೆ. ಈಗಲಾದರೂ ಕೂಡ ತ್ವರಿತಗತಿಯಿಂದ ಏನು ನಿರ್ದಿಷ್ಟವಾದ ಅವಧಿ ಇದೆ, ಅಷ್ಟರೊಳಗೆ ಯೋಜನೆಗಳನ್ನು ಪೂರೈಸಬೇಕಾದ್ದು ನಮ್ಮ ಕರ್ತವ್ಯವಾಗಿದೆ. ಹೀಗೆ ಮಾತನಾಡುವಾಗ ಕೇವಲ ಸರ್ಕಾರದವರೇ ಇದರ ಹೊಣೆಯನ್ನು ಹೊರಬೇಕು ಎಂಬುದಾಗಿಲ್ಲ. ಈ ಪ್ರಶ್ನೆಯನ್ನು ನಾನು ಹಿಂದೆ ಅನೇಕ ಸಾರಿ ಎತ್ತಿ ಹೇಳಿರುವಂತೆ ಇದನ್ನು ಪಕ್ಷದ ಸಮಸ್ಯೆಯಾಗಿ ಭಾವನೆ ಮಾಡದೆ, ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ, ಎರಡೂವರೆ ಕೋಟಿ ಕನ್ನಡಿಗರ ಭವಿಷ್ಯದ ಪ್ರಶ್ನೆ, ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸತಕ್ಕ ಪ್ರಶ್ನೆ ಎಂದು ಭಾವಿಸಿ ಇದನ್ನು ಬಗೆಹರಿಸುವಾಗ ಎಲ್ಲರೂ ಸಹಕಾರ, ಸಹಾಯ, ಸಹಾನುಭೂತಿ, ಎಲ್ಲಕ್ಕಿಂತ ಹೆಚ್ಚಾಗಿ ಇದನ್ನು ಮಾಡಿ ಪೂರೈಸಬೇಕು ಎನ್ನುವಂಥ ದೃಢ ಸಂಕಲ್ಪದಿಂದ ಕೆಲಸ ಮಾಡಬೇಕು. ಇಂಗ್ಲೀಷಿನಲ್ಲಿ ಹೇಳುವಂತೆ where there is will there is a way ನಾವು ಮನಸ್ಸು ಮಾಡಬೇಕು ಮತ್ತು we have to tighten our belts ನಾವು ಹೊಟ್ಟೆ ಬಟ್ಟೆ ಕಟ್ಟಿ ಮುಂದಿನ ಪೀಳಿಗೆಯನ್ನು ರಕ್ಷಿಸತಕ್ಕ ಮತ್ತು ಆಹಾರ ಸಮಸ್ಯೆಯನ್ನು ಪೂರೈಸತಕ್ಕ ಸಮಸ್ಯೆಯನ್ನು ಬಗೆಹರಿಸತಕ್ಕ ಧೀರೋದಾತ್ತವಾದ ನಿಲುವನ್ನು ತಾಳಬೇಕು. ಆ ಕೆಲಸವನ್ನು ಮಾಡುವಾಗ ಯಾವುದಕ್ಕೂ ಹಿಂದು ಮುಂದು ನೋಡದೆ ಅನಾವಶ್ಯಕವಾದ ಖರ್ಚುಗಳನ್ನು ಕಡಮೆ ಮಾಡಿಕೊಂಡು ಯಾವ ಯಾವ ಬಾಬಿನಲ್ಲಿ ನಾವು ಎಷ್ಟೆಷ್ಟು ಹಣವನ್ನು ಉಳಿಸುವುದಕ್ಕೆ ಸಾಧ್ಯವೋ ಅಷ್ಟನ್ನು ಉಳಿಸಿ, ಆ ಹಣವನ್ನು ಸಹ ಈ ಯೋಜನೆಗಳನ್ನು ಪೂರ್ತಿ ಮಾಡುವುದಕ್ಕೆ ಖರ್ಚು ಮಾಡತಕ್ಕದು ಬಹಳ ಅವಶ್ಯಕ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಇದರ ಜೊತೆಗೆ ನಾವು ಬೇರೆ ಬೇರೆ ರೀತಿಯಲ್ಲಿ ಹಣವನ್ನು ಒದಗಿಸತಕ್ಕ ಸಾಹಸದ ಕೆಲಸವನ್ನು ಕೂಡ ಮಾಡಬೇಕು. ನಾವು ಇನ್ನೂ ಅರ್ಬನ್ ಪ್ರಾಪರ್ಟಿ ಟ್ಯಾಕ್ಸ್ ಹಾಕಿಲ್ಲ. ರೈತರಿಗೆ ಎರಡು ಸಾರಿ ಸರ್ಚಾರ್ಜ್ ಹಾಕಿ ವಸೂಲು ಮಾಡಿದೆವು. ಎಲ್ಲರಿಗೂ ಗೊತ್ತಿರುವ ಹಾಗೆ ಈಗಾಗಲೇ ಕಂದಾಯವನ್ನು ದ್ವಿಗುಣಗೊಳಿಸುವ ಮಸೂದೆಯನ್ನು ಈ ಮಾನ್ಯ ಸಭೆ ಒಪ್ಪಿಕೊಂಡಿದೆ. ಆದರೆ ಈ ಹೊತ್ತಿನ ದಿವಸ ಪಟ್ಟಣಗಳಲ್ಲಿ ವಾಸಮಾಡುವವರು ವಿಪುಲವಾದ ಹಣವನ್ನು ಗಳಿಸಿರುವುದಲ್ಲದೆ ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿರುತ್ತಾರೆ. ಅವರ ಮೇಲೆ ಯಾವ ವಿಧವಾದ ತೆರಿಗೆಯನ್ನು ಕೂಡ ಹಾಕಿಲ್ಲ. ಈ ಸಂದರ್ಭದಲ್ಲಿ ನಿನ್ನೆ ತಾನೇ ಮಾನ್ಯ ಪ್ರಧಾನ ಮಂತ್ರಿಯವರು ಬ್ಯಾಂಕುಗಳ ರಾಷ್ಟ್ರೀಕರಣವಾದ ಮೇಲೆ ಇನ್ನೊಂದು ಹೆಜ್ಜೆ ಮುಂದೆ ಹೋಗಿ, ಅರ್ಬನ್ ಪ್ರಾಪರ್ಟಿ ಇಷ್ಟೇ ಇರಬೇಕು ಅದಕ್ಕೆ ಇಷ್ಟೇ ಮಿತಿ ಇರಬೇಕು, ಹಣವನ್ನು ಗಳಿಸುವವರು

(ಶ್ರೀ ಡಿ. ಎಂ. ಸಿದ್ದಯ್ಯ)

ಇಷ್ಟೇ ಸಂಪಾದನೆ ಮಾಡಬೇಕು ಎನ್ನುವುದರ ಜೊತೆಗೆ ಹೆಚ್ಚು ಸಂಬಳ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಕೂಡ ಕಡಮೆಮಾಡಬೇಕು, ಇದು ಸಮಾಜವಾದದ ಕಡೆಗೆ ಹೋಗುವ ದಾರಿ ಎನ್ನುವ ಮಾತುಗಳನ್ನು ಹೇಳಿದ್ದಾರೆ. ಅದು ಇಡೀ ರಾಷ್ಟ್ರವೇ ಒಪ್ಪುವಂಥ ಮಾತಾಗಿದೆ. ರಾಷ್ಟ್ರೀಕರಣದ ಮುಂದಿನ ಹೆಜ್ಜೆಯಾದರೂ ಕೂಡ ಇದೇ ಆಗಿದೆ ಎನ್ನುವುದನ್ನು ನಾನು ಈ ಮಾನ್ಯ ಸಭೆಯಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವಿವಿಧ ರೀತಿಯಲ್ಲಿ ಹಣವನ್ನು ಯಾರಾದರೂ ಗಳಿಸಿ, ಬ್ಲಾಕ್‌ಮನಿ ಬೇಕಾದಷ್ಟು ಗಳಿಸಿ, ಸರ್ಕಾರಕ್ಕೆ ವರಮಾನ ತೆರಿಗೆಯನ್ನೂ ಕೊಡದೆ ಹಣವನ್ನು ಇಟ್ಟುಕೊಂಡಿದ್ದಾರೆ. ಇಂಥದನ್ನು ಪಡೆದುಕೊಂಡು ಅದರ ಪ್ರಯೋಜನವನ್ನು ಜನಗಳಿಗೆ ಮಾಡಿಕೊಡಬೇಕು. ಮಾರಾಟ ತೆರಿಗೆಯಿಂದ ನಮಗೆ ಸಾಕಷ್ಟು ಹಣ ಬರುತ್ತಿದ್ದರೂ ಕೂಡ ಇನ್ನೂ ಬಾರದೆ ಇರತಕ್ಕ ಎಷ್ಟೋ ಹಣವಿದೆ. ಅದನ್ನೆಲ್ಲ ಬರವಮಾಡಿಕೊಂಡು, ಉತ್ಪತ್ತಿಯನ್ನು ಜಾಸ್ತಿ ಮಾಡಿ ನೀರಾವರಿ ಯೋಜನೆಗಳಿಗೆ ಖರ್ಚು ಮಾಡುವುದಕ್ಕೆ ನಾವು ಉಪಯೋಗಮಾಡಿಕೊಳ್ಳಬೇಕು.

4-00 P.M.

ಇದೆಲ್ಲದರ ಜೊತೆಗೆ ಕೇಂದ್ರ ಸರಕಾರ ನಮ್ಮ ವಿಷಯದಲ್ಲಿ ತಾತ್ಸಾರ ಭಾವನೆಯಿಂದ ವರ್ತಿಸುತ್ತಿದೆ ಎಂಬ ಅಭಿಪ್ರಾಯವಿದೆ, ಅದಕ್ಕೆ ಅವಕಾಶವಿಲ್ಲದಂತೆ ನೋಡಿಕೊಳ್ಳುವುದು ಆವಶ್ಯಕ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರುವುದಾದರೆ, ಶ್ರೀ ಮಲ್ಯರವರು ಮಂಗಳೂರಿನ ಅಭಿವೃದ್ಧಿಗಾಗಿ ಬಹಳ ಸಾಹಸದಿಂದ ಕೆಲಸಮಾಡಿದ್ದಾರೆ, ಕೇಂದ್ರ ಸರಕಾರದಿಂದ ಸುಮಾರು ನೂರು ಕೋಟಿ ರೂಪಾಯಿಗಳ ಸಹಾಯವನ್ನು ಪಡೆದಿದ್ದಾರೆ. ಅನೇಕ ಸದಸ್ಯರಿಗೆ ಗೊತ್ತಿರುವಂತೆ ಅವರು ಬಹಳ ತಜ್ಞರು, ಉಪಾಯಗಾರರು ಮತ್ತು ಬಹಳ ಜ್ಞಾನಿಗಳು. ನಮ್ಮ ರಾಜ್ಯದವರಲ್ಲಿ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ನಮಗೆ ದೊರೆಯಬೇಕಾದ ಸಹಾಯ ಪಡೆಯಲು ಸಾಕಾದಷ್ಟು ಜಾಣತನ ಪ್ರದರ್ಶಿಸಬೇಕು. ಇಂದು ಕೇಂದ್ರ ಸರಕಾರವಿರುವುದು ಮೈಸೂರು ರಾಜ್ಯವನ್ನು ಬಿಟ್ಟು ಉಳಿದ ರಾಜ್ಯಗಳ ಅಭಿವೃದ್ಧಿ ಮಾಡುವುದಕ್ಕಲ್ಲ. ಮೈಸೂರು ಐದನೆಯ ಫೈನಾನ್ಸ್ ಕಮಿಷನ್ನಿನ ಭರವಸೆಯಮೇಲೆ ಕೆಲಸಮಾಡಿತು. ಅದು ಹೆಚ್ಚು ನೆರವು ದೊರೆಯುವಂತೆ ನಮ್ಮ ರಾಜ್ಯದ ಬಗ್ಗೆ ಸಲಹೆಮಾಡಬಹುದು ಎಂಬ ಆಸೆ ಇತ್ತು. ಆದರೆ ಹಾಗೆ ಆಗದೆ ನಮಗೆ 18 ಕೋಟಿ ರೂಪಾಯಿಗಳಷ್ಟು ಕಡಮೆ ಸಹಾಯಧನ ದೊರೆಯಲಿದೆ. ಮುಖ್ಯ ಮಂತ್ರಿಗಳು ಈ ಸಂಬಂಧವಲ್ಲಿ ಪ್ರಧಾನಿಗಳಲ್ಲಿ ಬಿನ್ನಹ ಮಾಡಿದ್ದಾರೆ, ಮತ್ತು ಪ್ರಧಾನಿ ಅವರು ಆಲೋಚನೆ ಮಾಡುವುದಾಗಿ ಹೇಳಿದ್ದಾರೆಂದು ತಿಳಿಯಪಡಿಸಲಾಗಿದೆ. ಇದು ಸಾಲದು. ಜನರ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಸಾಕಾದಷ್ಟು ಸಹಾಯವನ್ನು ಪಡೆಯಲು ನಾವು ಜಾಣತನವನ್ನು ತೋರಿಸಬೇಕು, ಇಲ್ಲದಿದ್ದರೆ ಕಷ್ಟವಾಗುತ್ತದೆ. ಮತ್ತು 1974 ರೊಳಗಾಗಿ ಕಾವೇರಿ ಬೇಸಿನ್‌ನ ಯೋಜನೆಗಳನ್ನು ಪೂರ್ಣಮಾಡಲು ಕಷ್ಟವಾಗುವುದು. ಕೇಂದ್ರ ಸರಕಾರ ನೆರವಿಗೆ ಬಂದ ಹೊರತು ನಾವು ನಮ್ಮ ಯೋಜನೆಗಳನ್ನು ಪೂರ್ಣ ಮಾಡುವುದು ಕಷ್ಟ. ಹತ್ತಾರು ವರ್ಷಗಳಿಂದ ಮುಂದಕ್ಕೆ ಹಾಕಲಾಗಿರುವ ಯೋಜನೆಗಳನ್ನು ನಾಲ್ಕು ವರ್ಷಗಳಲ್ಲಿ ಪೂರೈಸಬೇಕೆಂದರೆ ಕಷ್ಟವಾಗಬಹುದು, ಉದಾಸೀನದಿಂದ ಅಥವ ತಾತ್ಸಾರ ಭಾವನೆಯಿಂದ ಮುಂದಕ್ಕೆ ಹಾಕಿರಬಹುದು, ಈಗ ಇದಕ್ಕಾಗಿ ಕೇಂದ್ರ ಸರಕಾರದ ಸಹಾಯವನ್ನು ಹೇಗಾದರೂ ಮಾಡಿ ಪಡೆಯಲೇಬೇಕಾಗಿದೆ, ನಮ್ಮ ಪಾರ್ಲಿಮೆಂಟ್ ಸದಸ್ಯರಿದ್ದಾರೆ, ಮೈಸೂರು ರಾಜ್ಯದ ಹಿತ ಸಾಧಿಸಲು ದೇಶಪ್ರೇಮವುಳ್ಳ ಅನೇಕರು ಲೋಕಸಭೆಯ ಸದಸ್ಯರಿದ್ದಾರೆ. ಅವರ ಮೂಲಕ ಮತ್ತು ನಮ್ಮ ಸರಕಾರದವರು ದಕ್ಷತೆ ತೋರಿಸಿ ವಿಶೇಷ ಪ್ರಯತ್ನ ನಡೆಸಬೇಕು. ಏಕೆಂದರೆ ನಮಗೆ ಇಂದು ಹಣದ ಕೊರತೆ ಅಗಾಧವಾಗಿದೆ. ಇರುವ ಕಾಲಾವಧಿಯಲ್ಲಿ ನಮ್ಮ ಭಾಗದ ಕಾವೇರಿ ನೀರನ್ನು ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಕಷ್ಟವಾಗಬಹುದು. ಈಗ ನೂರು ಕೋಟಿ ರೂಪಾಯಿಗಳನ್ನು ತಂದರೂ ಬೇಗ ಪ್ರಾಜೆಕ್ಟುಗಳ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ, ಮಹತ್ತರವಾದ ಕಾರ್ಯ ಇದು. ಆದುದರಿಂದ ದೂರದರ್ಶಿತ್ವ ಬಹಳ ಅಗತ್ಯವಾಗಿದೆ.

ನನ್ನ ತಿಳುವಳಿಕೆಯಲ್ಲಿ ಸರಕಾರದವರು ಬಹಳ ಜಾಗ್ರತೆಯಾಗಿ ನೀರಾವರಿ ಕೆಲಸಗಳನ್ನು ಮಾಡಬೇಕು ಮತ್ತು ನಾಲ್ಕನೆಯ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ ಪೂರ್ಣ ಮಾಡಬೇಕು ಎಂದು ತಿಳಿಸಿದ್ದೇನೆ. 74 ರೊಳಗೆ ಆಗದಿರಬಹುದು, ನಾಲ್ಕನೆಯ ಯೋಜನೆಯೊಳಗೆ ಮುಕ್ಕಾಲು ಭಾಗವಾದರೂ ಆದರೆ ಪ್ರಾಜೆಕ್ಟುಗಳನ್ನು ಮುಂದುವರೆಸಲು ನಮಗೆ ಹಕ್ಕು ಬರುವುದು. ಉದಾಹರಣೆಗೆ ನಾಗಾರ್ಜುನಸಾಗರದ ಕೆಲಸವೆಲ್ಲಾ ಪೂರ್ಣವಾಗಿದೆ, ಈಗ ಅರ್ಬಿಟ್ರೇಷನ್ನಿಗೆ

ಹೋಗಿದೆ, ನಾಳೆ ಏನಾದರೂ ತೀರ್ಮಾನವಾಗಬಹುದು. ಆದರೆ 120 ಕೋಟಿ ರೂಪಾಯಿಗಳನ್ನು ಅದಕ್ಕೆ ಖರ್ಚುಮಾಡಿರುವವರು ಸುಮ್ಮನಿರುವುದಿಲ್ಲ. ಸುಮಾರು 30 ಲಕ್ಷ ಎಕರೆ ನೀರಾವರಿಗೆ ಅವರು ಅವಕಾಶಮಾಡಿದ್ದಾರೆ. ಹೇಗೆ ಅವರು ಮಾಡಿದರೆಂಬುದನ್ನು ನೋಡಬೇಕು. ಸಾಲ ತೆಗೆದುಕೊಂಡರು, ಕೇಂದ್ರ ಸರಕಾರದಿಂದ ಸಾಲ ಪಡೆದರು, ಉತ್ಪತ್ತಿ ಬಾರದಿದ್ದರೂ ಕೆಲಸಕಾರ್ಯಗಳನ್ನು ಕೆಲವು ವರ್ಷಗಳ ಕಾಲ ರದ್ದುಮಾಡಿ ಇಂದು ನಾಗಾರ್ಜುನಸಾಗರವನ್ನು ನಿರ್ಮಿಸಿದ್ದಾರೆ, ಇನ್ನು ಮುಂದೆ ಅದರಿಂದ ಉತ್ಪತ್ತಿ ಬರುವುದು; ಹಾಗೆ ನಾವೂ ಸಹ ಮಾಡಲು ಮನಸ್ಸು ಮಾಡಬೇಕು. ವಿವಿಧ ರೀತಿಯಲ್ಲಿ ಹಣ ಒದಗಿಸಬೇಕು ಹಾಗೆ ಮಾಡಿ ನಾಲ್ಕನೆಯ ಯೋಜನೆಯೊಳಗೆ ಬಹುಮಟ್ಟಿಗೆ ಕೆಲಸ ಪೂರ್ಣಮಾಡಬೇಕು ಎಂದು ವಿಜ್ಞಾಪಿಸಿಕೊಳ್ಳುತ್ತೇನೆ.

ಕೊನೆಯದಾಗಿ ಮತ್ತೊಂದು ಮುಖ್ಯವಿಷಯ, ಅದು ಅಡ್ವಾನ್ಸ್ ಕಾಂಟ್ರಿಬ್ಯೂಷನ್ನಿಗೆ ಸಂಬಂಧಪಟ್ಟಿದೆ. ವಿರೋಧ ಪಕ್ಷದವರೇಕೆ ಈ ಕಾಂಟ್ರಿಬ್ಯೂಷನ್ನಿಗೆ ವಿರೋಧಿಸಿದರೋ ಅರ್ಥವಾಗುವುದಿಲ್ಲ. ಇಂದು ಸರಕಾರಿ ಯೋಜನೆಗಳಿಗೆ ಹಣ ಸಾಲದಿರುವಾಗ ಜನರೇ ಮುಂದೆ ಬಂದು ಕೊಡಲು ಸಿದ್ಧರಾಗಿರುವಾಗ ಏಕೆ ತೆಗೆದುಕೊಳ್ಳಬಾರದು? ಜನರ ಹತ್ತಿರ ಹಣವಿಲ್ಲ. ಅವರು ಎಲ್ಲಿಂದ ತರಬೇಕು ಎಂದು ಹೇಳಬಹುದು. ಈಗ ಬ್ಯಾಂಕುಗಳ ರಾಷ್ಟ್ರೀಕರಣವಾಗಿದೆ. ಶ್ರೀ ಶಿವಪ್ಪನವರು ಹೇಳಿದ ಹಾಗೆ ರೈತರ ಅಭಿವೃದ್ಧಿಗೆ, ಕೈಗಾರಿಕಾಭಿವೃದ್ಧಿ ಮುಂತಾದುವಕ್ಕೆ ಬ್ಯಾಂಕುಗಳಿಂದ ಹಣ ದೊರೆಯಬಹುದು, ಯಾವ ರಾಜ್ಯಗಳಲ್ಲಿ ಕಡಮೆ ಖರ್ಚುಮಾಡಲಾಗಿದೆ ಅಂಥ ರಾಜ್ಯಗಳಿಗೆ ಖರ್ಚುಮಾಡಲು ಬ್ಯಾಂಕುಗಳ ಹಣವನ್ನು ವಿನಿಯೋಗಮಾಡಬೇಕು. ಇದು ಎಲ್ಲರ ಅಭಿಪ್ರಾಯ. ಪ್ರಧಾನಿಯವರು ಈ ವಿಷಯದಲ್ಲಿ ಆಲೋಚನೆ ಮಾಡುತ್ತಿದ್ದಾರೆ. ರೈತರ ಜಮೀನನ್ನು ಸೆಕ್ಯೂರಿಟಿ ಕೊಟ್ಟರೆ ಅದರ ಆಧಾರದಮೇಲೆ ಬ್ಯಾಂಕುಗಳು ಹಣ ಕೊಡುತ್ತವೆ. ಸೆಕ್ಯೂರಿಟಿ ಕೊಟ್ಟರೆ ಜಮೀನು ಪರಭಾರೆಯಾಗುವುದಿಲ್ಲ, ಜಮೀನು ರೈತರಿಗೇ ಉಳಿಯುವುದು, ಅವರು ಉಳುಮೆ ಮಾಡಬಹುದು. ಸರಕಾರ ಜನರ ಪ್ರತಿನಿಧಿ, ರೈತರ ಆಸ್ತಿಪಾಸ್ತಿಯನ್ನು ಈಡುಮಾಡಿದರೂ ಅದು ಜನರ ಕೈಲೇ ಇರುವುದು. ಜಮೀನು ಹೊಂದಿರುವ ರೈತರಿಗೆ ತೊಂದರೆಯಾಗುವುದಿಲ್ಲ. ಇಷ್ಟೇ ಅಲ್ಲದೆ ಕೇಂದ್ರ ಸರಕಾರದೊಂದಿಗೆ ಮಾತನಾಡಿ ಸರಕಾರ ಮುಂದೆ ಬಂದು ಸೆಕ್ಯೂರಿಟಿ ಕೊಟ್ಟರೆ ಹಣ ದೊರೆಯುವುದು.

ಇಷ್ಟು ದಿವಸ ಹಣ ಕೊಡುತ್ತಾ ಇದ್ದುದು ಬಂಡವಾಳ ಇದೆಯೇ, ಅವನ ಥಡೂತಿ ಏನು ಎಂಬುದನ್ನು ನೋಡಿ ಕೊಡುತ್ತಾ ಇದ್ದರು. ದೊಡ್ಡ ಮನುಷ್ಯರು ಲಕ್ಷಗಟ್ಟಲೆ ಹಣ ತೆಗೆದುಕೊಂಡು ಅದರಿಂದ ಸಂಪಾದನೆ ಮಾಡಿ ಶ್ರೀಮಂತರಾಗಿದ್ದಾರೆ. ಇವತ್ತು ಹಣ ಕೊಡಬೇಕಾಗಿದ್ದರೆ ಯಾವ ವಿಚಾರಕ್ಕಾಗಿ ಹಣ ಕೇಳುತ್ತಾನೆ, ವ್ಯಾಪಾರ ಮಾಡುವುದಕ್ಕಾಗಿ ಕೇಳುತ್ತಾನೆಯೇ, ಕೈಗಾರಿಕೆಯನ್ನು ಅಭಿವೃದ್ಧಿ ಮಾಡುವುದಕ್ಕೆ ಕೇಳುತ್ತಾನೆಯೇ ಎಂಬ ವಿಷಯದ ಯೋಗ್ಯತೆಯ ಮೇಲೆ ಹಣ ಕೊಡುವುದು ಎಂದು ನಮ್ಮ ಪ್ರಧಾನಿಯವರು ಹೇಳಿದ್ದಾರೆ. ರಾಷ್ಟ್ರೀಕರಣದ ತತ್ವವೂ ಕೂಡ ಅದೇ ಆಗಿದೆ. ಮನುಷ್ಯನ ಥಡೂತಿಯ ಮೇಲೆ ಹಣ ಕೊಡುವುದು ಮಾಯವಾಗಿದೆ. ಇದರಿಂದ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸುವುದಕ್ಕೆ ಬ್ಯಾಂಕಿನಿಂದ ಹೆಚ್ಚಿನ ಸಹಾಯವಾಗುತ್ತದೆ. ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಅಂತ ಅಂದಮಾತ್ರಕ್ಕೆ ರೈತರಿಂದ ಸುಲಿಗೆ ಮಾಡುವುದು ಯಾವ ನ್ಯಾಯ ಎಂದು ಮಾನ್ಯ ಸದಸ್ಯರು ಮೇಲಿಂದ ಮೇಲೆ ಹೇಳಿದ್ದಾರೆ. ಸುಲಿಗೆ ಮಾಡುವ ಪ್ರಶ್ನೆಯೇ ಇದರಲ್ಲಿ ಬರುವುದಿಲ್ಲ ಎಂದು ನಾನಾದರೂ ಕೂಡ ಮಾನ್ಯ ಅಧ್ಯಕ್ಷರ ಮೂಲಕ ವಿನಂತಿಸಿಕೊಳ್ಳುತ್ತಾ ಇದ್ದೇನೆ. ಈ ಪ್ರಾಜೆಕ್ಟುಗಳು 1974 ರೊಳಗೆ ಆಗಬೇಕೆಂಬ ವಿಷಯದಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಆದರೆ ನಾನು ಮೊದಲೇ ತಮ್ಮಲ್ಲಿ ಬಿನ್ನೈಸಿಕೊಂಡ ಹಾಗೆ ಹತ್ತಾರು ವರ್ಷಗಳಲ್ಲಿ ಮಾಡತಕ್ಕ ಕೆಲಸವನ್ನು 5–6 ವರ್ಷಗಳಲ್ಲಿ ಮಾಡತಕ್ಕ ಒಂದು ದೊಡ್ಡ ಜವಾಬ್ದಾರಿಯನ್ನು ಸರ್ಕಾರ ಹೊತ್ತಿರುವುದರಿಂದ ಹಿಂದೆ ಈ ಮಾನ್ಯ ಸಭೆಯಲ್ಲಿ ನಾನು ಹೇಳಿದ ಹಾಗೆ ಇದನ್ನು ಒಂದು ವಾರ್ ಫುಟಿಂಗ್‌ನಲ್ಲಿ ಎಂದರೆ ಯುದ್ಧಮಾಡುವಾಗ ಹೇಗೆ ಸರ್ವವನ್ನೂ ಮರೆತು ಸ್ವಾತಂತ್ರವನ್ನು ಉಳಿಸಿಕೊಳ್ಳುವುದಕ್ಕೆ ಹೋರಾಟ ಮಾಡುತ್ತೇವೆಯೋ ಅದೇ ರೀತಿ ಬಹುಶಃ ಅದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಈ ನೀರಾವರಿ ಯೋಜನೆಗಳನ್ನು ಕಟ್ಟುವುದಕ್ಕೆ ಸರ್ವಸಾಹಸವನ್ನೂ ನಾವು ಮಾಡಬೇಕಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾರೀಖು 8-4 66 ರಲ್ಲಿ ಶ್ರೀಮಾನ್ ದೇವೇಗೌಡರು 4ನೇ ಯೋಜನೆಯ ಒಳಗೆ ಮೈಸೂರು ಸರ್ಕಾರ ಕಾವೇರಿ ಕಣಿವೆಯಲ್ಲಿ ಎಲ್ಲಾ ಪ್ರಾಜೆಕ್ಟುಗಳನ್ನೂ ಪೂರೈಸುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡತಕ್ಕದ್ದು ಅಂತ ಹೇಳಿ ನಿರ್ಣಯ ತಂದಿದ್ದರು, ಅದನ್ನು ಈ ಸಭೆ ಸರ್ವಾನುಮತದಿಂದ ಅಂಗೀಕಾರ ಮಾಡಿತ್ತು. ಇವತ್ತಿನವರೆಗೂ ಅದನ್ನು ಪರಿಪಾಲನೆ ಮಾಡುವುದಕ್ಕೆ ಏನೇನು ಮಾಡಿದ್ದೀರಿ ಎಂಬುದನ್ನು ವಿಶದೀಕರಿಸಿದರೆ ಉತ್ತಮ.

ಶ್ರೀ ಡಿ. ಎಂ. ಸಿದ್ದಯ್ಯ.—1956ರ ನಂತರ ಕನ್ನಡ ನಾಡು ನಿರ್ಮಾಣವಾದವೇಲೆ ಸರ್ಕಾರದಲ್ಲಿ ಯಾರೇ ಅಧಿಕಾರದಲ್ಲಿ ಇರಲಿ. ಅವರೆಲ್ಲರೂ ಕೂಡ ಇವತ್ತು ಎಷ್ಟು ಶ್ರದ್ಧೆಯನ್ನು ತೋರಿಸುತ್ತಾ ಇದ್ದಾರೋ ಅಷ್ಟು ಶ್ರದ್ಧೆಯನ್ನು ಅಂದಿನಿಂದಲೇ ತೋರಿಸುತ್ತಾ ಬಂದಿದ್ದ ಪಕ್ಷದಲ್ಲಿ ಇವತ್ತು ಈ ಕಾವೇರಿ ಬೇಸಿನ್ ಒಂದು ಮಹತ್ವದ ಪ್ರಶ್ನೆಯಾಗಿ ಪರಿಣಮಿಸುತ್ತಲೇ ಇರಲಿಲ್ಲ. ಬಹುಶಃ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ ಮಾತನಾಡುವಷ್ಟು ಸುಲಭವಾಗಿ ಅಧಿಕಾರಕ್ಕೆ ಬಂದ ಮೇಲೆ ಮಾತನಾಡಲು ಸಾಧ್ಯವಾಗಲಾರದು ಎಂದು ನನಗೆ ಅನಿಸುತ್ತದೆ. ಇದರಲ್ಲಿ ಹೆಚ್ಚು ರಾಜಕೀಯ ಬರುತ್ತದೆ. ಯೋಜನೆಗಳನ್ನು ಮಾಡುವಾಗ ಅನೇಕ ತರಹದ ಎಡರುತೊಡರುಗಳು ಬರುತ್ತವೆ, ಯಾವುದಾದರೂ ಒಂದು ಜಾಗ ತೀರ್ಮಾನವಾದಾಗ ಅಲ್ಲಿ ಕಟ್ಟುವುದು ಬೇಡಿ ಇಲ್ಲಿ ಕಟ್ಟಿ, ಇಲ್ಲಿ ಕಟ್ಟುವುದು ಬೇಡ ಅಲ್ಲಿ ಕಟ್ಟಿ ಅಂತ ಹೇಳಿ ಹತ್ತಾರು ಸಾರಿ ಬದಲಾವಣೆ ಮಾಡುವುದು, ಹೀಗಾಗಿ ರಾಜಕೀಯದಲ್ಲೇ ಬಹುಪಾಲು ಸಮಯ ಕಳೆದುಹೋಗುತ್ತದೆ. ಆದ್ದರಿಂದ ತಮ್ಮ ಮೂಲಕ ಮಾನ್ಯ ಸದಸ್ಯರನ್ನು ಕೇಳುತ್ತೇನೆ, ಅಧಿಕಾರದಲ್ಲಿದ್ದವರು 1956 ರಿಂದ ಈ ಕೆಲಸವನ್ನು ಏಕೆ ಮಾಡಲಿಲ್ಲ? ಎಲ್ಲರೂ ಕೂಡ ಅಲ್ಪಸ್ವಲ್ಪವಾಗಿ ಈ ಪಾಪದ ಹೊರೆಯನ್ನು ಹೊರಿಸಿದ್ದರಿಂದ ಇವತ್ತು ಇಂತಹ ಒಂದು ಪರಿಸ್ಥಿತಿ ಉಂಟಾಗಿದೆ. ಎಲ್ಲರೂ ಕೂಡ ಸಹಕರಿಸಿ ಈ ಯೋಜನೆಗಳನ್ನು ತ್ವರಿತಗತಿಯಿಂದ ಮಾಡದೇ ಇದ್ದುದರ ಪರಿಣಾಮವಾಗಿ ಈ ಒಂದು ಸಮಸ್ಯೆ ಇವತ್ತು ಜಟಿಲವಾಗಿದೆ. ಇವತ್ತಿನ ದಿವಸ ಕೇಳುತ್ತೇನೆ, ಆಂಧ್ರದವರು ಹತ್ತು ವರ್ಷದಲ್ಲಿ ನಾಗಾರ್ಜುನ ಸಾಗರ ಕಟ್ಟಬೇಕಾದರೆ ಅವರಿಗೆ 130 ಕೋಟಿ ರೂಪಾಯಿ ಎಲ್ಲಿಂದ ಬಂತು ? ಆಕಾಶದಿಂದ ಬಂತೇ ? ಅವರಾದರೂ ಕೂಡ ಸರ್ವಪ್ರಯತ್ನ ಮಾಡಿ ಅಧಿಕಾರ ಉಪಯೋಗಿಸಿ ಇವತ್ತಿನ ದಿವಸ ಅಗ್ರಿಮೆಂಟ್ ಪ್ರಕಾರ ಯಾವ ಯಾವ ಯೋಜನೆಗಳನ್ನು ಮಾಡಬೇಕೋ ಅವುಗಳನ್ನೆಲ್ಲಾ ಮಾಡಿಕೊಂಡಿದ್ದಾರೆ. ನಾವೆಲ್ಲರೂ ಕೂಡ ನಮ್ಮ ಕರ್ತವ್ಯವನ್ನು ಸಂಪೂರ್ಣವಾಗಿ ಮಾಡಿದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ದುರ್ದೈವದಿಂದ ಏನಾಗಿದೆ ? ಆದ್ದರಿಂದ ಮಾನ್ಯ ಸದಸ್ಯರಿಗೆ ನಾನು ಹೇಳುವುದು ಇಷ್ಟೆ. ಗಾಜಿನ ಮನೆಯಲ್ಲಿರುವವರು ಕಲ್ಲು ಎಸೆಯಬಾರದು. ಎಸೆದರೆ ಅವರ ಮನೆಯೇ ಒಡೆದು ಹೋಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ ಎಂಬುದನ್ನು ಬಹಳ ಕಳಕಳಿಯಿಂದ ಬಿನ್ನೈಸುತ್ತಾ ಇದ್ದೇನೆ. ಆದ್ದರಿಂದ ನಮ್ಮ ರಾಜ್ಯ ಸರ್ಕಾರದಿಂದ ಎಷ್ಟು ಮಟ್ಟಿಗೆ ಹಣವನ್ನು ಒದಗಿಸಿಕೊಳ್ಳಬಹುದೋ, ಕೇಂದ್ರ ಸರ್ಕಾರದಿಂದ ಎಷ್ಟು ಮಟ್ಟಿಗೆ ಹಣ ಒದಗಿಸಿಕೊಳ್ಳಬಹುದೋ ಅದನ್ನು ಒದಗಿಸಿಕೊಂಡು, ಮತ್ತು ಯಾರು ಶ್ರೀಮಂತರಿದ್ದಾರೋ ಅವರಿಂದ ಅರ್ಬನ್ ಪ್ರಾಪರ್ಟಿ ಟ್ಯಾಕ್ಸ್ ಮುಖಾಂತರ ಹಣವನ್ನು ಜೋಡಿಸಿಕೊಂಡು ಆಂಧ್ರ ಸರ್ಕಾರದವರ ಹಾಗೆ ನಮ್ಮ ಯೋಜನೆಗಳನ್ನು ಆದಷ್ಟು ಜಾಗ್ರತೆ ಪೂರೈಸುವುದಕ್ಕೆ ಪ್ರಯತ್ನ ಮಾಡಬೇಕು. ಹಾರಂಗಿಯಿಂದ ನೂರಾರು ಜನ ರೈತರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಎಂದು ಬಂದಿದ್ದಾರೆ, ಕೊಡುವುದಕ್ಕೆ ಸಿದ್ಧವಾಗಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಿವೇದಿಸಿಕೊಂಡಿದ್ದಾರೆ. ಈ ಸಮಸ್ಯೆ ಎಷ್ಟು ಬೃಹದಾಕಾರವಾಗಿದೆ ಎಂದರೆ ರೈತರಲ್ಲಿ ಹಣ ಇಲ್ಲದೇ ಇದ್ದರೂ ಕೂಡ ಮುಂದೆ ಕ್ಷಾಮಡಾಮರಗಳಿಗೆ ತುತ್ತಾಗಿ ತಮ್ಮ ಮುಂದಿನ ಪೀಳಿಗೆ ಕಷ್ಟಕ್ಕೊಳಗಾಗುವುದರಿಂದ ಹೊಟ್ಟೆ ಬಟ್ಟೆ ಕಟ್ಟಿಯಾದರೂ ಈ ಯೋಜನೆಗಳನ್ನು ಕಟ್ಟುವುದಕ್ಕೆ ಹಣ ಕೊಡುವುದಕ್ಕೆ ರೈತರು ಸಿದ್ಧವಾಗಿದ್ದಾರೆ ಎಂದಮೇಲೆ ಈ ಸಮಸ್ಯೆಯ ಪ್ರಾಮುಖ್ಯತೆ ಎಷ್ಟು ದೊಡ್ಡದಾಗಿದೆ ಎಂಬುದು ಮಾನ್ಯ ಸಭೆಗೆ ಮತ್ತು ಸರ್ಕಾರಕ್ಕೆ ಇವತ್ತಿನ ದಿವಸ ಅರ್ಥವಾಗಿದೆ. ಆದ್ದರಿಂದ ಈ ನನ್ನ ತಿದ್ದುಪಡಿಯನ್ನು ಸರ್ಕಾರದವರು ಒಪ್ಪಿಕೊಳ್ಳಬೇಕೆಂದು ನಾನು ಒತ್ತಾಯ ಪಡಿಸುತ್ತಾ 4ನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಈ ನೀರಾವರಿ ಯೋಜನೆಗಳನ್ನೆಲ್ಲಾ ಪೂರ್ತಿಮಾಡಬೇಕು, ಅದಕ್ಕೆ ನಮ್ಮೆಲ್ಲರ ಬೆಂಬಲ ಹಾಗೂ ಸಭೆಯ ಪೂರ್ಣ ಬೆಂಬಲ ಇದೆ ಎಂದು ಆಶಿಸಿ ಈ ನನ್ನ ತಿದ್ದುಪಡಿಯನ್ನು ಮಾನ್ಯ ಶಿವಪ್ಪನವರು ಒಪ್ಪಿ, ಸರ್ವಾನುಮತದಿಂದ ಈ ನಿರ್ಣಯವನ್ನು ಸಭೆ ಅಂಗೀಕಾರ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನು ಮುಗಿಸುತ್ತೇನೆ.

† ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಸ್ವಾಮಿ, ಕಾವೇರಿ ಕಣಿವೆ ನೀರಿನ ಯೋಜನೆಯನ್ನು ಕಾರ್ಯಗತಮಾಡಬೇಕೆಂದು ಸುಮಾರು 20-25 ವರ್ಷಗಳಿಂದಲೂ ಪ್ರಯತ್ನ ನಡೆಯುತ್ತಿದೆ. ಈ ದಿವಸ ಅದು ತುಟ್ಟತುದಿಗೆ ಬಂದಿದೆ. ಶ್ರೀಮಾನ್ ಶಿವಪ್ಪನವರು ಮಂಡಿಸಿರತಕ್ಕ ನಿರ್ಣಯವನ್ನು ನಾನು ಸಮರ್ಥಿಸುತ್ತೇನೆ. ಮೈಸೂರು ಸರ್ಕಾರದವರ ಮಂದಮತಿಯಿಂದ ಈ ದಿವಸ ಕರ್ಣಾಟಕದ ಸುಮಾರು ಕೋಟ್ಯಾಂತರ ಜನರ ಜೀವನ ಹಾಳಾಗುತ್ತಿದೆ. ಕಾವೇರಿ ನದಿಯಲ್ಲಿ ದೊರಕುವ ನೀರಿನ ಪ್ರಮಾಣ 417 ಟಿ.ಎಂ.ಸಿ.ಎಫ್ಟಿ. ಈ ನದಿಗೆ ಇದರ ಉಪನದಿಗಳಿಂದ ಬರತಕ್ಕ ನೀರಿನ ಪ್ರಮಾಣ 136 ಟಿ.ಎಂ.ಸಿ.ಎಫ್ಟಿ. ಹೀಗೆ ಒಟ್ಟು 533 ಟಿ.ಎಂ.ಸಿ.ಎಫ್ಟಿ. ನೀರು. ಈ ನೀರಿನಲ್ಲಿ ಮೈಸೂರು ರಾಜ್ಯದವರು ಉಪಯೋಗ ಮಾಡಿಕೊಂಡಿರುವ ನೀರಿನ ಪ್ರಮಾಣವೆಷ್ಟೆಂದರೆ 120 ಟಿ.ಎಂ.ಸಿ.ಎಫ್ಟಿ. ನೀರು. ಇನ್ನು ಆ ಮದ್ರಾಸಿನವರು ಉಪಯೋಗ ಮಾಡಿಕೊಂಡಿತಕ್ಕ ನೀರಿನ

ಪ್ರಮಾಣ 375 ಟಿ.ಎಂ.ಸಿ.ಎಫ್ಟಿ ಗಿಂತ ಹೆಚ್ಚಾಗಿದೆ. ಹಿಂದೆ 1924 ರಲ್ಲಿ ಆಗಿದ್ದ ಅಗ್ರಿಮೆಂಟಿನ ಪ್ರಕಾರ ಆ ಮದ್ರಾಸ್ ರಾಜ್ಯದವರು ನೀರಾವರಿ ಮಾಡಬಹುದಾಗಿದ್ದ ಜಮೀನು ವಿಸ್ತೀರ್ಣ ಎಷ್ಟೆಂದರೆ ಅದು 12 ಲಕ್ಷ ಎಕರೆ ಮಾತ್ರ. ಆ ಅಗ್ರಿಮೆಂಟಾದ ದಿನ ಮೈಸೂರು ಸಂಸ್ಥಾನಕ್ಕಿಂತ ಆ ಮದ್ರಾಸ್ ರಾಜ್ಯ ಬಹಳ ಬಲಿಷ್ಠವಾದ ರಾಜ್ಯವಾಗಿತ್ತು. ಆ ದಿವಸ ನಮ್ಮ ಮೈಸೂರು ಸಂಸ್ಥಾನದಲ್ಲಿ ಸುಮಾರು 2 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಆ ಕನ್ನಂಬಾಡಿ ಕಟ್ಟೆಯನ್ನು ಕಟ್ಟುವುದೇ ಬಹಳ ದುಸ್ತರವಾಗಿತ್ತು. ಮದ್ರಾಸ್ ಸರ್ಕಾರದವರು ಅದಕ್ಕೆ ಅನೇಕ ಅಡ್ಡಿ ಅಡಚಣೆಗಳನ್ನು ತಂದೊಡ್ಡಿದ್ದರು. ಆಗ ಇಲ್ಲಿ ದಿವಾನರಾಗಿದ್ದ ರಾಷ್ಟ್ರ ಶಿಲ್ಪಿ ಸರ್ ಎಂ. ವಿಶ್ವೇಶ್ವರಯ್ಯನವರು ಏನೇ ಆಗಲಿ ಈ ಅಣೆಕಟ್ಟಿನ ಕೆಲಸವನ್ನು ನಿಲ್ಲಿಸಬಾರದೆಂದು ಸಂಕಲ್ಪಮಾಡಿ ಸಧ್ಯ ಅದಷ್ಟಾಗಲಿ ನೋಡಿಕೊಳ್ಳೋಣ ಎಂದು ಆ ದಿವಸ ಆ ಬ್ರಿಟೀಷರ ಆಡಳಿತದ ಬಲವಂತಕ್ಕೆ ಒಪ್ಪಿ ಆ ಅಗ್ರಿಮೆಂಟಿಗೆ 1924 ರಲ್ಲಿ ರುಜು ಮಾಡಿದರು. ಆದರೆ ಆ 1924 ರಲ್ಲಿ ಆದ ಅಗ್ರಿಮೆಂಟೇನಿದೆ ಅದನ್ನು ಮದ್ರಾಸ್ ಸರ್ಕಾರದವರು ಉಲ್ಲಂಘನೆ ಮಾಡಿದ್ದಾರೆ. ಆ ಅಗ್ರಿಮೆಂಟಿನಲ್ಲಿ ಅಡಕವಾಗಿರತಕ್ಕ ಕಂಡೀಷನ್ ಮೇರೆಗೆ ಅವರು ಗ್ರಾಂಡ್ ಅಣೆಕಟ್ಟನ್ನು ಕಟ್ಟಿದಮೇಲೆ ಅಲ್ಲಿ ಅಷ್ಟೇ ನೀರನ್ನು ಬಿಡಬೇಕೆಂದು ಅದರಲ್ಲಿ ಅಡಕವಾಗಿತ್ತು. ಆದರೆ ಆ ಗ್ರಾಂಡ್ ಅಣೆಕಟ್ಟು ಒಂದೆರಡು ವರ್ಷಗಳಲ್ಲೇ ಒಡೆದುಹೋಯಿತು. ಅನಂತರ 1925 ರಲ್ಲಿ ಆ ಮದ್ರಾಸಿನವರು ಆ ಹಿಂದೆ ಏನು ಒಂದು ಅಣೆಕಟ್ಟನ್ನು ಕಟ್ಟಿದ್ದರೋ ಅದಕ್ಕಿಂತಲೂ ಹೆಚ್ಚಿನ ನೀರನ್ನು ಶೇಖರಣೆ ಮಾಡತಕ್ಕ ದೊಡ್ಡ ಅಣೆಯನ್ನು ಕಟ್ಟಿದರು. ಆಗ ನಮ್ಮ ಮೈಸೂರು ಸರ್ಕಾರದವರು ಆ ಬಗ್ಗೆ ತಮ್ಮ ವಿರೋಧವನ್ನು ಸೂಚಿಸಿದ್ದಾರೆ, ಪ್ರೊಟೆಸ್ಟ್ ಮಾಡಿದ್ದಾರೆ. 1929 ರಲ್ಲಿ ನೀರನ್ನು ಉಪಯೋಗ ಮಾಡತಕ್ಕ ಬಗ್ಗೆ ಇದ್ದ ರೂಲ್ಸ್ ಆಫ್ ರೆಗ್ಯುಲೇಷನನ್ನು ಬದಲಾವಣೆ ಮಾಡಲಾಯಿತು. ಆ ಬದಲಾವಣೆಯಿಂದ ಯಾವ ಯಾವ ತಿಂಗಳಲ್ಲಿ ಆ ಗ್ರಾಂಡ್ ಅಣೆಕಟ್ಟಿನಿಂದ ಎಷ್ಟೆಷ್ಟು ನೀರನ್ನು ಬಿಡಬೇಕೆಂದಿತ್ತೋ ಆ ಕಂಡೀಷನ್ನನ್ನು ಅವರು ಉಲ್ಲಂಘಿಸಿ ಆ ಗ್ರಾಂಡ್ ಅಣೆಕಟ್ಟಿನಿಂದ ಹೊರಗೆ ಹೋಗಬೇಕಾಗಿದ್ದ ನೀರಿಗೆ ಭವಾನಿ ಮತ್ತು ಅಮರಾವತಿ ಇತ್ಯಾದಿ ಅನೇಕ ಅಣೆಕಟ್ಟೆಗಳನ್ನು ಕಟ್ಟಿದ್ದಾರೆ. ಈ ನೀರಾವರಿ ಅಣೆಕಟ್ಟುಗಳ ವಿಚಾರ ಆ 1924 ರ ಅಗ್ರಿಮೆಂಟಿನಲ್ಲಿಲ್ಲ. ಆ ಮದ್ರಾಸಿನವರು ಹೀಗೆ ಆ ಅಗ್ರಿಮೆಂಟನ್ನು ಮೀರಿ ಸುಮಾರು 25 ಟಿ.ಎಂ.ಸಿ.ಎಫ್ಟಿ. ನೀರನ್ನು ಬಳಸಲು ಅನೇಕ ಅಣೆಕಟ್ಟೆಗಳನ್ನು ಕಟ್ಟಿದ್ದಾರೆ. ಅವರು ಅಲ್ಲಿ ಆ ಅಣೆಕಟ್ಟೆಗಳನ್ನು ಕಟ್ಟತಕ್ಕ ವಿಚಾರದಲ್ಲಿ ನಮ್ಮ ಮೈಸೂರು ಸರ್ಕಾರದವರು ಅನುಮತಿಯನ್ನು ಕೊಡಬೇಕಾಗಿತ್ತು. ಮದ್ರಾಸ್ ಸರ್ಕಾರದವರು ಮೈಸೂರು ಸರ್ಕಾರದವರಿಂದ ಯಾವ ಅನುಮತಿಯನ್ನೂ ಪಡೆಯದೆ ಆ ಕಟ್ಟೆಗಳನ್ನು ಕಟ್ಟಿದ್ದಾರೆ. ಆಗ ನಮ್ಮ ಮೈಸೂರು ಸರ್ಕಾರದವರು ಒಂದು ಪ್ರೊಟೆಸ್ಟ್ ನೋಟನ್ನು ಮದ್ರಾಸ್ ಸರಕಾರಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೂ ಕಳುಹಿಸಿಕೊಟ್ಟಿದ್ದಾರೆ. ಆ 1924 ರ ಒಪ್ಪಂದದ ಪ್ರಕಾರ ಈಗಿರತಕ್ಕ ಕೆ. ಆರ್. ಸಾಗರದಿಂದ ಇಲ್ಲಿ ಒಂದು ಲಕ್ಷ ಇಪ್ಪತ್ತು ಸಾವಿರ ಎಕರೆ ಭೂಮಿಯನ್ನು ಸಾಗುವಳಿಗೆ ತರಬೇಕಾಗಿದ್ದರೆ ಇನ್ನೂ 45 ಟಿ.ಎಂ.ಸಿ.ಎಫ್ಟಿ. ನೀರು ಬೇಕಾಗಿದೆ. ಈ ದಿವಸ ನಮಗೆ ಕಾವೇರಿ ನದಿಯ ಉಪನದಿಗಳಾದ ಆ ಹೇಮಾವತಿ, ಹಾರಂಗಿ, ಕಬಿನಿ ಇತ್ಯಾದಿ ನದಿಗಳಿಂದ ನಮಗೆ 45 ಟಿ.ಎಂ.ಸಿ.ಎಫ್ಟಿ. ನೀರು ಸಿಕ್ಕುವುದಿಲ್ಲ. ಈ ಹಿಂದೆ ನೇಮಕವಾಗಿದ್ದ ಆ ಟೆಕ್ನಿಕಲ್ ಅಂಡ್ ಡೆವಲಪ್‌ಮೆಂಟ್ ಕಮಿಟಿಯವರು ನಮಗೆ ಇನ್ನು ಈ ನದಿಗಳಿಂದ 10 ಟಿ.ಎಂ.ಸಿ.ಎಫ್ಟಿ. ನೀರು ಸಿಕ್ಕಿದರೆ ಹೆಚ್ಚೆಂದು ಹೇಳುತ್ತಿದ್ದಾರೆ. ಈ ಹಿಂದೆ ಒಂದು ಸಾರಿ ಮೈಸೂರು ಜಿಲ್ಲೆಯಲ್ಲಿ ಘೋರ ಕ್ಷಾಮ ಉಂಟಾಗಿತ್ತು. ಆ ಕಾಲದಲ್ಲಿ ಕಾವೇರಿ ನದಿ ಸಂಪೂರ್ಣವಾಗಿ ಬತ್ತಿಹೋಗಿತ್ತು. ಆಗ್ಗೆ ಮೈಸೂರು ಸರ್ಕಾರದವರು ಆ ಕೆರೆಯ ನೀರನ್ನು ಹೆಚ್ಚುಮಾಡತಕ್ಕ ಬಗ್ಗೆ ಒಂದು ಸಮಿತಿಯನ್ನು ಅಂದರೆ ನಿವೃತ್ತ ಇಂಜಿನಿಯರುಗಳಿಂದ ಕೂಡಿದಂಥ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಆ ಸಮಿತಿಯವರು ಆ ಕಾವೇರಿ ಮತ್ತು ಉಪನದಿಗಳಿಂದ ನಮಗೆ 10 ಟಿ.ಎಂ.ಸಿ.ಎಫ್ಟಿ. ನೀರಿಗಿಂತ ಜಾಸ್ತಿ ಸಿಕ್ಕುವುದಿಲ್ಲವೆಂದು ಹೇಳಿದ್ದಾರೆ. ಇದಕ್ಕೆ ಮೂಲ ಕಾರಣ ಅತ್ತ ಮದ್ರಾಸ್ ಸರ್ಕಾರದವರು ಭವಾನಿ, ಪುಲ್ಲಂಪಾಡಿ ಮತ್ತು ಅಮರಾವತಿ ಇತ್ಯಾದಿ ಅನೇಕ ಅಣೆಕಟ್ಟುಗಳನ್ನು ಕಟ್ಟಿರುವುದು. ಆ ದಿವಸವೇ ನಮ್ಮ ಸರ್ಕಾರದವರು ಒಂದು ಪ್ರೊಟೆಸ್ಟ್ ನೋಟನ್ನು ತಯಾರು ಮಾಡಿ ಮದ್ರಾಸ್ ಸರ್ಕಾರದವರಿಗೆ ಬರೆದು ಕಳುಹಿಸಿದಾಗ್ಯೂ ಕೂಡ ಅವರು ಅದನ್ನು ತಮ್ಮ ಗಮನಕ್ಕೇ ತೆಗೆದುಕೊಳ್ಳಲಿಲ್ಲ. ಆಗ ನಮ್ಮ ಮೈಸೂರು ಸರ್ಕಾರದವರು ಕಣ್ಣುತೆರೆದು ತಾ|| 16-3-1960 ರಲ್ಲಿ ಹಿಂದೇನು ಆ ಮದ್ರಾಸ್ ಸರ್ಕಾರದವರು ತಾ|| 24-5-1949 ರಲ್ಲಿ ಅವಾಗೆ ಮೈಸೂರು ಸರ್ಕಾರದವರು ಕಳುಹಿಸಿದ್ದ ಪ್ರೊಟೆಸ್ಟ್ ನೋಟನ್ನು ಉಲ್ಲಂಘನೆ ಮಾಡಿದ್ದಾರೋ ಆ ವಿಚಾರವಲ್ಲ ಆ ಮದ್ರಾಸ್ ಸರ್ಕಾರದವರು ಹಿಂದೆ 1924 ರಲ್ಲಾದ ಅಗ್ರಿಮೆಂಟನ್ನು ಮುರಿದಿದ್ದಾರೆಂದು ಹೇಳಿ ಕೇಂದ್ರ ಸರ್ಕಾರಕ್ಕೆ ಒಂದು ಡಿಸ್‌ಪ್ಯೂಟ್ ನೋಟನ್ನು ಕಳುಹಿಸಿದ್ದಾರೆ. ಈ ವಿಚಾರದಲ್ಲಿ ಹಿಂದೆ ಲೋಕಸಭೆಯಲ್ಲಿ ಮಾನ್ಯ ಸದಸ್ಯರಾಗಿದ್ದ ಶ್ರೀ ಎಚ್. ಸಿ. ದಾಸಪ್ಪನವರು ಮತ್ತು ಶ್ರೀ ಶಿವನಂಜಪ್ಪ

(ಶ್ರೀ ಎಚ್. ಬಿ. ಜ್ವಾಲನಯ್ಯ)

ನವರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಕೇಂದ್ರ ಸರ್ಕಾರದವರು, ಹೌದು ಅಂಥ ಒಂದು ಡಿಸ್‌ಪ್ಯೂಟ್ ನೋಟ್ ಕೇಂದ್ರ ಸರ್ಕಾರಕ್ಕೆ ಬಂದಿದೆ ಎಂದು ಒಪ್ಪಿಕೊಂಡಿದ್ದಾರೆ. ಅದರಲ್ಲಿ ಕೇಂದ್ರ ಸರ್ಕಾರದವರು ಕೂಡಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡಲಾಗಿದೆ. ಹೀಗೆ ಆ ಪಾರ್ಲಿಮೆಂಟಿನಲ್ಲಿ ಆದ ಚರ್ಚೆಯನ್ನು ನಮೂದಿಸಿ ಶ್ರೀ ಎಚ್. ಎಂ. ಚನ್ನಬಸಪ್ಪನವರು ಒಂದು ನೋಟನ್ನು ಆ ಮದ್ರಾಸ್ ಸರ್ಕಾರಕ್ಕೆ ಅವರು ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿದ್ದಾಗ ಕಳುಹಿಸಿದ್ದರೆಂದು 16-3-1960 ನೇ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಅದೇ ಕಾಲದಲ್ಲಿ ಅತ್ತ ಮದ್ರಾಸಿನಲ್ಲಿ ಶಾಸನ ಸಭೆ ನಡೆಯುತ್ತಿತ್ತು. ಅವರಿಗೆ ಮೈಸೂರು ಸರ್ಕಾರದವರು ಕಳುಹಿಸಿದ್ದ ಪ್ರೊಟೆಸ್ಟ್ ನೋಟಿನ ವಿಚಾರ ಆ ಸಭೆಯಲ್ಲಿ ಚರ್ಚೆಗೆ ಬಂದಿತ್ತು. ಆಗ ಅದಕ್ಕೆ ಸೂಕ್ತ ಉತ್ತರವನ್ನು ಬರೆಯಲಾಗುವುದೆಂದು ಹೇಳಿ ಅದನ್ನು ಅಷ್ಟಕ್ಕೇ ಅವರು ಅಲ್ಲಿ ತೇಲಿಸಿಬಿಟ್ಟು ಸುಮ್ಮನಾದರು. ನಮಗೆ ಆ 1924 ರ ಒಪ್ಪಂದರ ಪ್ರಕಾರ ಇಲ್ಲಿ ಕನ್ನಂಬಾಡಿಯ ಕೆಳಗೆ ಒಂದು ಲಕ್ಷ ಇಪ್ಪತ್ತು ಸಾವಿರ ಎಕರೆ ಭೂಮಿಯನ್ನು ತರೀ ವ್ಯವಸಾಯಕ್ಕೆ ತಿರುಗಿಸುವ ಕಾರ್ಯಕ್ಕೆ ಅಗತ್ಯವಾಗಿ ಬೇಕಾಗಿರತಕ್ಕ 45 ಟಿ.ಎಂ.ಸಿ.ಎಫ್ಟಿ ನೀರಿನ ಬಗ್ಗೆ ನಮಗೆ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿಲ್ಲದೆ ಅವರು ಆ ಒಪ್ಪಂದವನ್ನು ಮೇಲಿಂದ ಮೇಲೆ ಮುರಿಯುತ್ತಲೇ ಬಂದಿದ್ದಾರೆ. ಇಲ್ಲಿಂದ ಪ್ರೊಟೆಸ್ಟ್ ನೋಟ್ ಒಂದು ಹೋದ ಮೇಲೂ ಆ ಮದ್ರಾಸ್ ಸರ್ಕಾರದವರು ಅಕ್ರಮವಾಗಿ ನೀರನ್ನು ಉಪಯೋಗ ಮಾಡುವುದನ್ನು ಕೈಬಿಡಲಿಲ್ಲ. ನಮಗೆ ಇದರಲ್ಲಿ ಬಹಳ ಅನ್ಯಾಯವಾಗಿದೆ. ಆ 1924 ರ ಅಗ್ರಿಮೆಂಟಾದ ಕಾಲಕ್ಕೆ ನಿರ್ದಿಷ್ಟವಾಗಿ ಇಂಥ ನದಿಯಲ್ಲಿ ಇಂತಿಷ್ಟೇ ನೀರಿತ್ತು ಎಂಬುದನ್ನು ಸೈಂಟಿಫಿಕ್ಕಾಗಿ ಆ ದಿವಸ ನಿರ್ಧಾರವಾಗಿರಲಿಲ್ಲ. ಅದನ್ನು ಕೇವಲ ಒಂದು ಅಂದಾಜಿನ ಮೇಲೆ ಮಾಡಿದ್ದರು. ಅಲ್ಲದೆ ಆ ಗ್ರಾಂಡ್ ಅಣೆಕಟ್ಟನ್ನು ಕಟ್ಟತಕ್ಕ ಬಗ್ಗೆ ಇದ್ದ ಅಗ್ರಿಮೆಂಟನ್ನು ಮದ್ರಾಸ್ ಸರ್ಕಾರದವರು ಉಲ್ಲಂಘನೆ ಮಾಡಿದ್ದಾರೆ. ಅದಕ್ಕೆ ಮೈಸೂರು ಸರ್ಕಾರದವರು ಒಪ್ಪಿಗೆಯನ್ನು ಕೊಟ್ಟಿಲ್ಲ.

4–30 P.M.

ಭವಾನಿ ಅಣೆಕಟ್ಟನ್ನಾಗಲೀ, ಮೆಟ್ಟೂರ್ ಅಣೆಕಟ್ಟನ್ನಾಗಲೀ, ಮೈಸೂರು ಸರ್ಕಾರದ ಅನುಮತಿಯಿಲ್ಲದೆ ಮದ್ರಾಸ್ ಸರ್ಕಾರ ಮಾಡಿದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಮದ್ರಾಸ್ ಸರ್ಕಾರ ಈ ಒಪ್ಪಂದವನ್ನು ಉಲ್ಲಂಘನೆ ಮಾಡಿದೆಯೆಂದು ಅಂದಿನ ಮಂತ್ರಿಯಾಗಿದ್ದ ಮಾನ್ಯ ಶ್ರೀ ಚನ್ನಬಸಪ್ಪನವರು ಕೇಂದ್ರ ಸರ್ಕಾರಕ್ಕೆ ಸ್ಪಷ್ಟವಾಗಿ ತಿಳಿಸಿದ್ದಾರೆ. ನಮ್ಮದೂ ಡಿಸ್‌ಪ್ಯೂಟ್ ಇದೆ. ಮದ್ರಾಸ್ ಸರ್ಕಾರ ಮಿತಿಯನ್ನು ಮೀರಿರುವುದರಿಂದ, ಆ ರೂಲ್ಸ್ ಮತ್ತು ರೆಗ್ಯುಲೇಷನ್ನುಗಳನ್ನು ಬದಲಾವಣೆ ಮಾಡಬೇಕು. ಮೈಸೂರಿನವರಿಗೇನೋ ಅನ್ಯಾಯವಾಗಿದೆ. ಈ ಅನ್ಯಾಯವನ್ನು ಸರಿಪಡಿಸಬೇಕಾದರೆ, ಈಗಿರತಕ್ಕ ರೂಲ್ಸ್ ಮತ್ತು ರೆಗ್ಯುಲೇಷನ್ಸ್ ಬದಲಾವಣೆ ಮಾಡಬೇಕು ಎಂಬುದಾಗಿ ಒತ್ತಾಯ ಮಾಡಿದ್ದಾರೆ. 1924 ರ ಕರಾರಿನ ಪ್ರಕಾರ 45 ಟಿ.ಎಂ.ಸಿ. ಫೀಟ್ ನೀರನ್ನು ಉಪಯೋಗಿಸಿಕೊಳ್ಳುವ ಅಧಿಕಾರವಿತ್ತು. ಅಣೆಕಟ್ಟಿನಲ್ಲಿ ಎಷ್ಟು ನೀರು ಇದೆಯೆಂಬುದು ಒಂದು ದೊಡ್ಡ ಪ್ರಶ್ನೆಯಾಗಿದೆ. ಈಗ ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಸರ್ಕಾರ ಒಪ್ಪಿಕೊಂಡು ಅದರ ಮಿತಿಯಲ್ಲಿ ಈ ಅಣೆಕಟ್ಟನ್ನು ಕಟ್ಟುತ್ತೇವೆಂದು ಹೇಳಿದರು. ಆ ಅಣೆಕಟ್ಟಿನ ಮೇಲೆ ಇರತಕ್ಕ ನೀರನ್ನು ಕೊಟ್ಟಾಗ ಅದು ರಿಜರ್‌ವಾಯರ್ ಆಗುತ್ತದೆ. ಆದರೆ ಮೈಸೂರಿನ ಕಾವೇರಿ ನದಿಯ ಕಣಿವೆ ಕೆಳಗೆ ಇರುವ ಒಂದು ಇಂಚು ನೀರನ್ನೂ ಸಹ ಬಿಡುವುದಕ್ಕೆ ಸಾಧ್ಯವಿಲ್ಲ. 1936 ರಿಂದ 1969 ರ ವರೆಗೆ, ಮಳೆಯ ನೀರಿನ ಅಂಕಿಅಂಶಗಳನ್ನು ಪರಿಶೀಲನೆ ಮಾಡಿದರೆ, ಈ ವರ್ಷದಲ್ಲಿ 10 ಟಿ.ಎಂ.ಸಿ.ಗಿಂತ ಜಾಸ್ತಿ ನೀರು ಈ ಕಣಿವೆಗಳಲ್ಲಿ ಸಿಗುವುದಿಲ್ಲ. ಆದ್ದರಿಂದ ಈಗಲಾದರೂ ಮೈಸೂರು ಸರ್ಕಾರ ಸ್ವಲ್ಪ ಎಚ್ಚರದಿಂದ ಕೆಲಸಮಾಡಬೇಕು. ಇಲ್ಲದೇ ಹೋದರೆ ಮುಂದೆ ಪರಿಸ್ಥಿತಿ ಉಲ್ಬಣವಾಗುತ್ತದೆ. ಆಗ ಧೀರತೆಯಿಂದ ಮಾನ್ಯ ಶ್ರೀ ಚನ್ನಬಸಪ್ಪನವರು ಕೇಂದ್ರಸರ್ಕಾರಕ್ಕೆ ಮತ್ತು ಮದ್ರಾಸ್ ಸರ್ಕಾರಕ್ಕೆ ಈ ಅಗ್ರಿಮೆಂಟ್ ಬದಲಾವಣೆ ಮಾಡದಿದ್ದರೆ ನೀರು ಬಿಡುವುದಿಲ್ಲವೆಂದು ಪ್ರೊಟೆಸ್ಟ್ ಮಾಡಿದ್ದರು. ಮದ್ರಾಸ್ ಸರ್ಕಾರ ಪ್ರತಿ ಹಜ್ಜೆಯಲ್ಲಿಯೂ ಕೂಡ ಅಗ್ರಿಮೆಂಟನ್ನು ಮುರಿದುಕೊಂಡು ಬಂದಿದ್ದಾರೆ. ಇನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ, ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಒಂದು ಕಾವೇರಿ ಕಣಿವೆಯ ಅಣೆಕಟ್ಟನ್ನು ಕಟ್ಟುವುದಕ್ಕೆ ಕೊಟ್ಟಿರುವ ಹಣ ನೋಡಿದರೆ ನಿಜವಾಗಿಯೂ ಮನಸ್ಸಿಗೆ ಬೇಸರವನ್ನುಂಟುಮಾಡುತ್ತದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೇಮಾವತಿಗೆ ಮಂಜೂರಾದುದು, ಒಂದು ಕೋಟಿ ರೂಪಾಯಿಗಳು. ಖರ್ಚುಮಾಡಿದ್ದು 4 ಲಕ್ಷ ರೂಪಾಯಿಗಳು, ಹಾರಂಗಿಗೆ ಮಂಜೂರಾದುದು 200 ಲಕ್ಷ ರೂಪಾಯಿಗಳು, ಖರ್ಚಾದುದು 1.6 ಲಕ್ಷ ರೂಪಾಯಿಗಳು. ಕಪಿನಿಗೆ ಮಂಜೂರಾ

ದುದು 264.7 ಲಕ್ಷ ರೂಪಾಯಿಗಳು, ಖರ್ಚುಮಾಡಿದ್ದು 124 ಲಕ್ಷ ರೂಪಾಯಿಗಳು. ಇಷ್ಟು ದುಡ್ಡು ಕೊಟ್ಟಿದ್ದರೂ ಸರ್ಕಾರ ಖರ್ಚುಮಾಡದೆ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಣೆ ಮಾಡಿಲ್ಲ. ಈಗ ಹೇಮಾವತಿಗೆ 4ನೇ ಯೋಜನೆಯಲ್ಲಿ 8 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನೂ 14 ಕೋಟಿ ರೂಪಾಯಿಗಳು ಬೇಕಾಗಿದೆ. ಹಾರಂಗಿಗೆ 10 ಕೋಟಿ ರೂಪಾಯಿಗಳು, ಕಪಿನಿಗೆ 4.30 ಕೋಟಿ ರೂಪಾಯಿಗಳು ಬೇಕಾಗಿದೆ. ಎಲ್ಲಾ ಅಣೆಕಟ್ಟುಗಳಿಗೆ ಒಟ್ಟು 55 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈಗಾಗಲೇ 13 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇನ್ನೂ 42 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಕರಾರು 1974 ರೊಳಗೆ ಮುಕ್ತಾಯ ವಾಗಲಿದೆ. ಈಗ ಮುಂದೆ ವರ್ಷಕ್ಕೆ 10 ಕೋಟಿ ರೂಪಾಯಿಗಳನ್ನು ಒದಗಿಸಿಕೊಳ್ಳಬೇಕಾಗಿದೆ. ನಮ್ಮ ಸರ್ಕಾರಕ್ಕೆ ಇದನ್ನು ಒದಗಿಸುವುದಕ್ಕೆ ತೊಂದರೆಯಾಗುವುದಿಲ್ಲ. ಅಬ್ಕಾರಿ ಇಲಾಖೆಯಿಂದ ಬಂದಿರತಕ್ಕ ಹೆಚ್ಚಿನ ಹಣವನ್ನು ಕೊಟ್ಟರೆ ಈ ಯೋಜನೆಗಳನ್ನು ಬೇಗನೆ ಮುಗಿಸುವುದಕ್ಕೆ ಸಾಧ್ಯ ವಾಗುತ್ತದೆ. ಆದ್ದರಿಂದ ಸರ್ಕಾರದವರು ಯಾವ ಸಂಶಯ ಇಟ್ಟುಕೊಳ್ಳದೆ ಈ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ಕಾರ್ಯದಲ್ಲಿ ವಿರೋಧ ಪಕ್ಷದವರು ಎಲ್ಲಾ ಸಹಕಾರವನ್ನು ಕೊಡುವುದಕ್ಕೆ ಸಿದ್ಧವಾಗಿರುವಾಗ, ಮಾನ್ಯ ಮುಖ್ಯ ಮಂತ್ರಿಗಳು ಏತಕ್ಕೆ ಹಿಂಜರಿ ಯುತ್ತಾರೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಮದ್ರಾಸ್ ಸರ್ಕಾರಕ್ಕೆ ಸಹ ಕಾರ ಕೊಟ್ಟಿದ್ದಾರೋ ಏನೋ ಎಂದು ನಾನು ಹೇಳಬಯಸುತ್ತೇನೆ.

ಇಷ್ಟು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಮಾನ್ಯ ಅಧ್ಯಕ್ಷರೇ, ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಾವರಿ ಕೆಲಸಗಳನ್ನು ಕೈಗೊಳ್ಳುವುದಕ್ಕೆ ಸರಕಾರವನ್ನು ಒತ್ತಾಯಮಾಡಬೇಕು, ಸರ್ಕಾರ ಆ ಕೆಲಸವನ್ನು ಜಾಗ್ರತೆಯಾಗಿ ಕೈಗೊಂಡು ಮುಗಿಸಬೇಕೆಂದು ಹೇಳುತ್ತಿರುವುದು ಇದು ಪ್ರಥಮ ಸಲವಲ್ಲ. ಕೆಲವು ವಿಶೇಷ ಕಾರಣಗಳಿಗೋಸ್ಕರ ಈ ವಿಷಯವನ್ನು ಪುನಃ ಚರ್ಚೆ ಮಾಡ ಬೇಕಾಗಿದೆ. ಜನತೆ ಮಂತ್ರಿಮಂಡಲದಲ್ಲಿ ನಂಬಿಕೆ ಇಟ್ಟಿತ್ತು. ಸರ್ಕಾರದವರು ಕೆಲಸ ಮಾಡುವರೆಂಬ ಭರವಸೆಯನ್ನು ಇಟ್ಟರು. ಅದನ್ನೂ ಕೂಡ ಈ ಅಸೆಂಬ್ಲಿಗೆ ಬಂದಾಗಿನಿಂದಲೂ ನೋಡಿದ್ದು ಆಯಿತು. ಹೋದ ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಸಭೆಯ ಕೆಲವು ಸದಸ್ಯರನ್ನು ಕರೆದು ಈ ವಿಚಾರದಲ್ಲಿ ಚರ್ಚೆ ನಡೆಸಿ ಒಂದು ತೀರ್ಮಾನಕ್ಕೆ ಬರುವುದಾಗಿ ತಿಳಿಸಿದರು. ಅದು ಅಪೂರ್ಣ ಚರ್ಚೆಯಾಗಿ ಉಳಿದಿದೆ. ಈ ಸಂದರ್ಭದಲ್ಲಿ ಮಾತು ಹೆಚ್ಚಾಗುತ್ತದೆಯೇ ವಿನಹ ಕೃತಿ ಯಲ್ಲಿ ಏನೂ ಮುಂದುವರಿಕೆ ಕಂಡುಬರಲಿಲ್ಲ. ಈ ಕಾವೇರಿ ಜಲಾನಯನದಲ್ಲಿ ಕೆಲಸವನ್ನು ಕೈಗೊಳ್ಳ ಬೇಕಾದರೆ, ಇದಕ್ಕೆ ಸಂಬಂಧಪಟ್ಟ ಹಾಗೆ ಎಲ್ಲಾ ನೀರಾವರಿ ಕೆಲಸಗಳನ್ನು ತೆಗೆದುಕೊಳ್ಳ ಬೇಕಾದರೆ ನಮಗೆ ಹಕ್ಕು ಇದೆಯೇ ಮತ್ತು ನಮ್ಮಲ್ಲಿ ಹಣವಿದೆಯೇ ಎಂಬ ಎರಡು ಪ್ರಶ್ನೆಗಳು ಬರುತ್ತವೆ. 1924ನೇ ಅಗ್ರಿಮೆಂಟನ್ನು ವಿಮರ್ಶೆ ಮಾಡಿ ನೋಡಿದರೆ, ಆ ಹಕ್ಕಿನ ಪ್ರಶ್ನೆ ಗೊತ್ತಾಗುತ್ತದೆ. ಮೈಸೂರು ಮದರಾಸು ರಾಜ್ಯಗಳ ಪರವಾಗಿ ಆಗಿರತಕ್ಕ ಅಗ್ರಿಮೆಂಟ್ ಪ್ರಕಾರ ಮೈಸೂರು ರಾಜ್ಯಕ್ಕೆ ಸಲ್ಲಬೇಕಾದ ಪೂರ್ಣ ನೀರನ್ನು ಸಲ್ಲಿಸಿಲ್ಲ. ಮೈಸೂರು ಪ್ರದೇಶದಲ್ಲಿ ಸುಮಾರು ಶೇಕಡ 75ರಷ್ಟು ನೀರು ಇದ್ದರೂ, ಮದ್ರಾಸಿಗೆ ಶೇಕಡ 25ರಷ್ಟು ನೀರು ದೊರಕ ಬೇಕಾಗಿದ್ದರೂ ಕೂಡ ಇವತ್ತು ಮೈಸೂರಿನಲ್ಲಿ 1.81 ಲಕ್ಷ ಎಕರೆ ಮದ್ರಾಸಿನಲ್ಲಿ 19 ಲಕ್ಷ ಎಕರೆ ನೀರಾವರಿಯಾಗುತ್ತದೆ. ಹಿಂದೆ ಮದ್ರಾಸ್ ರಾಜ್ಯ ರಾಜ್ಯಪಾಲರ, ಮತ್ತು ವೈಸರಾಯರ ಹಾಗೂ ಮೈಸೂರು ರಾಜ್ಯ ದೇಶೀಯ ರಾಜರ ಆಶ್ರಯದಲ್ಲಿ ಇದ್ದವು. ಅದರಿಂದಾಗಿ ಮೈಸೂರಿಗೆ ಮಹತ್ತರ ವಾದ ಅನ್ಯಾಯವಾಯಿತು. 1924ರ ಅಗ್ರಿಮೆಂಟ್ ಪ್ರಕಾರ ಹೋದರೆ ಅನ್ಯಾಯವನ್ನು ಪರಂಪರೆ ಯಾಗಿ ಬಳಸಬೇಕೆಂಬ ವಿಚಾರ ಬರುತ್ತದೆ. ಮದ್ರಾಸ್ ಸರ್ಕಾರದವರು ಒಂದಲ್ಲ, ನಾಲ್ಕು ಕಡೆ ಗಳಿಂದಲೂ ಈಗಿನ ಅಗ್ರಿಮೆಂಟನ್ನು ಮುರಿದಿದ್ದಾರೆ ಮತ್ತು ಮುರಿಯುತ್ತಿದ್ದಾರೆ. ಈಗಿನ ಕಾನೂನು ಸಹ ಮದ್ರಾಸ್ ಸರ್ಕಾರಕ್ಕೆ ಬೆಂಬಲವಾಗಿದೆ. ಕೇಂದ್ರ ಸರ್ಕಾರದವರು ಮೈಸೂರನ್ನು ಬಹಳ ಹೀನಾಯವಾಗಿ ನೋಡಿದ್ದಾರೆ. ಮದ್ರಾಸ್ ಸರ್ಕಾರದವರು ಕ್ಲಿಯರೆನ್ಸ್ ಬೇಕೆಂದು ಕೇಳಿದಾಗ ತಕ್ಷಣ ಕೊಟ್ಟಿದ್ದಾರೆ. ಮೈಸೂರು ಸರ್ಕಾರದವರು ಟೆಕ್ನಿಕಲ್ ಕ್ಲಿಯರೆನ್ಸ್ ಕೇಳಿದರೆ ಮದ್ರಾಸ್ ಸರ್ಕಾರದವರ ಒಪ್ಪಿಗೆಯಾಗಬೇಕೆಂದು ಹೇಳುತ್ತಿದ್ದಾರೆ. ಇಲ್ಲಿ ಮಲತಾಯಿ ಧೋರಣೆ ಸ್ಪಷ್ಟವಾಗಿ ಕಾಣುತ್ತದೆ. ಏಕೆಂದರೆ ಕೇಂದ್ರ ಸರ್ಕಾರದಲ್ಲಿ ಮೈಸೂರು ಸರ್ಕಾರದವರ ಪರವಾಗಿ ತಮ್ಮ ಪ್ರಭಾವವನ್ನು ಬೀರಲು ಶಕ್ಯರಾದವರು ಕಾಂಗ್ರೆಸ್ ಆಡಳಿತ ಪಕ್ಷದಲ್ಲಿ ಇಲ್ಲ. ಅಂದಾಕ್ಷಣಕ್ಕೆ ನಾನು ಈಗಿರುವ ಮಂತ್ರಿಮಂಡಲವನ್ನು ಮಾತ್ರವೇ ಟೀಕಿಸುತ್ತಾ ಇಲ್ಲ. 1947ರಿಂದೀಚೆಗೆ ಬಂದಂಥ ಇಡೀ ಕಾಂಗ್ರೆಸ್ ಸರ್ಕಾರ ಹಳೆಯ ಮೈಸೂರಿನ ಜನರಿಗೆ ಅದರಲ್ಲೂ ಕಾವೇರಿ ಜಲಾನಯನದಲ್ಲಿರುವ ರೈತ ಜನಾಂಗಕ್ಕೆ ದ್ರೋಹ ಬಗೆದಿದ್ದಾರೆ. ಇಲ್ಲಿಯವರೆಗೂ ಕಾಂಗ್ರೆಸ್ ಆಡಳಿತ ಪಕ್ಷದವರು ಏನು

(ಶ್ರೀ ಎನ್. ಎ. ಚನ್ನೇಗೌಡ)

ಕೆಲಸಗಳನ್ನು ಮಾಡಿದ್ದಾರೆಂದು ನಾವು ಪದೇ ಪದೇ ಕೇಳಬೇಕಾಗಿದೆ. ಮೈಸೂರು ಸರ್ಕಾರ ತನ್ನ ಕೆಲಸವನ್ನು ಕ್ರಮವರಿತು ಸಕಾಲದಲ್ಲಿ ಮಾಡಿದ್ದರೆ, ಈ ಪರಿಸ್ಥಿತಿ ಇರುತ್ತಿರಲಿಲ್ಲ. ಮೂರನೆಯ ಪಂಚವಾರ್ಷಿಕ ಯೋಜನೆಗೆ ನೀರಾವರಿಗೋಸ್ಕರ 3.53 ಕೋಟಿ ರೂಪಾಯಿಗಳ ಅಂದಾಜು ಬಿಟ್ಟೇ ಇದ್ದು 6 ವರ್ಷಗಳಲ್ಲಿ 8 ಲಕ್ಷ 20 ಸಾವಿರ ರೂಪಾಯಿಗಳು ಮಾತ್ರ ಖರ್ಚಾಗಿದೆ. ಗುರಿ ಮಾತ್ರ 3.53 ಕೋಟಿಗೆ ಇದನ್ನು ತ್ವರಿತವಾಗಿ ಮಾಡಬೇಕೆಂಬ ಮನೋಭಾವ ಸರ್ಕಾರಕ್ಕೆ ಇಲ್ಲವೆಂದು ಗೊತ್ತಾಗುತ್ತದೆ. ಹಿಂದೆ ಮದ್ರಾಸ್ ಸರ್ಕಾರಕ್ಕೆ ನಮ್ಮ ಕೊಡಗು ಮತ್ತು ಕೊಳ್ಳೇಗಾಲ ಸೇರಿತ್ತು. ಈಗ ಕೊಡಗು ಮತ್ತು ಕೊಳ್ಳೇಗಾಲ ಮೈಸೂರಿಗೆ ಸೇರಿದೆ.

ಆದ್ದರಿಂದ ಒಟ್ಟು ಪ್ರದೇಶ ಕೂಡ ನಮ್ಮ ರಾಜ್ಯದ್ದು ಹೆಚ್ಚಾಗಿದೆ. ನಮಗೆ ನೀರಿನ ಹಕ್ಕು ಮೊದಲಿಗಿಂತಲೂ ಹೆಚ್ಚಾಗಿದೆ. ಇದು ನಮ್ಮ ಮೈಸೂರು ಸರ್ಕಾರಕ್ಕೆ ಗೊತ್ತಿದೆ. ಆದರೂ ಸುಮ್ಮನಿದ್ದೇ. ನಮ್ಮ ಮುಖ್ಯಮಂತ್ರಿಯವರು, ನಮಗೆ ಬೇಕಾಗಿರುವುದು ಹಣ, ಹಣ ಇದ್ದರೆ ನಾವೆಲ್ಲಾ ಮಾಡುತ್ತಿದ್ದೆವು ಎಂದು ಹೇಳುತ್ತಿದ್ದಾರೆ. ಹಣವಿಲ್ಲ ಎಂಬ ಮಂತ್ರವನ್ನು ಹೇಳಿದರೆ, ಹಣ ಬರುತ್ತದೆಯೇ ? ಹಣವನ್ನು ತೆಗೆದುಕೊಳ್ಳತಕ್ಕ ಪ್ರಬಲವಾದ ಮಾರ್ಗಗಳನ್ನು ಹುಡುಕಬೇಕು. ಪೋಸ್ಸಿಬಲ್ ಮತ್ತು ಪ್ರಾಕ್ಟಿಕೇಬಲ್ ಆಗಿರತಕ್ಕ ಮಾರ್ಗಗಳನ್ನು ಹುಡುಕಬೇಕು. ಕೇವಲ 5 ಜನ ಮಂತ್ರಿಗಳು ನಡೆಸುತ್ತಿದ್ದ ಆಡಳಿತವನ್ನು ನಡೆಸುವುದಕ್ಕೆ ನೀವು 29 ಜನರ ಮಂತ್ರಿ ಮಂಡಲವನ್ನು ರಚನೆ ಮಾಡಿದ್ದೀರಿ. ಕೆಲಸಕ್ಕೆ ಬಾರದ ಕೀಳುಮಟ್ಟದ ಕನ್ನಡ ಚಿತ್ರಗಳನ್ನೂ ಪ್ರೋತ್ಸಾಹ ಮಾಡಬೇಕೆಂದು 50 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಅದಕ್ಕೆ ನಿಮಗೆ ಹಣವಿದೆ. ನಮ್ಮ ಸರ್ಕಾರಕ್ಕೆ ಒಬ್ಬ ಚೀಫ್ ಇಂಜಿನಿಯರ್ ಸಾಲುವುದಿಲ್ಲವೆಂದು 7 ಜನರನ್ನು ಚೀಫ್ ಇಂಜಿನಿಯರ್‌ಗಳನ್ನಾಗಿ ಮಾಡಿ, ನೇಮಿಸಿ ಸಂಬಳ ಕೊಡಲು ನಿಮಗೆ ಹಣವಿದೆ. ಆದರೆ ಒಂದು ರಾಜ್ಯದ ನೀರಾವರಿಯನ್ನು ಹೆಚ್ಚಿಸುವುದಕ್ಕೆ ಹಣ ಬೇಕೆಂದರೆ ಅದಕ್ಕೆ ಹಣವಿಲ್ಲವೆಂದು ಹೇಳುತ್ತಿದ್ದೀರಿ. ನೀವು ಮನಸ್ಸು ಮಾಡಿದರೆ, ಹಣ ಶೇಖರಿಸುವುದಕ್ಕೆ ಸಾಧ್ಯವಿಲ್ಲವೇ ! ನಿಮಗೆ ಬೇಕಾಗಿರುವುದು ಗಟ್ಟಿಮನಸ್ಸು, ನಿರ್ಧಾರ. ಈಗ ಒಂದು ತುರ್ತು ಪರಿಸ್ಥಿತಿ ಇದೆ ಎಂದು ಘೋಷಿಸಿ ಮಾಡುತ್ತಿರುವ ದುಂದುವೆಚ್ಚವನ್ನೆಲ್ಲಾ ನಿಲ್ಲಿಸಿ, ಹಣ ತಾನಾಗಿ ಉಳಿಯುತ್ತದೆ. ಬೇಕಾದರೆ, ಕಾವೇರಿ ಬೇಸಿನ್ನಲ್ಲಿರತಕ್ಕ ದೇವಾಲಯಗಳ ಹಣವನ್ನು, ಜಮೀನನ್ನು, ಚಿನ್ನವನ್ನು ಸರ್ಕಾರ ವಶಪಡಿಸಿಕೊಂಡು, ಸತ್ಕಾರ್ಯಕ್ಕೆ ಉಪಯೋಗಿಸಿಕೊಳ್ಳಬಹುದು. ಅಂದರೆ, ದೇವಾಲಯಗಳ ಕೆಲಸವನ್ನು ನಿಲ್ಲಿಸಿ ಎಂದು ಹೇಳುವುದಿಲ್ಲ, ಅವರಿಗೆ ತಕ್ಕ ಬಡ್ಡಿಯನ್ನು ಕೊಡಿ. ಮೊಬಲಗನ್ನು ನೀರಾವರಿಗೆ ಉಪಯೋಗಿಸಿ, ರಾಜ್ಯದ ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸಿ, ಬೆಂಗಳೂರು ಸಿವರೇಜ್ ಯೋಜನೆಗೆ ವರ್ಲ್ಡ್ ಬ್ಯಾಂಕ್ ಸಾಲ ಕೊಡುತ್ತಿದ್ದಾರೆ. ಅದೇ ರೀತಿ 1974ನೇ ಇಸವಿಯೊಳಗೆ ಕಾವೇರಿ ನೀರನ್ನು ನೀರಾವರಿಗೆ ಉಪಯೋಗಿಸಿಕೊಳ್ಳಲು, ವರ್ಲ್ಡ್ ಬ್ಯಾಂಕ್ ಅಥವಾ ಇತರ ಏಜೆನ್ಸಿಯಿಂದ ಹಣವನ್ನು ತರಲೇಬೇಕು. ಈಗ ಬ್ಯಾಂಕ್ ರಾಷ್ಟ್ರೀಕರಣ ಆಗಿದೆ, ಬೇಕಾಗಿರತಕ್ಕ ಹಣ ಸಿಗಬಹುದೆಂದು ಹೇಳುತ್ತಾರೆ. ರಾಷ್ಟ್ರೀಕರಣ ಆದ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಲಿ. ಹಾಗೆ ಸಾರ್ವಜನಿಕರಿಂದ ಸಾಲ ಎತ್ತಲಿ, ಅದರಿಂದ ಕಷ್ಟವಾಗುವುದಿಲ್ಲ. ಬಡ್ಡಿ ಸರಿಯಾಗಿ ಇದ್ದರೆ, ಪಬ್ಲಿಕ್ ಲೋನ್ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತದೆ. ಇದರಿಂದ ದೇಶದಲ್ಲಿ ಹಣದ ಉಬ್ಬರ ಆಗುತ್ತದೆ, ಆದ್ದರಿಂದ ರಿಸರ್ವ್ ಬ್ಯಾಂಕ್ ಈ ಸಲಹೆಗೆ ಒಪ್ಪುವುದಿಲ್ಲವೆಂದು ಹೇಳಬಹುದು. ಬ್ಯಾಂಕ್‌ನಿಂದ ಹಣ ತಂದು ದುಂದು ವೆಚ್ಚ ಮಾಡಿದರೆ, ಹಣದ ಉಬ್ಬರ ಆಗುತ್ತದೆ ನಿಜ ಒಳ್ಳೆಯ ರೂಪದಲ್ಲಿ ಅಭಿವೃದ್ಧಿ ಕಾರ್ಯದಲ್ಲಿ ವಿನಿಯೋಗ ಮಾಡಿದರೆ, ಹಣದ ಉಬ್ಬರ ಆಗುವುದಿಲ್ಲ. ಹಣವನ್ನು ಸದ್ವಿನಿಯೋಗಗೊಳಿಸಲು ಪ್ರಯತ್ನ ಮಾಡಬೇಕು. ಅಲ್ಲದೆ ಈ ಕೆಲಸಕಾರ್ಯಗಳನ್ನು ಕಂಟ್ರಾಕ್ಟರ್ಸ್ ಮೂಲಕ ಮಾಡಿಸುವುದರ ಬದಲು, ಇಲಾಖೆಯ ಮೂಲಕವೇ ಮಾಡಿಸಿದರೆ, ಹೆಚ್ಚು ಮಿತವ್ಯಯವಾಗುತ್ತದೆ. ಇಂದು ಕಂಟ್ರಾಕ್ಟರುಗಳು, ಬಿಳಿ ಆನೆಗಳಾಗಿದ್ದಾರೆ. ಅವರು ಒಂದು ರೂಪಾಯಿ ಕೆಲಸಕ್ಕೆ 10 ರೂಪಾಯಿಯ ಬಿಲ್ ಮಾಡುತ್ತಾರೆ. ಬದಲಾಗಿ ಇಲಾಖೆಯ ಮೂಲಕ ಮಾಡಿಸಿದರೆ, ಕಡಿಮೆ ಖರ್ಚಿನಲ್ಲಿ ಹೆಚ್ಚು ಕೆಲಸವನ್ನು ಪೂರೈಸಬಹುದು. ಈ ದಿನ ಕಮ್ಯೂನಿಕೇಶನ್ಸ್ ಅಂಡ್ ಬಿಲ್ಡಿಂಗ್ಸ್ ಇಲಾಖೆಯ ಒಂದನ್ನು ತಪ್ಪಿಸಿದರೆ, ಕನಿಷ್ಠ ಒಂದೆರಡು ಕೋಟಿ ರೂಪಾಯಿ ಉಳಿಸಬಹುದು. ಗಾಂಧೀ ಶತಾಬ್ದಿಯ ವರ್ಷದಲ್ಲಿ ಪ್ರೊಹಿಬಿಷನ್ ಬಾಬ್ತು 40 ಕೋಟಿ ರೂಪಾಯಿ ಆದಾಯ ನಿರೀಕ್ಷೆ ಮಾಡುತ್ತಿದ್ದಾರೆ. ಈ ಹಣವನ್ನೆಲ್ಲಾ ನೀರಾವರಿಗೆ ಉಪಯೋಗಿಸಿದರೆ, ರಾಜ್ಯದ ಆರ್ಥಿಕ ಪರಿಸ್ಥಿತಿಯೂ ಖಂಡಿತವಾಗಿಯೂ ಸುಧಾರಿಸುತ್ತದೆ, ಮತ್ತು ಅದರಿಂದ ರಾಜ್ಯದ ಜನತೆಗೂ ಅನುಕೂಲವಾಗುತ್ತದೆ.

ಕೊನೆಯದಾಗಿ ಒಂದು ಮಾತು. ಇಂದು ಕಾವೇರಿ ಜಲಾನಯನದ ಜನರಿಗೆ ಸಂಪೂರ್ಣವಾದ ಅನುಕೂಲವನ್ನು ಮಾಡಲೇಬೇಕು. ಅವರೂ ರಾಜ್ಯದ ಪ್ರಜೆಗಳೇ ! ವೇರ್ ದೇರೀಸ್ ಎ ವಿಲ್ ದೇರೀಸ್ ಎ ವೇ, ಎಂದು, ಇದನ್ನು ನಾವು ಮಾಡಿಯೇ ಮಾಡುತ್ತೇವೆಂದು, ಕಟ್ಟಿಯೇ ಕಟ್ಟುತ್ತೇವೆಂದು ಮನಸ್ಸಿನಲ್ಲಿ ಮಾಡಿದರೆ ಆಗುತ್ತದೆ, ಇಲ್ಲದಿದ್ದರೆ ನಿಮ್ಮ ಅನಾದರಣೆಯಿಂದ ಒಂದು ರಕ್ತ ಕ್ರಾಂತಿಗೆ ಎಡೆ ಕೊಡುವಂತಾಗುತ್ತದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಕಾವೇರಿ ಜಲಾನಯನ ಭೂಮಿಯಲ್ಲಿರತಕ್ಕಂತಹ ಎಲ್ಲಾ ಜಲಾಶಯಗಳನ್ನೂ 1974ನೇ ಇಸವಿಯೊಳಗೇ, ಒಪ್ಪಂದದ ಆಖೈರಿಯೊಳಗೆ ಪೂರೈಸಬೇಕೆಂದು ಹೇಳಿ ಮಾನ್ಯ ಶಿವಪ್ಪನವರು ತಂದಿರತಕ್ಕಂತಹ ನಿರ್ಣಯಕ್ಕೆ ನಾನು ಸಂಪೂರ್ಣವಾಗಿ ಬೆಂಬಲ ಕೊಟ್ಟು ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಈ ನಿರ್ಣಯ ಬಂದಾಗಲೇ ಇದರ ಜೊತೆಯಲ್ಲಿ ಬಂದಿರತಕ್ಕಂತಹ ಒಂದು ತಿದ್ದುಪಡಿಯನ್ನು ನೋಡಿ ನನಗೆ ಬಹಳ ಭಯವಾಯಿತು. ತಿದ್ದುಪಡಿಯಲ್ಲಿರತಕ್ಕಂತಹ ಮೂಲಭೂತವಾದ ವಿಷಯಗಳನ್ನು ತೆಗೆದುಕೊಂಡರೆ, ಈ ನಿರ್ಣಯದಲ್ಲಿದ್ದುದನ್ನು ಮೂಲತಃ ಬೇರು ಕಿತ್ತು ಹಾಕತಕ್ಕ ರೀತಿಯಲ್ಲಿದೆ. ಶ್ರೀಮಾನ್ ಸಿದ್ಧವೀರಪ್ಪನವರು ಮಧ್ಯೆ ಒಂದು ಪ್ರಶ್ನೆ ಕೇಳಿದಾಗ ಸರ್ಕಾರದವರು ನಾಲ್ಕನೆಯ ಪಂಚವಾರ್ಷಿಕ ಯೋಜನೆ ಯಾವಾಗ ಪ್ರಾರಂಭವಾಗುತ್ತದೆಂಬುದನ್ನು ನಿರ್ದಿಷ್ಟವಾಗಿ ಹೇಳುವುದಾಗಲಿ, ಅಥವಾ ಯಾವಾಗ ಆಖೈರು ಆಗುತ್ತದೆಂದು ಹೇಳುವುದಾಗಲಿ ಹೇಳಲಿಲ್ಲ. 74ನೇ ಇಸವಿಯಲ್ಲಿ ಗಣನೆಗೆ ತೆಗೆದುಕೊಳ್ಳುವುದು ಎಂದು ಈ ತಿದ್ದುಪಡಿಯ ಅರ್ಥವಾಗುತ್ತದೆ. ಎರಡನೆಯದಾಗಿ ಆಸ್ ಫಾರ್ ಯ್ಯಾಸ್ ಪಾಸಿಬಲ್, ಎಂದು ಇದೆ. ಅದು ಎಷ್ಟು ಬೇಕಾದರೂ ಮಾಡಬಹುದು. ನಾಳೆ ಅಸ್ತಿಭಾರ ಹಾಕಿ ಅಲ್ಲಿಗೆ ನಿಲ್ಲಿಸಬಹುದು. ಅರ್ಧ ಮಾಡಬಹುದು, ಮುಕ್ಕಾಲು ಮಾಡಬಹುದು ಎಂದು ಅರ್ಥವಾಗುತ್ತದೆ. ಇದು ಮೂಲ ನಿರ್ಣಯಕ್ಕೆ ವಿರೋಧವಾಗುತ್ತದೆಂದು ನಾನು ಭಾವಿಸಿದ್ದೇನೆ. ವೀರೇಂದ್ರ ಪಾಟೀಲರು ಈ ಸಭೆಯ ನಾಯಕರಾಗಿ, ಅನೇಕ ವೇಳೆ ಕಾವೇರಿ ವಿಷಯದಲ್ಲಿ ವಾದ ವಿವಾದಗಳು ಬಂದಾಗ ಬಹಳ ಧೈರ್ಯವಾಗಿ ಹೇಳಿದ್ದಾರೆ. ಅದು ಸತ್ಯವನ್ನು ಮರೆಮಾಚುವುದಕ್ಕೆ ಹೇಳಿದ ಮಾತು. ಉದಾಹರಣೆಗೆ ಮಾನ್ಯ ನಂಜೇಗೌಡರು ವಿದ್ಯುತ್ ಬೋರ್ಡಿನ ಒಂದು ಅಂಕಿಅಂಶವನ್ನು ಇಲ್ಲಿ ಕೊಡುವಾಗ, ಯಾವ್ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಕೊಟ್ಟಿದ್ದಾರೆ, ಎಷ್ಟು ಖರ್ಚಾಗಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅದಕ್ಕೆ ಸರಿಯಾದ ಉತ್ತರವನ್ನು ಹೇಳುವುದು ಬಿಟ್ಟು, ಇವರು, ಆದಕ್ಕೆ ತದ್ವಿರುದ್ಧವಾಗಿ ವಿದ್ಯುಚ್ಛಕ್ತಿಯನ್ನು ಕಾಣದ ಇರತಕ್ಕ ಜನತೆಗೆ ಒದಗಿಸಿದ್ದೇವೆಂದು ಹೇಳಿದ್ದಾರೆ. 1974ನೇ ಇಸವಿಯ ಮೇಲೆ ಮೈಸೂರು ಸರ್ಕಾರಕ್ಕೆ ಕಾವೇರಿ ನೀರಿನ ಮೇಲೆ ಹಕ್ಕು ಉಳಿಯುತ್ತದೆಯೇ, ಇಲ್ಲವೇ ಎಂಬ ಅನುಮಾನ ಬಂದುದರಿಂದ ನಾವು 74ರೊಳಗೆ ಅದನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕೆಂದು ಹೇಳುತ್ತಿರುವುದು. ಉಪಯೋಗಿಸಿಕೊಳ್ಳದಿದ್ದರೆ, ನಮಗೆ ಹಕ್ಕು ಉಳಿಯುವುದಿಲ್ಲವೆಂಬ ಶಂಕೆ ಇದೆ. ಅದನ್ನು ಅವರು ನಿರ್ದಿಷ್ಟವಾಗಿ ಹೇಳುವುದಿಲ್ಲ. ಇದು ನಮಗೂ ಅವರಿಗೂ ಇರತಕ್ಕ ಮೂಲತಃ ವ್ಯತ್ಯಾಸವೆಂದು ನಾನು ಭಾವಿಸುತ್ತೇನೆ. ಆ ರೀತಿಯ ಅಭಿಪ್ರಾಯವನ್ನು ನಾವು ಇಟ್ಟುಕೊಂಡಿರುವುದರಿಂದ 75ರೊಳಗೆ, ನಮ್ಮ ಕೆಲಸವೆಲ್ಲಾ ಆಗಬೇಕು. ಟೆಕ್ನಿಕಲ್ ಡಾಟಾ ಕಮಿಟಿಯವರ ಅಭಿಪ್ರಾಯದ ಪ್ರಕಾರ ಕಾವೇರಿ ಜಲಾನಯನದಲ್ಲಿ 20–25 ಪ್ರೊಜೆಕ್ಟ್ಸ್ ಇವೆ. ಅವುಗಳನ್ನೆಲ್ಲಾ ಪೂರೈಸಬೇಕಾದರೆ, ಸುಮಾರು 110 ಕೋಟಿ ರೂಪಾಯಿ ಬೇಕು. 5 ವರ್ಷಗಳಲ್ಲಿ ಹಣ ಒದಗಿಸಿ, ಕೆಲಸ ನಡೆಸಬೇಕು. 110 ಕೋಟಿ ರೂಪಾಯಿಯನ್ನು ನಮ್ಮ ಮೈಸೂರು ಸರ್ಕಾರದವರಿಗೆ ಒದಗಿಸುವುದಕ್ಕೆ ಸಾಧ್ಯವಿದೆಯೇ, ಇಲ್ಲವೇ ಒದಗಿಸದೆ ಇದ್ದರೆ, ನಮಗೆ ಮುಂದೆ ಏನು ತೊಂದರೆ ಬರುತ್ತದೆ ಎಂಬುದನ್ನು ನೋಡಬೇಕು. 74ನೇ ಇಸವಿಯೊಳಗೆ 110 ಕೋಟಿ ರೂಪಾಯಿ ಒದಗಿಸದೆ ಇದ್ದರೆ, ನಮಗೆ ನೀರಿನ ಹಕ್ಕು ಹೊರಟು ಹೋಗುತ್ತದೆ, ಮತ್ತು ಇದರಿಂದ ಸಹಿಸಲಾರದಂತಹ ನಷ್ಟ ನಮಗೆ ಆಗುತ್ತದೆಂದು ನಮ್ಮ ಭಾವನೆ.

ಆದ್ದರಿಂದ ಮೈಸೂರು ಸರ್ಕಾರ ಈ ಬಗ್ಗೆ ಸರ್ವ ಪ್ರಯತ್ನವನ್ನು ಮಾಡಬೇಕು. ಅನೇಕ ಬಾಬುಗಳಲ್ಲಿ ಖರ್ಚನ್ನು ಕಡಿಮೆ ಮಾಡಬಹುದು. ಆ ಬಾಬುಗಳಿಗೆ ಖರ್ಚು ಮಾಡುವುದನ್ನು ಮುಂದಿನ ಎರಡು ವರ್ಷಗಳು ನಿಲ್ಲಿಸಿದರೂ ಕೂಡ ಏನೂ ತೊಂದರೆಯಾಗುವುದಿಲ್ಲ. 110 ಕೋಟಿ ರೂಪಾಯಿಗಳನ್ನು ಇದಕ್ಕೆ ಕಡ್ಡಾಯವಾಗಿ ಸರ್ಕಾರದವರು ಬಳಸಲೇಬೇಕು. ಕೃಷ್ಣಾ ನದೀ ಜಲಾನಯನ ಭೂಮಿಯಲ್ಲಿಯೂ ಪ್ರಾಜೆಕ್ಟುಗಳು ಆಗಬೇಕು. ಆ ವಿಷಯದಲ್ಲಿ ನಮ್ಮದು ಭಿನ್ನಾಭಿಪ್ರಾಯವಿಲ್ಲ. ನಮಗೆ ಗೊತ್ತಿರತಕ್ಕ ರೀತಿಯಲ್ಲಿ ಆ ಯೋಜನೆಗೆ ಸುಮಾರು 146–150 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಕೃಷ್ಣ, ಘಟಪ್ರಭಾ, ಮಲಪ್ರಭಾ ಮುಂತಾದ ಅನೇಕ ಯೋಜನೆಗಳು ಇವೆ. ಆ ಯೋಜನೆಗಳಿಗೆಲ್ಲಾ 350 ಕೋಟಿ ರೂಪಾಯಿಗಳು ಬೇಕಾಗುತ್ತದೆ,

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಇಂಥಾ ಕಾಲದಲ್ಲಿ 350 ಕೋಟಿ ರೂಪಾಯಿಗಳನ್ನು ಖರ್ಚು ಮಾಡದಿದ್ದರೆ ನೀರಿನ ಮೂಲ ಹಕ್ಕು ಹೊರಟು ಹೋಗುತ್ತದೆ ಎನ್ನುವ ಪರಿಸ್ಥಿತಿ ಇಲ್ಲ. ಇಂಥಾ ಅವಧಿಯೊಳಗಾಗಿ ಆ ಯೋಜನೆಗಳನ್ನೆಲ್ಲಾ ತೆಗೆದುಕೊಂಡು ಕೆಲಸಗಳನ್ನು ಪೂರೈಸಬೇಕು ಎನ್ನುವ ನಿಯಮ ಇಲ್ಲದೇ ಇರುವುದರಿಂದ ಕೃಷ್ಣಾಯೋಜನೆಗೂ ಮತ್ತು ಕಾವೇರಿ ಯೋಜನೆಗೂ ಎಷ್ಟೋ ವ್ಯತ್ಯಾಸ ಇದೆ. 1924 ನೇ ಇಸವಿಯ ಅಗ್ರಿಮೆಂಟ್ ಪ್ರಕಾರ ಕಾವೇರಿ ಬೇಸಿನ್‌ನಲ್ಲಿರತಕ್ಕ ಎಲ್ಲಾ ಪ್ರಾಜೆಕ್ಟುಗಳನ್ನು ಕಟ್ಟಿ ಪೂರೈಸಬೇಕಾಗುತ್ತದೆ. ಸರ್ಕಾರದವರು ಕೊಟ್ಟಿರುವ ಉತ್ತರದ ಪ್ರಕಾರ ಕೃಷ್ಣಾ ಜಲಾನಯನದ ಭೂಮಿಯಲ್ಲಿರತಕ್ಕ ಪ್ರಾಜೆಕ್ಟುಗಳಿಗೆ 1956 ನೇ ಇಸವಿಯಿಂದ ಇಲ್ಲಿಯವರೆಗೆ 37 ಕೋಟಿ 89 ಲಕ್ಷ ಚಿಲ್ಲರೇ ರೂಪಾಯಿಗಳು ಖರ್ಚಾಗಿದೆ. ಇವರು ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ಕಾವೇರಿ ಜಲಾನಯನ ಭೂಮಿಯಲ್ಲಿರತಕ್ಕ ಪ್ರಾಜೆಕ್ಟುಗಳಿಗೆ 8 ಕೋಟಿ 90 ಲಕ್ಷ ರೂಪಾಯಿಗಳು ಖರ್ಚಾಗಿದೆ. ಇದರಿಂದ ಎಷ್ಟರಮಟ್ಟಿಗೆ ನ್ಯಾಯ ಸಿಕ್ಕುತ್ತಿದೆ ಎಂಬುದನ್ನು ಸರ್ಕಾರದವರು ಮತ್ತು ಈ ಶಾಸನ ಸಭಾ ಸದಸ್ಯರು ಯೋಚನೆ ಮಾಡಬೇಕು. 1974 ನೇ ಇಸವಿ ನಮಗೆ ಹತ್ತಿರ ಬರುತ್ತಿದೆ. ಅದರೊಳಗಾಗಿ ನಾವು ಕಾವೇರಿ ನೀರಿನಲ್ಲಿ ನಮಗೆ ಬರಬೇಕಾಗಿರುವ ಹಕ್ಕಿನ ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಹೀಗಿರುವಾಗ ಈ ಯೋಜನೆಗೆ ಇಷ್ಟೊಂದು ಕಡಿಮೆ ಹಣವನ್ನು ಒದಗಿಸಿ ಈ ಕೆಲಸವನ್ನು ಮಾಡುವುದನ್ನು ನೋಡಿದರೆ ಪಕ್ಷಪಾತ ಎಂದು ಹೇಳದೆ ಬೇರೆ ಯಾವುದು ಇದೆ? ಮೈಸೂರು ಇಬ್ಭಾಗವಾಗಬೇಕೆಂಬ ಕೋರಿಕೆಗೆ ಇದು ಪುಷ್ಟಿಯನ್ನು ಕೊಡುತ್ತದೆ. ಸರ್ಕಾರದವರು ಏಕಪಕ್ಷೀಯವಾಗಿ ನೋಡುತ್ತಿದ್ದಾರೆ. ಎಲ್ಲರನ್ನೂ ಒಂದೇ ಸಮನಾಗಿ ನೋಡುತ್ತಿಲ್ಲ. 1974 ನೇ ಇಸವಿಯ ಒಳಗಾಗಿ ಕಾವೇರಿ ಬೇಸಿನ್‌ನಲ್ಲಿರತಕ್ಕ ಎಲ್ಲಾ ಪ್ರಾಜೆಕ್ಟುಗಳನ್ನೂ ಕಟ್ಟಿ ಕಾವೇರಿ ನೀರಿನಲ್ಲಿ ನಮಗೆ ಬರಬೇಕಾಗಿರತಕ್ಕ ನೀರಿನ ಭಾಗವನ್ನು ಉಪಯೋಗ ಮಾಡಿಕೊಳ್ಳದಿದ್ದರೆ ಜನಗಳ ಹಕ್ಕಿಗೆ ಚ್ಯುತಿ ಬರುತ್ತದೆ ಎನ್ನುವುದನ್ನು ಕಂಡೂ ಕೂಡ ಈ ಯೋಜನೆಗಾಗಿ $8\frac{1}{4}$ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿ ಕೃಷ್ಣಾ, ಮಲಪ್ರಭಾ, ಘಟಪ್ರಭಾ ಮುಂತಾದ ಯೋಜನೆಗಳಿಗೆ 37 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಹೀಗಿರುವಾಗ ತಾರತಮ್ಯ ಭಾವನೆ ಮನಸ್ಸಿನಲ್ಲಿ ಇದೆಯೇ ಇಲ್ಲವೇ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಮನಸ್ಸಿನಲ್ಲಿ ಇರುವಂಥಾ ಭಾವನೆಯನ್ನು ಕೃತಿಯಲ್ಲಿ ಮಾಡಿ ತೋರಿಸಿದ್ದಾರೆ. ಇದು ಒಂದೇ ಸಾಕು. ಮೈಸೂರು ಇಬ್ಭಾಗ ಮಾಡದ ಹೊರತು ಉಳಿಗಾಲವಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಹಕ್ಕುಬಾಧ್ಯತೆಗೆ ಚ್ಯುತಿ ಬಾರದಂತೆ ಅದನ್ನು ಕಾಪಾಡಿಕೊಂಡು ಹೋಗತಕ್ಕಂಥ ಪ್ರಯತ್ನವನ್ನು ಸರ್ಕಾರದವರು ಮಾಡಬೇಕು. ಕಾವೇರಿ ನೀರನ್ನು ನಾವು ಉಪಯೋಗ ಮಾಡಿಕೊಳ್ಳದೆ ಹೋದರೆ ಅದು ನಷ್ಟವಾಗಿ ಹೋಗುತ್ತದೆ. ನಾವು ನಮ್ಮ ಹಕ್ಕನ್ನು ಕಳೆದುಕೊಳ್ಳುತ್ತೇವೆ ಎಂದು ಪದೇಪದೇ ಹೇಳತಕ್ಕಂಥ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು, ಶ್ರೀಮಾನ್ ಮಂಚೇಗೌಡರು, ಶ್ರೀಮಾನ್ ದೇವೇಗೌಡರು, ನಾವು ತಂದಂಥ ನಿರ್ಣಯಕ್ಕೆ ಅವರು ತಿದ್ದುಪಡಿಯನ್ನು ಕೊಡುವಾಗ ಎಷ್ಟರಮಟ್ಟಿಗೆ ಅವರು ಈ ವಿಚಾರದಲ್ಲಿ ಶ್ರದ್ಧೆಯನ್ನು ವಹಿಸಿದ್ದಾರೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ಇಂಥಾ ತಿದ್ದುಪಡಿಯನ್ನು ತಂದು ಅವರು ನಮಗೆ ತೊಂದರೆ ಮಾಡುತ್ತಿದ್ದಾರೆ ಎಂದು ಅವರನ್ನು ಆಕ್ಷೇಪಣೆ ಮಾಡದೆ ವಿಧಿಯಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ಅವರು ನಮ್ಮನ್ನು ಹಾಳು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಅವಕಾಶವನ್ನು ಕೊಡಬಾರದು. ಅವರು ಸರ್ವ ಪ್ರಯತ್ನವನ್ನೂ ಮಾಡಿ 1974 ನೇ ಇಸವಿಯ ಒಳಗಾಗಿ ಈ ಕಾವೇರಿ ಬೇಸಿನ್ನಿನಲ್ಲಿ ಆಗಬೇಕಾಗಿರತಕ್ಕ ಎಲ್ಲಾ ಪ್ರಾಜೆಕ್ಟುಗಳನ್ನು ಕಾರ್ಯಗತ ಮಾಡಿ ನಮ್ಮ ಹಕ್ಕನ್ನೂ ಉಳಿಸಿಕೊಳ್ಳಬೇಕು. ಈ ಪ್ರಾಜೆಕ್ಟುಗಳನ್ನು ಕಟ್ಟುವುದಕ್ಕೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುವ ಪ್ರಯತ್ನ ಮಾಡಬೇಕು. ಇದು ನನ್ನ ಒಂದು ನಿರ್ದಿಷ್ಟವಾದ ಅಭಿಪ್ರಾಯ. ಇದನ್ನು ಮಾಡದೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಚನ್ನಬಸಪ್ಪನವರು ಈ ವಿಷಯವನ್ನು ಆಗಿಂದಾಗ್ಗೆ ಈ ಸಭೆಯಲ್ಲಿ ಹೇಳಿದ್ದಾರೆ. ಈ ದೃಷ್ಟಿಯಿಂದ ಕಾವೇರಿ ಬೇಸಿನ್‌ನಲ್ಲಿ ಆಗಬೇಕಾಗಿರತಕ್ಕ ಎಲ್ಲಾ ಪ್ರಾಜೆಕ್ಟುಗಳನ್ನೂ ಕಾರ್ಯಗತ ಮಾಡುವುದಕ್ಕೆ ಸರ್ಕಾರದವರು ಸರ್ವ ಪ್ರಯತ್ನವನ್ನೂ ಮಾಡಬೇಕು. 1966 ನೇ ಇಸವಿಯಲ್ಲಿ ಶ್ರೀಮಾನ್ ದೇವೇಗೌಡರು ಈ ಸಭೆಯಲ್ಲಿ ತಂದಂಥಾ ನಿರ್ಣಯ ಸ್ವಲ್ಪ ಹೆಚ್ಚು ಕಡಿಮೆ ಇದೇ ರೀತಿ ಇತ್ತು. 1974ನೇ ಇಸವಿಯ ಒಳಗಾಗಿ ಕಾವೇರಿ ಬೇಸಿನ್‌ನಲ್ಲಿ ಆಗಬೇಕಾಗಿರತಕ್ಕ ಎಲ್ಲಾ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂಬುದಾಗಿ ಇತ್ತು. ಶ್ರೀಮಾನ್ ಶಿವಪ್ಪನವರು ಈಗ ಈ ಸಭೆಯಲ್ಲಿ ಏನು ನಿರ್ಣಯವನ್ನು ತಂದಿದ್ದಾರೆಯೋ ಅದಕ್ಕೆ ವಿರೋಧಪಕ್ಷದ ಸುಮಾರು 53 ಜನ ಮಾನ್ಯ ಸದಸ್ಯರು ತಮ್ಮ ಸಹಿಗಳನ್ನು ಹಾಕಿದ್ದಾರೆ.

ಕಾವೇರಿ ನೀರಿನಲ್ಲಿ ನಮಗೆ ಬರಬೇಕಾಗಿರುವ ನೀರಿನ ಹಕ್ಕನ್ನು ಉಪಯೋಗಿಸಿಕೊಳ್ಳುವಂಥಾ ಪ್ರಯತ್ನವನ್ನು ಸರ್ಕಾರದವರು ಮಾಡದೇ ಹೋದರೆ ಕರ್ತವ್ಯಲೋಪ ಮಾಡಿದಂತಾಗುತ್ತದೆ. ಕಾವೇರಿ ಜಲಾನಯನ ಭೂಮಿಯಲ್ಲಿರತಕ್ಕ ಒಂದು ಕೋಟಿ ಜನಗಳ ಹಕ್ಕನ್ನು ಕಳೆದುಕೊಳ್ಳುವಂಥಾ ಶಾಪಕ್ಕೆ ಸರ್ಕಾರದವರು ಗುರಿಯಾಗುತ್ತಾರೆ. ಈ ದೃಷ್ಟಿಯಿಂದ ಈಗಲಾದರೂ ಕಾವೇರಿ ಬೇಸಿನ್ನಿನ ಯೋಜನೆಯಲ್ಲಿ ಬರತಕ್ಕ ಎಲ್ಲಾ ಪ್ರಾಜೆಕ್ಟುಗಳನ್ನು ಕಾರ್ಯಗತ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಅಧ್ಯಕ್ಷರೇ, ಇವೊತ್ತು ಈ ಸಭೆಯಮುಂದೆ ಮಂಡಿಸಿರತಕ್ಕ ಕಾವೇರಿ ನದಿಯ ಬೇಸಿನ್‌ನಲ್ಲಿರತಕ್ಕ ಎಲ್ಲಾ ಪ್ರಾಜೆಕ್ಟುಗಳನ್ನೂ ಕಾರ್ಯಗತ ಮಾಡುವುದಕ್ಕೆ ಸಂಬಂಧಪಟ್ಟ ನಿರ್ಣಯದ ಚರ್ಚೆಯಲ್ಲಿ ನಾನು ಭಾರೀ ದುಃಖದಿಂದ ಭಾಗವಹಿಸಬೇಕಾಗಿದೆ. ಕಾರಣವೇನೆಂದರೆ ನಾವು ಯಾವ ಒಂದು ಹೊಸ ವಿಷಯವನ್ನೂ ಇವೊತ್ತು ಸರ್ಕಾರದ ಗಮನಕ್ಕೆ ತರುತ್ತಿಲ್ಲ. ಯಾವ ಒಂದು ಹೊಸ ವಿಷಯವನ್ನೂ ಸಾಧನೆ ಮಾಡುವುದಕ್ಕೆ ಈ ನಿರ್ಣಯ ಈ ಸಭೆಯ ಮುಂದೆ ಬಂದಿಲ್ಲ. ಕರ್ತವ್ಯ ವಿಮುಖವಾಗಿರತಕ್ಕ ಸರ್ಕಾರಕ್ಕೆ ಮತ್ತೊಂದು ಚಾಟಿ ಏಟನ್ನು ಕೊಟ್ಟರೆ ಅವರು ಸರಿಯಾದ ಮಾರ್ಗಕ್ಕೆ ಬಂದಾರು ಎನ್ನುವ ಒಂದು ಉದ್ದೇಶದಿಂದ ಈ ನಿರ್ಣಯ ಈ ಸಭೆಯಮುಂದೆ ಬಂದಿದೆ ಎಂದು ನಾನು ಭಾವಿಸುತ್ತೇನೆ. 1924 ನೇ ಇಸವಿಯ ಅಗ್ರಿಮೆಂಟ್ ಪ್ರಕಾರ ನಮ್ಮ ರಾಜ್ಯಕ್ಕೆ ಕಾವೇರಿ ನದಿಯಿಂದ ಬರಬೇಕಾಗಿರತಕ್ಕ ನೀರನ್ನು, ನೀರಿನ ಹಕ್ಕನ್ನು 1974 ನೇ ಇಸವಿಯ ಒಳಗಾಗಿ ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುತ್ತೇವೆ ಎನ್ನತಕ್ಕಂಥ ಒಂದು ಕೆಟಗಾರಿಕಲ್ ಅಷ್ಯೂರೆನ್ಸ್ ಅನ್ನು ಈ ಹಿಂದೆಯೇ 1964ನೇ ಇಸವಿಯಲ್ಲಿ ಸರ್ಕಾರ ಕೊಟ್ಟಿದೆ. 1966 ನೇ ಇಸವಿಯಲ್ಲಿ ಒಂದು ನಿರ್ಣಯವನ್ನು ಈ ಸಭೆ ಪಾಸು ಮಾಡಿ ಸರ್ಕಾರಕ್ಕೆ ನಿರ್ದಿಷ್ಟವಾದ ಒಂದು ಅಪ್ಪಣೆಯನ್ನು ಮಾಡಿತ್ತು. ಈ ರೀತಿ ಪಾಸು ಮಾಡಿದಂತಹ ನಿರ್ಣಯ ಏನಿವೆ ಇದು ಶ್ರೀಮಾನ್ ದೇವೇಗೌಡರು ತಂದಂಥ ನಿರ್ಣಯ. ಇವೊತ್ತು ಒಂದು ದುರ್ದೈವದ ಸಂಗತಿ ಏನೆಂದರೆ ಶ್ರೀಮಾನ್ ದೇವೇಗೌಡರು ಆ ಹೊತ್ತು ಈ ಸಭೆಯಮುಂದೆ ತಂದಂಥ ನಿರ್ಣಯವನ್ನು ಈ ಸಭೆಯವರು ಪಾಸು ಮಾಡಿ ಏನೊಂದು ತೀರ್ಮಾನವನ್ನು ಮಾಡಿದ್ದಾರೋ ಅದನ್ನು ಗಾಳಿಗೆ ತೂರುವಂಥಾ ಈ ಸರ್ಕಾರದ ಬಗ್ಗೆ ಶ್ರೀಮಾನ್ ದೇವೇಗೌಡರಿಗೆ ಪ್ರೀತಿ ಬಂದು ಇವೊತ್ತು ಅವರು ಆಡಳಿತ ಪಕ್ಷದವರ ಜೊತೆಯಲ್ಲಿ ಹೇಗೆ ಕುಳಿತುಕೊಂಡಿದ್ದಾರೋ ನನಗಂತೂ ಗೊತ್ತಿಲ್ಲ. ಮತ್ತೊಂದು ದುರ್ದೈವದ ಸಂಗತಿ ಏನೆಂದರೆ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಈಗ ಈ ಸಭೆಯಮುಂದೆ ಬಂದಿರತಕ್ಕ ನಿರ್ಣಯಕ್ಕೆ ಒಂದು ತಿದ್ದುಪಡಿಯನ್ನು ಬೇರೆ ಕೊಟ್ಟಿದ್ದಾರೆ. ಅವರು ನಾನು ಮುಂದೆ ಪಿ. ಡಬ್ಲ್ಯು. ಡಿ. ಮಂತ್ರಿಗಳಾದಾಗ ಈ ಕಷ್ಟವನ್ನು ನನ್ನ ಮುಂದೆ ಎಲ್ಲಿ ತರುತ್ತಾರೋ ಏನೋ ಎಂದುಕೊಂಡು ಶ್ರೀಮಾನ್ ಸಿದ್ದಯ್ಯನವರು ಇವೊತ್ತು ಅವರ ಒಂದು ತಿದ್ದುಪಡಿಯನ್ನು ಈ ಸಭೆಯಮುಂದೆ ತಂದಿದ್ದಾರೋ ಏನೋ ಗೊತ್ತಿಲ್ಲ. ಶ್ರೀಮಾನ್ ಸಿದ್ದಯ್ಯನವರನ್ನು ಪಿ. ಡಬ್ಲ್ಯು. ಡಿ. ಮಂತ್ರಿಗಳನ್ನಾಗಿ ಮಾಡಿದರೆ ನನ್ನ ಅಭ್ಯಂತರವೇನೂ ಇಲ್ಲವೆಂದು ಶ್ರೀಮಾನ್ ಸಿದ್ದಯ್ಯನವರಿಗೆ ಸಭಾಧ್ಯಕ್ಷರ ಮೂಲಕ ನಾನು ಹೇಳುತ್ತಿದ್ದೇನೆ. ಆದರೆ ಅವರು ಈ ಒಂದು ತಿದ್ದುಪಡಿಯನ್ನು ಈ ಸಭೆಯಮುಂದೆ ತಂದದ್ದು ಅಷ್ಟು ಸಮಂಜಸವಲ್ಲ ಎಂದು ನಾನು ಹೇಳುತ್ತೇನೆ. ಈಗ ಈ ಮಾನ್ಯ ಸಭೆಯ ಅಧ್ಯಕ್ಷರಾಗಿರತಕ್ಕ ಶ್ರೀಮಾನ್ ಎಸ್. ಡಿ. ಕೊಠಾವಳೆಯವರು ಹಿಂದೆ ಈ ಸಭೆಯ ಸದಸ್ಯರಾಗಿದ್ದಾಗ ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಎಂದರೆ 1959 ನೇ ಇಸವಿ ಏಪ್ರಿಲ್ ತಿಂಗಳು 16ನೇ ತಾರೀಖು ಈ ಸಭೆಯಲ್ಲಿ ಶ್ರೀಮಾನ್ ಎಸ್. ಡಿ. ಕೊಠಾವಳೆಯವರು ಒಂದು ಅನುಮಾನವನ್ನು ವ್ಯಕ್ತಪಡಿಸಿ ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಹಾಕಿದ್ದಾರೆ. ಅದು ಈ ರೀತಿ ಇದೆ:

> "Is it not a fact that this Agreement has adversely affected Mysore and that Mysore Government has not taken advantage of the terms of the Agreement, and if the answer to this is in the affirmative, how is it that the Government has slept over this matter so far? What are that projects that the Madras Government have taken in violation of the agreement?"

ಹೀಗೆ 1959 ನೇ ಇಸವಿಯಲ್ಲಿಯೇ ಭಾರಿ ಕಳಕಳಿಯಿಂದ ಅವರು ಸರ್ಕಾರದವರನ್ನು ಕೇಳಿದ್ದಾರೆ. ಇದನ್ನು ನೋಡಿದರೆ ಈಗ 10 ವರ್ಷಗಳಿಂದ ಸರ್ಕಾರದವರೇನಾದರೂ ನಿದ್ರೆಮಾಡುತ್ತಿದ್ದರೇ ಎಂದು ಕೇಳಬೇಕಾಗಿದೆ. ಈಗ 10 ವರ್ಷಗಳ ಹಿಂದೆಯೇ ಇವರು ಈ ಸಭೆಯ ಸಾಮಾನ್ಯ ಸದಸ್ಯ

(ಶ್ರೀ ಎಚ್. ಎನ್. ನಂಜೇಗೌಡ) -

ರಾಗಿದ್ದಾಗಲೇ ಸರ್ಕಾರದವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಇಂಥಾ ಒಂದು ಗಹನವಾದ ವಿಷಯದಲ್ಲಿ ಯಾವರೀತಿ ಸರ್ಕಾರ ನಿದ್ದೆ ಮಾಡುತ್ತಿದೆ ಎಂದು ಮಾನ್ಯ ಅಧ್ಯಕ್ಷರು 10 ವರ್ಷಗಳ ಹಿಂದೆಯೇ ತರಾಟೆಗೆ ತೆಗೆದುಕೊಂಡದ್ದನ್ನು ನಾನು ಇವೊತ್ತು ಹೇಳಬೇಕಾದ ಪರಿಸ್ಥಿತಿ ಬಂತು. 10 ವರ್ಷಗಳು ಕಳೆದ ನಂತರ ಏನಾಗಿದೆ ಎಂಬುದನ್ನು ನೋಡಿದರೆ ಇದು ದುರ್ದೈವದ ಸಂಗತಿಯಾಗಿದೆ.

5-00 P.M.

ಸರ್ಕಾರದವರು ಹಣವ ತೋಂದರೆ ಇವೆ ಎಂದು ಹೇಳಿದರು. ಒಂದು ವಿಚಾರವನ್ನು ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂದರೆ 1961 ರಿಂದ 1966ರವರೆಗೆ ಕಬಿನಿ ಯೋಜನೆಗೆ 266 ಲಕ್ಷ ರೂಪಾಯಿಗಳನ್ನು, ಹಾರಂಗಿ ಯೋಜನೆಗೆ 200 ಲಕ್ಷ ರೂಪಾಯಿಗಳನ್ನು ಹೇಮಾವತಿ ಯೋಜನೆಗೆ 100 ಲಕ್ಷ ರೂಪಾಯಿಗಳನ್ನು ಮತ್ತು ಕಂಬದಕಡ ಯೋಜನೆಗೆ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲು ಒಪ್ಪಿಸಲಾಗಿತ್ತು. ಇಷ್ಟು ಹಣ ವನ್ನು 1966 ರರೊಳಗೆ ಏತಕ್ಕೆ ಖರ್ಚು ಮಾಡಲಿಲ್ಲ ಎಂದು ಕೇಳುತ್ತೇನೆ. ನಾನು ಕೇಳತಕ್ಕಂಥ ಎಲ್ಲಾ ಪ್ರಶ್ನೆಗಳಿಗೂ ಕೂಡ ಕೊನೆಯಲ್ಲಿ ಸರ್ಕಾರದವರು ಉತ್ತರ ಕೊಡಬೇಕು. ಈ ಯೋಜನೆ ಗಳ ಬಗ್ಗೆ ಸರ್ಕಾರದವರು ತಳೆಯುತ್ತಿರುವ ಧೋರಣೆಯನ್ನು ನೋಡಿದರೆ, ಇವರ ಸ್ವೇಚರ್ ಬಗ್ಗೆ ತರಾಟೆ ತೆಗೆದುಕೊಳ್ಳಬೇಕಾಗಿದೆ. ಇದು ಒಂದು ಕುಸ್ತಿ ಮಾಡತಕ್ಕಂಥ ವ್ಯವಹಾರವಾಯಿತು ಎಂದು ನಾನು ತಿಳಿಯುತ್ತೇನೆ. ಈ ಮೂಲಕ ಜನರನ್ನು ಬಗ್ಗು ಬಡಿಯುತ್ತಿದ್ದೀರಿ. ಸಮಯಕ್ಕೆ ತಕ್ಕ ಉತ್ತರವನ್ನು ಕೊಡುತ್ತಿರುವುದನ್ನು ನೋಡಿದರೆ ನಿಮ್ಮ ಒಂದು ಅಭಿಪ್ರಾಯ ಏನಿದೆ ಎಂಬು ದನ್ನು ತಿಳಿದುಕೊಳ್ಳುವುದು ಕಷ್ಟವಾಗಿದೆ. ಈ ವಿಚಾರದಲ್ಲಿ ನಿಮ್ಮ ಒಂದು ಕುಯುಕ್ತಿ ಬುದ್ಧಿಯನ್ನು ತೋರಿಸುತ್ತಿದ್ದೀರಿ. ನಾವುಗಳು ಎಷ್ಟೇ ಅಹವಾಲು ಮಾಡಿಕೊಂಡರೂ ಕೂಡ ಅದು ಪ್ರಯೋಜನ ವಾಗದಂತಾಗಿದೆ. ಇವತ್ತು ಸರ್ಕಾರದ ಹತ್ತಿರ ಚೀಫ್ ಇಂಜನಿಯರುಗಳ ಒಂದು ಆರ್ಮಿಯೇ ಇದೆ. ಸರ್ಕಾರಕ್ಕೆ ತಿಳಿವಳಿಕೆ ಇಲ್ಲ, ಜಾಣತನ ಇಲ್ಲ, ಸರಿಯಾದ ಅಂಕಿಅಂಶಗಳು ಸರ್ಕಾರಕ್ಕೆ ಸಿಗುತ್ತಿಲ್ಲ ಎಂಬ ಮಾತನ್ನು ನಾನು ಹೇಳುತ್ತಿಲ್ಲ. ಈ ಸರ್ಕಾರದವರು ಕಾವೇರಿ ಬೇಸನ್‌ನಲ್ಲಿ ಬರ ತಕ್ಕಂಥ ಯೋಜನೆಗಳನ್ನು ಕೈಕೊಳ್ಳದೆ ಮುಂದುವರಿಸಿಕೊಂಡು ಬರುತ್ತಿರುವುದು ಏತಕ್ಕಾಗಿ ಎಂಬುದನ್ನು ಹೇಳಬಿಡಲಿ. ಇವತ್ತಾದರೂ ಕೂಡ ನಿಜ ವಿಚಾರವನ್ನು ಹೇಳಬೇಕೆ ವಿನಃ ಇದುವರೆಗೆ ಸಮಯಕ್ಕೆ ತಕ್ಕ ಉತ್ತರವನ್ನು ಕೊಟ್ಟುಕೊಂಡು ಬಂದಂತೆ, ಇವತ್ತು ಸಹ ಏನೋ ಒಂದು ಉತ್ತರವನ್ನು ಹೇಳಬಾರದೆಂದು ಕೇಳಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿ ಯಾವ ಒಂದು ನೀರಾ ವರೀ ಯೋಜನೆಗಳನ್ನು ಕೈಕೊಳ್ಳಬಾರದು ಎಂಬ ಉದ್ದೇಶ ಇದ್ದರೆ ಹೇಳಿಬಿಡಲಿ. ಅದು ಇವತ್ತು ತೀರ್ಮಾನವಾಗಿ ಹೋಗಲಿ. ಇವತ್ತಿನ ಮುಖ್ಯಮಂತ್ರಿಗಳೇ ಹಿಂದೆ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿದ್ದರು. ಆಗಲೂ ಕೂಡ ಸಮಯಕ್ಕೆ ತಕ್ಕಂತೆ ಉತ್ತರ ಕೊಟ್ಟುಕೊಂಡು ಬಂದಿದ್ದಾರೆ. There is no use in riding a dead horse. Let us come to the point. ಬಹುದಿನಗಳವರೆಗೆ ನಮ್ಮನ್ನು ಕತ್ತಲೆಯಲ್ಲಿ ಇಡುವುದಕ್ಕೆ ನಿಮ್ಮ ಕೈಯಿಂದ ಆಗುವುದಿಲ್ಲ. ಇಂತಹ ವಿಚಾರದಲ್ಲಿ ನಮ್ಮನ್ನು ಮೋಸಪಡಿಸುವುದಕ್ಕಾಗುವುದಿಲ್ಲ. ಇದುವರೆಗೆ ಕಾವೇರಿ ಬೇಸಿನ್‌ನಲ್ಲಿ ಎಷ್ಟು ನೀರನ್ನು ಉಪಯೋಗಿಸಿಕೊಂಡಿದ್ದೇವೆ ಎನ್ನುವ ಅಂಕಿಅಂಶ ಸರ್ಕಾರಕ್ಕೇ ಸರಿಯಾಗಿ ಗೊತ್ತಿಲ್ಲ. ಈ ವಿಚಾರವನ್ನು ಅವರೇ ಅನೇಕ ಸಂದರ್ಭಗಳಲ್ಲಿ ಕೊಟ್ಟಿರುವ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಈ ಬಗ್ಗೆ ನಾನು ಕಂತೆ ಕಂತೆಯನ್ನೇ ತೆಗೆದುಕೊಂಡು ಬಂದಿದ್ದೇನೆ. ಎಲ್ಲಾ ರೆಕಾರ್ಡುಗಳನ್ನು ಸಹ ತಂದಿಟ್ಟುಕೊಂಡಿದ್ದೇನೆ, ಸರ್ಕಾರದವರು ಕೊಟ್ಟಿರುವ ಅಂಕಿಅಂಶಗಳನ್ನು ನಾನು ಬರೆದು ಇಟ್ಟುಕೊಂಡಿದ್ದೇನೆ. ಅವುಗಳಲ್ಲಿ ಎಷ್ಟು ವ್ಯತ್ಯಾಸ ಇದೆ ಎಂಬುದನ್ನು ಹೇಳು ತ್ತೇನೆ. 9-4-1963ರಲ್ಲಿ 60 ಟಿ.ಎಂ.ಸಿ. ಯಷ್ಟು ನೀರನ್ನು ಉಪಯೋಗಿಸಿಕೊಂಡಿದ್ದೇವೆ ಎಂದು ಸರ್ಕಾರದವರು ಹೇಳಿದ್ದರು. 1964-65ರಲ್ಲಿ 75 ಟಿ.ಎಂ.ಸಿ. ಯಷ್ಟು ನೀರನ್ನು ಉಪಯೋಗಿಸಿ ಕೊಂಡಿದ್ದೇವೆ ಎಂದು ಹೇಳಿದ್ದರು. 8-4-1964ರಲ್ಲಿ ಇದೇ ಮುಖ್ಯಮಂತ್ರಿಗಳು 114 ಟಿ.ಎಂ.ಸಿ. ಯಷ್ಟು ನೀರನ್ನು ಉಪಯೋಗಿಸಿಕೊಂಡಿದ್ದೇವೆ ಎಂದು ಹೇಳಿದ್ದರು. ಕಾವೇರಿ ಕಣಿವೆಯಲ್ಲಿ ಎಷ್ಟು ನೀರನ್ನು ಉಪಯೋಗಿಸಿಕೊಳ್ಳಲಾಗಿದೆ ಎಂಬ ಬಗ್ಗೆ ಸರಿಯಾದ ಅಂಕಿಅಂಶಗಳು ಸರ್ಕಾರದ ಬಳಿ ಇಲ್ಲವೇ ಎಂಬುದನ್ನು ಕೇಳುತ್ತೇನೆ. -4-1964ರಲ್ಲಿ 100 ರಿಂದ 104 ಟಿ.ಎಂ.ಸಿ. ಯಷ್ಟು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ನಮಗೆ ಇನ್ನೂ ಹಕ್ಕಿದೆ ಎಂಬ ಮಾತನ್ನು ಹೇಳಿದ್ದಾರೆ. 1964ರಲ್ಲಿ ಮತ್ತೊಂದು ಸಲ 134 ಟಿ.ಎಂ.ಸಿ.ಯಷ್ಟು ಉಪಯೋಗಿಸಿಕೊಳ್ಳಲು ನಮಗೆ ಹಕ್ಕಿದೆ ಎಂಬುದನ್ನು

ಹೇಳಿದ್ದಾರೆ. 9-4-1963ರಲ್ಲಿ 91 ಟಿ.ಎಂ.ಸಿ. ಯಷ್ಟು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಹಕ್ಕಿದೆ ಎಂಬ ಮಾತನ್ನು ಹೇಳಿದ್ದಾರೆ. 16-3-1964ರಲ್ಲಿ 176 ಟಿ.ಎಂ.ಸಿಯಷ್ಟು ಉಪಯೋಗಿಸಿಕೊಳ್ಳುವುದಕ್ಕೆ ನಮಗೆ ಅಧಿಕಾರ ಇದೆ ಎಂಬ ಮಾತನ್ನು ಹೇಳಿದ್ದಾರೆ. ಈ ವಿಚಾರಗಳೆಲ್ಲಾ ತಮ್ಮ ಆಫೀಸ್‌ನಲ್ಲಿ ಮುದ್ರಿತವಾಗಿರುವ ಪುಸ್ತಕಗಳಲ್ಲಿ ಇವೆ. ಬಾಯಿಗೆ ಬಂದಂತೆ ಅಂಕಿಅಂಶಗಳನ್ನು ಕೊಡುತ್ತಾ ಬಂದಿದ್ದಾರೆ. ಗಂಭೀರವಾಗಿ ಆಲೋಚನೆ ಮಾಡುವ ಶಕ್ತಿ ಈ ಸರ್ಕಾರಕ್ಕೆ ಇದ್ದಿದ್ದರೆ ಗಾಳಿ ಸಮಾಚಾರವನ್ನೆಲ್ಲಾ ಇಲ್ಲಿ ಹೇಳುತ್ತಿರಲಿಲ್ಲ ಎಂದು ಹೇಳುತ್ತೇನೆ. ನಮ್ಮ ಹಕ್ಕುಬಾಧ್ಯತೆ ಬಗ್ಗೆ ಮತ್ತು 1924ರ ಅಗ್ರಿಮೆಂಟ್ ಬಗ್ಗೆ ಈ ಸರ್ಕಾರಕ್ಕೆ ಸರಿಯಾದ ತಿಳುವಳಿಕೆ ಇಲ್ಲ ಎಂದು ಹೇಳುತ್ತೇನೆ. 1974 ರೊಳಗೆ ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳಲೇ ಬೇಕು ಎಂಬತಕ್ಕಂಥ ಕಾಲಂ 1924ರ ಅಗ್ರಿಮೆಂಟ್‌ನಲ್ಲಿ ಇಲ್ಲ ಎಂಬತಕ್ಕಂಥ ಮಾತನ್ನು ಸಹ ಹೇಳಿದ್ದೀರಿ. ಮತ್ತು ಮಾನ್ಯ ಸಿದ್ಧವೀರಪ್ಪನವರು ಇದೇ ವಿಚಾರದಲ್ಲಿ ಹೋದವರ್ಷ ಒಂದು ಪ್ರಶ್ನೆ ಕೇಳಿದಾಗ, ನಮ್ಮ ಹಕ್ಕು ಹೋಗದಂತೆ ಡಾಕ್ಯುಮೆಂಟರಿ ಎವಿಡೆನ್ಸನ್ನು ತಯಾರು ಮಾಡಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಇದೇ ವಿಚಾರದಲ್ಲಿ ಈಗಾಗಲೇ ಈ ಸಭೆಯ ಮುಂದೆ ಎರಡು ನಿರ್ಣಯಗಳು ಬಂದು ಹೋಗಿವೆ. ಮೊದಲನೆಯ ನಿರ್ಣಯವನ್ನು ಶ್ರೀಮಾನ್ ದೇವೇಗೌಡರು ತಂದಿದ್ದರು. 31-3-1964ರಲ್ಲಿ ಅವರು ತಂದಂತಹ ನಿರ್ಣಯ ಈ ರೀತಿ ಇದೆ:

> "That this House recommends to the Governmrnt to take all necessary steps to utilise fully all the potential resources of the Cauvery waters and also to implement the various project works necessary to utilise the water available."

ಈ ನಿರ್ಣಯಕ್ಕೆ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರು ಉತ್ತರ ಕೊಡುತ್ತಾ ಈ ಈ ರೀತಿ ಹೇಳಿದ್ದಾರೆ: ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ನೀರನ್ನು ಉಪಯೋಗಿಸಿಕೊಳ್ಳುವುದರಲ್ಲಿ ಮಾನ್ಯ ಸದಸ್ಯರಿಗೆ ಎಷ್ಟು ಅಭಿಮಾನ ಮತ್ತು ಆಸಕ್ತಿ ಇದೆಯೋ ಅಷ್ಟೇ ಸರ್ಕಾರಕ್ಕೂ ಇದೆ. ಇದರಲ್ಲಿ ಯಾವ ಅನುಮಾನವೂ ಇಲ್ಲ. ಈ ಬಗ್ಗೆ ಅಗತ್ಯ ಕೆಲಸ ಮಾಡುತ್ತೇವೆ. ಮತ್ತು ಸರ್ಕಾರದ ಪರವಾಗಿ ಆಶ್ವಾಸನೆ ಕೊಡುತ್ತೇನೆ. ಈ ದೃಷ್ಟಿಯಿಂದ ಸಭೆಯ ಮುಂದೆ ತಂದಿರುವ ನಿರ್ಣಯವನ್ನು ಮಾನ್ಯ ಸದಸ್ಯರು ವಾಪಸ್ ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ ಎಂಬುದಾಗಿ. ಇದಕ್ಕೆ ಮಾನ್ಯ ದೇವೇಗೌಡರು ಉತ್ತರ ಕೊಡುತ್ತಾ ಒಂದು ಉದ್ದವಾದ ಭಾಷಣವನ್ನು ಹಿಂದೆ ಮುಂದೆ ತಿರುಗಿಸಿ ಮಾಡಿ ತಮ್ಮ ನಿರ್ಣಯವನ್ನು ವಾಪಸ್ ತೆಗೆದುಕೊಂಡಿದ್ದಾರೆ. ಮತ್ತೆ ಇದೇ ಸದಸ್ಯರು 8-4-1966 ರಲ್ಲಿ ಇದೇ ನಿರ್ಣಯದ ಮೇಲೆ ಮತ್ತೊಂದು ನಿರ್ಣಯವನ್ನು ತೆಗೆದುಕೊಂಡು ಬಂದರು. ಅದು ಈ ರೀತಿ ಇದೆ:

> "That this House urges upon the Government to devise all ways and means of utilising fully before 1974 the waters of the Cauvery Basin."

ಈ ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಯಿತು. ಇಂತಹ ಒಂದು ನಿರ್ದಿಷ್ಟವಾದ ಅಪ್ಪಣೆಯನ್ನು ಕೊಟ್ಟಮೇಲೆ ಆ ಬಗ್ಗೆ ಯಾವ ಒಂದು ಪ್ರಗತಿಯನ್ನು ಸಾಧಿಸದಿದ್ದರೆ He is fit to be impeached by this House for not carrying out tne decisions of this House. This is not a small matter. ಈ ಸಭೆ ಸರ್ವಾನುಮತದಿಂದ ತೀರ್ಮಾನ ತೆಗೆದುಕೊಂಡಿದ್ದನ್ನು ಇಂಪ್ಲಿಮೆಂಟ್ ಮಾಡಲಿಕ್ಕೆ ಆಗದಿದ್ದರೆ ಅಂತಹವರು ಇಲ್ಲಿ ಇರುವುದಕ್ಕೆ ನೈತಿಕವಾದ ಹಕ್ಕು ಇದೆಯೋ ಎಂದು ಕೇಳುತ್ತೇನೆ. ಇದು ಕೇವಲ ಸಭೆಯಲ್ಲಿ ತಲೆಗಳನ್ನು ಎಣಿಸಿ, ಅದರ ಪ್ರಕಾರ ಮಾಡುವಂತಹ ಕೆಲಸವಲ್ಲ. ಪ್ರಜಾಪ್ರಭುತ್ವದಲ್ಲಿ ಮುಖ್ಯಮಂತ್ರಿಗಳು ಸಭೆಗೆ ಏನು ಭರವಸೆಯನ್ನು ಕೊಡುತ್ತಾರೋ, ಆ ಒಂದು ಭರವಸೆಯನ್ನು ಅವರು ಇಂಪ್ಲಿಮೆಂಟ್ ಮಾಡದೆ ಹೋದರೆ ಅವರು ಎಷ್ಟೇ ದೊಡ್ಡವರಾಗಿರಲಿ He must be impeached. 1964ರಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲ್‌ರವರು ಹಾರಂಗಿ ಮತ್ತು ಕಂಬದಕಡಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಸಿಕ್ಕಿದೆ ಎಂದು ಹೇಳಿರುವುದು ಇಲ್ಲಿರುವ ಪ್ರೊಸೀಡಿಂಗ್ಸ್‌ನಲ್ಲೇ ಇದೆ. ಬೇಕಾದರೆ ಓದಿ ನೋಡಿಕೊಳ್ಳಬಹುದು. ತಾರೀಖು 22-2-64 ರಲ್ಲಿ ಟೆಕ್ನಿಕಲ್ ಕ್ಲಿಯರೆನ್ಸ್ ಅವೈಟೆಡ್ ಎಂದು ಹೇಳಿದ್ದೀರಿ. 23-7-1964ರಲ್ಲಿ ಟೆಕ್ನಿಕಲ್ ಕ್ಲಿಯರೆನ್ಸ್ ಸಿಕ್ಕಿದೆ ಎಂದು ಹೇಳಿದ್ದೀರಿ. ಇದರ ಉದ್ದೇಶ ಏನು ಎಂದು ಇಲ್ಲಿ ಕೇಳಬೇಕಾಗಿದೆ. ಇದು ಬಹಳ ಪ್ರಾಮುಖ್ಯವಾದುದು. ಹಿಂದೆ ಇದರ ಬಗ್ಗೆ ಈ ಸಭೆಯಲ್ಲಿ ಚರ್ಚೆಯಾಗಿದೆ. ಆಗ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ನಿಜಲಿಂಗಪ್ಪನವರು ಇದರ ಬಗ್ಗೆ ಎಲ್ಲ ಕೆಲಸಕಾರ್ಯಗಳನ್ನೂ

(ಶ್ರೀ ಎಚ್. ಎನ್. ನಂಜೇಗೌಡ)

ಬೇಗನೆ ಮಾಡುತ್ತೇವೆ ಎಂದು ಹೇಳಿದ್ದರು. ಇದರ ಬಗ್ಗೆ ಪತ್ರಿಕೆಗಳಲ್ಲಿ ಟೆಂಡರುಗಳನ್ನು ಸಹ ಕರೆಯಬೇಕೆಂದು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆಂದು ಮತ್ತು ಇದನ್ನು ಬೇಗನೆ ಪ್ರಾರಂಭ ಮಾಡುತ್ತೇವೆ ಎಂತಲೂ ಹೇಳಿದ್ದರು. ಹಾರಂಗಿ ಯೋಜನೆಗೆ ಟೆಂಡರನ್ನು ಕರೆದ ಮೇಲೆ ಅದನ್ನು ಕ್ಯಾನ್ಸಲ್ ಮಾಡಿ ಎರಡನೇ ಟೆಂಡರು ಕರೆದು ಕೆಲಸಮಾಡುತ್ತೇವೆಂದು ಆಗ ಇದ್ದ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರವರೂ ಹೇಳಿದ್ದುದನ್ನು ಸಹ ಮಾಡದೆ ಇದರ ಹಣವನ್ನು ದುರುಪಯೋಗ ಮಾಡಿದ್ದಾರೆ. ಇತ್ತೀಚೆಗೆ ಸುಮಾರು ಹನ್ನೊಂದುವರೆ ಕೋಟಿ ರೂಪಾಯಿಗಳನ್ನು ಅಲಮಟ್ಟಿ ಯೋಜನೆಗೆ ಖರ್ಚುಮಾಡಿ ಆ ಯೋಜನೆಯ ಕೆಲಸವನ್ನು ಮಾಡುತ್ತಿದ್ದಾರೆ. ಹಣವೇ ಇಲ್ಲ ಎಂದು ಹೇಳಿ ಇಲ್ಲಿ ಖರ್ಚು ಮಾಡುತ್ತಿರುವುದು ನೋಡಿದರೆ ಇದು ಒಂದು ನಿಗೂಢ ರಹಸ್ಯದಂತೆ ಇದೆ. ಹೋದ ಸಾರಿ ಈ ಸಭೆಯಲ್ಲಿ ಇದರ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಸರಕಾರದವರ ಗಮನಕ್ಕೆ ತಂದು ನಮ್ಮ ಎಲ್ಲ ನೀರಾವರಿ ಯೋಜನೆಗಳನ್ನು ಬೇಗನೆ ಪೂರೈಕೆ ಮಾಡಬೇಕು ಎಂದೂ ಮದ್ರಾಸು ಸರಕಾರದವರು ಹೇಮಾವತಿ ಯೋಜನೆ ಮಾಡುವುದಕ್ಕೆ ತಡೆ ಮಾಡಿ ನಮ್ಮ ಯೋಜನೆಗಳು ಕಾರ್ಯಗತವಾಗದಂತೆ ಮಾಡುತ್ತಿದ್ದಾರೆ. ಇದಕ್ಕೆ ಅವಕಾಶ ಕೊಡಬಾರದು ಎಂದು ನಾವು ಸಲಹೆ ಮಾಡಿದ್ದೆವು. ಆದರೂ ಇದರ ಬಗ್ಗೆ ಏನನ್ನೂ ಹೇಳದೆ ಇರುವುದು ನೋಡಿದರೆ ಇದು ಒಂದು ನಿಗೂಢ ರಹಸ್ಯವಾಗಿಯೇ ಇದೆಯೆಂದು ಕಾಣುತ್ತದೆ. 1924 ಅಗ್ರಿಮೆಂಟು ಪ್ರಕಾರ ಮೈಸೂರು ಸರಕಾರದವರು ಕೇಂದ್ರದವರನ್ನು ಒತ್ತಾಯ ಮಾಡಿದರೆ ಹೇಮಾವತಿ ಯೋಜನೆಗೆ ಒಪ್ಪುತ್ತಾರೆ. ಇದಕ್ಕಾಗಿ ರಾಜ್ಯ ಸರಕಾರದ ನಿಲುವು ಬದಲಾವಣೆಯಾಗಲೇ ಬೇಕು. ಇದು ಬಹು ಮುಖ್ಯ ಪ್ರಶ್ನೆ. 1924ನೇ ಅಗ್ರಿಮೆಂಟು ಪ್ರಕಾರ ನಾವು ಎಲ್ಲ ನೀರಾವರಿ ಯೋಜನೆಗಳನ್ನು ಪೂರ್ಣ ಮಾಡಬೇಕು ಇದಕ್ಕಾಗಿ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡಬೇಕೆಂದು ಕೇಂದ್ರದವರನ್ನು ಕೇಳಿ ಪಡೆಯಬೇಕು ಮತ್ತು ಬೇಗನೆ ಕೆಲಸಗಳನ್ನು ಕಾರ್ಯಗತ ಮಾಡಬೇಕು. ಇನ್ನು ಎರಡನೇ ಪ್ರಶ್ನೆ ಎಂದರೆ ಭಾರಿ ನೀರಾವರಿ ಯೋಜನೆಗಳನ್ನು ಮಾಡುವಾಗ ಅದರಲ್ಲಿ ಯಾವಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಮೊದಲು ನೋಡಿ ಮಾಡಬೇಕು. ಇದರಲ್ಲಿ ರೀಜನಲ್ ಇಂಬ್ಯಾಲೆನ್ಸ್ ಇರಬಹುದು. ಭಾವೈಕ್ಯತೆ ಸಾಧಿಸಬೇಕಾದರೆ ಇವನ್ನೆಲ್ಲಾ ಸರಿದೂಗಿಸಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಅವರ ಉತ್ತರದಲ್ಲಿ ಸರಿಯಾದ ನಿರ್ದಿಷ್ಟವಾದ ಉತ್ತರ ಕೊಡಬೇಕು ಎಂದು ಕೇಳುತ್ತೇನೆ. ಇಲ್ಲಿ ಸ್ಪೆಷಲ್ ಆಗಿ ಈ ರೆಸಲ್ಯೂಷನನಲ್ಲಿ ಏನು ಹೇಳಿದ್ದೇವೆ ಅದರಂತೆ ಹಾರಂಗಿ, ಹೇಮಾವತಿ ಇತ್ಯಾದಿ ಎಲ್ಲಿ ಯೋಜನೆಗಳನ್ನೂ ನಿಲ್ಲಿಸದೇ ಪೂರ್ಣವಾಗಿ ಮುಂದುವರಿಸಲೇಬೇಕು. ಇಲ್ಲಿಯುವರೆಗೂ ಇದರ ಬಗ್ಗೆ ಸಮಾಧಾನಕರವಾದ ಉತ್ತರ ಕೊಟ್ಟಿಲ್ಲ. ಈಗಲಾದರೂ ಇದರ ಬಗ್ಗೆ ರಾಜ್ಯದ ಜನರ ಹಿತದೃಷ್ಟಿಯಿಂದ ತೀವ್ರವಾದ ಕೆಲಸಗಳಾಗುವಂತೆ ಮಾಡುವುದು ಬಹಳ ಅಗತ್ಯವಾಗಿದೆ. ಇದಕ್ಕೆ ಹಣವಿಲ್ಲ ಎಂದು ಸುಮ್ಮನೆ ಕೂರಬಾರದು. ಎಲ್ಲಿಂದಲಾದರೂ ಇದಕ್ಕೆ ಹಣ ಒದಗಿಸಿ ಎಲ್ಲಾ ಯೋಜನೆಗಳನ್ನೂ ಪೂರ್ಣವಾಗಿ ಕಾರ್ಯಗತಗೊಳಿಸಬೇಕು ಎಂದು ಇಲ್ಲಿ ಒತ್ತಾಯ ಮಾಡುತ್ತೇನೆ. ಇಲ್ಲದೇ ಇದ್ದರೆ the country would write your name in black letters as an abettor of bifurcation. ಇಷ್ಟನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ.ಕೆ. ಬೊಮ್ಮೇಗೌಡ (ಕೃಷ್ಣರಾಜಪೇಟೆ).— ಮಾನ್ಯ ಅಧ್ಯಕ್ಷರೇ, ಅನೇಕ ಸಾರಿ ಕಾವೇರಿ ಬೇಸಿನ್, ಕೆಳಗೆ ಇರುವ ನೀರನ್ನು ಯಾವರೀತಿ ಉಪಯೋಗಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಇಲ್ಲಿ ಚರ್ಚೆ ಮಾಡಿದ್ದೇವೆ. ಆದುದರಿಂದ ಇದು ಹೊಸದೇನೂ ಅಲ್ಲ. ಇದರಲ್ಲಿರುವ ನೀರನ್ನುಪಯೋಗಿಸುವ ಕಾತುರತೆಯಿಂದಾಗಿ ಇದರ ಪ್ರಾಮುಖ್ಯತೆ ಹೆಚ್ಚಾಗಿದೆ ಆದರೆ ಸರಕಾರ ಇದರ ಕಡೆ ಹೆಚ್ಚು ಗಮನ ಕೊಟ್ಟಿಲ್ಲ ಎಂದು ಹೇಳಿದರೆ ಅದು ತಪ್ಪಾಗಲಾರದು. 1924ರಲ್ಲಿ ಅಗ್ರಿಮೆಂಟು ಆದಮೇಲೆ ಮೈಸೂರು ಸರ್ಕಾರದವರು ಯಾವಯಾವ ಕಾರ್ಯಕ್ರಮಗಳನ್ನು ಮಾಡಿದ್ದಾರೆ ಎನ್ನುವುದನ್ನು ಇಲ್ಲಿ ಹೇಳುವುದಕ್ಕಾಗುವುದಿಲ್ಲ ಮತ್ತು ಸುಮ್ಮನೆ ಒಂದು ರೀತಿಯ ಒತ್ತಾಯದ ಮೇಲೆ ನಮ್ಮ ತಲೆಯಮೇಲೆ ಹೊರಿಸಿದಂತಹ ಅಗ್ರಿಮೆಂಟಾಗಿದೆ ಇದು ಎಂದು ಹೇಳಿದರೂ ಅದು ತಪ್ಪಾಗಲಾರದು. ನಮ್ಮ ರಾಜ್ಯದಲ್ಲಿ ಎಷ್ಟುಮಟ್ಟಿಗೆ ಕಾವೇರಿ ನದಿಯ ನೀರನ್ನುಪಯೋಗ ಮಾಡಿಕೊಂಡು ಬಂದಿದ್ದೇವೆ ಮತ್ತು ಮದ್ರಾಸಿನವರು ಯಾವ ರೀತಿ ಉಪಯೋಗ ಮಾಡಿಕೊಂಡು ಬಂದಿದ್ದಾರೆ ಎನ್ನುವುದನ್ನು ಸ್ವಲ್ಪ ಆಲೋಚನೆ ಮಾಡಿ ನೋಡಿದರೆ ಮದ್ರಾಸಿನವರು ಬಹಳ ಮುಂದೆ ಹೋಗಿದ್ದಾರೆ ಮತ್ತು ಅವರು ನಮ್ಮನ್ನು ಲೆಕ್ಕಕ್ಕೇ ಇಟ್ಟುಕೊಂಡಂತೆ ಕಾಣುವುದಿಲ್ಲ. ನಾವು ಇದರ ಕೆಳಗೆ ಮಾಡುವ ಯೋಜನೆಗಳನ್ನು ಮಾಡದೆ ಕಾಲವಿಳಂಬ ಮಾಡಿದುದರಿಂದ ನಮಗೆ ಶಕ್ತಿ ಇಲ್ಲ ಮತ್ತು ನಮ್ಮ ಸರಕಾರದಲ್ಲಿ ಬಲವಿಲ್ಲ ಎಂದು ಹೇಳಿದರೂ ಅದು ತಪ್ಪಾಗುವುದಿಲ್ಲ. ಅಗ್ರಿಮೆಂಟು ಆದಮೇಲೆ ಎಷ್ಟು ಪ್ರಾಜೆಕ್ಟುಗಳನ್ನು ಮಾಡಬೇಕಾಗಿತ್ತು ಅವನ್ನು ಮಾಡಲು ಮೈಸೂರು ಸರಕಾರ ತಕ್ಕ ಕಾರ್ಯ

ಕ್ರಮವನ್ನು ನಿಗದಿ ಮಾಡಲಿಲ್ಲ. ಇದರಿಂದ ನಮ್ಮ ಜನರಿಗೆ ತೊಂದರೆಗಳಾದವು. ಅಗ್ರಿಮೆಂಟಿನಲ್ಲಿರುವಂತೆ ಶ್ರೀರಾಮ ದೇವರ ಎಕ್ಸ್‌ಟೆನ್‌ಷನ್ ನಾಲಾ ಕೆಲಸವನ್ನು ಪೂರೈಕೆ ಮಾಡಿದ್ದರೆ ಸುಮಾರು 2800 ಎಕರೆಗೆ ನೀರು ಸಿಕ್ಕಿ ಉಪಯೋಗ ಮಾಡಬಹುದಾಗಿತ್ತು ಮತ್ತು ಇದನ್ನು ಸುಮಾರು 20–22 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಮಾಡಿ ಪೂರೈಸಬಹುದಾಗಿತ್ತು. ಆ ರೀತಿ ಮಾಡಲು ಏನು ಅಡ್ಡಿ ಆತಂಕಗಳು ಬಂದವು ಎನ್ನುವುದು ನಮಗೆ ಗೊತ್ತಾಗಲಿಲ್ಲ. ಇದರಿಂದ ನಮ್ಮಲ್ಲಿರುವ ಕಾವೇರಿ ನದಿ ನೀರನ್ನು ಸರಿಯಾಗಿ ಉಪಯೋಗ ಮಾಡಿಲ್ಲ ಎನ್ನುವುದು ಮನವರಿಕೆಯಾಗುತ್ತದೆ. ಇದು ಒಂದು ಪಕ್ಷದ ಪ್ರಶ್ನೆಯಲ್ಲ. ದೇಶದ ಪ್ರಶ್ನೆ. ಈ ಏರಿಯಾದಲ್ಲಿ ಬರುವ ನೀರನ್ನು ಸರಕಾರ ಸರಿಯಾಗಿ ಉಪಯೋಗ ಮಾಡಿಕೊಳ್ಳದೇ ದೇಶದ ಜನತೆಗೆ ಒಂದು ದೊಡ್ಡ ಅಪರಾಧ ಮಾಡಿದೆ ಎನ್ನುವುದು ಸರ್ಕಾರಕ್ಕೇ ಮನವರಿಕೆಯಾಗಬೇಕು. ಮದ್ರಾಸು ಸರಕಾರದವರು ಯಾವ ರೀತಿಯಾಗಿ ಅವರ ಭಾಗದ ನೀರನ್ನು ಯೋಜನೆಯ ಮೂಲಕ ಉಪಯೋಗ ಮಾಡುತ್ತಿದ್ದಾರೆ ಎನ್ನುವುದನ್ನು ನೋಡಿದರೆ ಸುಮಾರು ಲಕ್ಷಾಂತರ ಎಕರೆಗಳಿಗೆ ನೀರನ್ನುಪಯೋಗಿಸುತ್ತಾ ಇದ್ದಾರೆ ಎಂದು ಹೇಳಬಹುದು. ಇದನ್ನು ಮರೆಯಬಾರದು. ಇದರಲ್ಲಿ ನಮ್ಮದು ಒಂದು ನ್ಯಾಚುರಲ್ ರೈಟ್ ಇದೆ. ಮೈಸೂರಿನಲ್ಲೇ ಈ ನದಿ ಹರಿಯುತ್ತಿರುವುದರಿಂದ ನಾವು ಈ ನೀರನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲೇ ಬೇಕು. ಆಡಳಿತ ನಡೆಸುವವರು ಏನೋ ಒಂದು ರೀತಿಯಾಗಿ ಜನರನ್ನು ನಾವು ಉದ್ಧಾರ ಮಾಡುತ್ತಿದ್ದೇವೆ ಎಂದು ಹೇಳುವುದು ಬರೀ ಭ್ರಮೆ. ಇದನ್ನು ಯಾರೂ ಒಪ್ಪುವ ಮಾತಲ್ಲ. ಇದರ ಬಗ್ಗೆ ಸರಕಾರದ ಮೇಲೆ ಬೇಕಾದಷ್ಟು ಆಪಾದನೆಗಳು ಬಂದಿದ್ದರೂ ಸರಕಾರ ಸಾಕಷ್ಟು ಶ್ರದ್ಧೆ ವಹಿಸಲಿಲ್ಲ. ಶರಾವತಿ ಯೋಜನೆ ಮಾಡಿ ಅದಕ್ಕಾಗಿ 100–120 ಕೋಟಿಯಷ್ಟು ಖರ್ಚು ಮಾಡಿ ಇದರಿಂದ ಉತ್ಪತ್ತಿ ಆಗುವ ಪವರನ್ನು ಉಪಯೋಗಿಸಿಕೊಳ್ಳಲಾರದೆ ಹೊರ ಪ್ರಾಂತ್ಯಗಳಿಗೆ ಮಾರುತ್ತಿದ್ದೀರಿ. ನಾವು ಶರಾವತಿಗೆ ಖರ್ಚು ಮಾಡುವುದು ಬೇಡ ಎಂದು ಹೇಳುತ್ತಿಲ್ಲ. ಸರಕಾರದಲ್ಲಿ ಇಂತಹ ಸಮಸ್ಯೆಯನ್ನು ಬಗೆಹರಿಸುವ ಒಂದು ನೈತಿಕತೆ ಇಲ್ಲ ಎಂದು ಹೇಳಬೇಕಾಗಿದೆ. ಇಲ್ಲಿರುವ ನೀರನ್ನು ಪೂರ್ಣವಾಗಿ ಉಪಯೋಗ ಮಾಡಬೇಕು ಮತ್ತು ಈ ಸಮಸ್ಯೆಯನ್ನು ಬಗೆಹರಿಸಲು ಆದಷ್ಟು ತೀವ್ರವಾಗಿ ಪ್ರಯತ್ನ ಮಾಡಿ ಎಲ್ಲ ನೀರನ್ನೂ ಜನತೆಗಾಗಿ ಉಪಯೋಗ ಮಾಡಿಕೊಡಬೇಕು ಎಂದು ಇಲ್ಲಿ ನಾವು ಒತ್ತಾಯದಿಂದ ಸರ್ಕಾರಕ್ಕೆ ಹೇಳುತ್ತಿದ್ದೇವೆ. ಇದಕ್ಕಾಗಿ ನೀರಾವರಿ ಯೋಜನೆಗಳನ್ನು ಮಾಡಲೇ ಬೇಕು ಮತ್ತು ಇದಕ್ಕೆ ಎಷ್ಟು ಕೋಟಿ ರೂಪಾಯಿಗಳಾಗಲೀ ಅದನ್ನು ಒದಗಿಸಬೇಕು.

ಈಗ ಎಸ್ಟಾಬ್ಲಿಷ್‌ಮೆಂಟ್‌ಗೆ 40–50 ಲಕ್ಷ ರೂಪಾಯಿ ಖರ್ಚಾಗುತ್ತದೆ. ಇಷ್ಟು ವರ್ಷದ ವರೆಗೆ ಈ ಕೆಲಸಗಳನ್ನು ಕೈಗೊಂಡಿದ್ದರೆ 15–16 ಕೋಟಿ ರೂಪಾಯಿಯಷ್ಟು ಕೆಲಸ ಮುಗಿಯುತ್ತಿತ್ತು. ಹೇಗಾದರೂ ಮಾಡಿ ಈ ಪ್ರಾಜೆಕ್ಟ್‌ಗಳನ್ನು ಮುಂದುವರಿಸಬೇಕು ಎಂದು ನಾನು ಹೇಳುತ್ತೇನೆ. ನಮ್ಮ ಸ್ನೇಹಿತರು ಹೇಳಿದ ಹಾಗೆ ಈವೊತ್ತಿನ ದಿವಸ ಆಂಧ್ರದವರು ನಾಗಾರ್ಜುನ ಸಾಗರ ಪ್ರಾಜೆಕ್ಟ್ ಕೆಲಸವನ್ನು 100–120 ಕೋಟಿ ರೂಪಾಯಿ ಖರ್ಚು ಮಾಡಿ ಮುಗಿಸಿಯೇ ಬಿಟ್ಟರು. ಈಗ ಅದನ್ನು ಹೇಗೆ ತಡೆಗಟ್ಟುತ್ತೀರಿ ? ಈ ರೀತಿಯಾಗಿ ನಮ್ಮಲ್ಲೂ ಸಹ ಇಂತಹ ಕೆಲಸವನ್ನು ಮೊದಲೇ ಪ್ರಾರಂಭ ಮಾಡಬೇಕಾಗಿತ್ತು. ಇದರ ಬಗ್ಗೆ ನೀವು ಮೊದಲಿನಿಂದಲೂ ಏನೂ ಕೆಲಸ ಮಾಡುತ್ತಾ ಬರಲಿಲ್ಲ. ನಿಮಗೆ ಬೇಕಾಗಿರುವುದು ಅಧಿಕಾರ. ಹೇಗಾದರೂ ಆಗಲಿ ಈ ಅಧಿಕಾರ ಮುಂದುವರಿಸಿಕೊಂಡು ಹೋದರೆ ಸಾಕು ಎನ್ನುತ್ತೀರಿ. ನೀವು ಈವೊತ್ತಿನ ದಿವಸ ದೇಶದಲ್ಲಿ ರಚನಾತ್ಮಕವಾದ ಅಭ್ಯುದಯ ಕಾರ್ಯಗಳನ್ನು ಎಷ್ಟರ ಮಟ್ಟಿಗೆ ಮಾಡುತ್ತಿದ್ದೀರೆಂದು ನಾವು ಜನಕ್ಕೆ ತಿಳಿಸಬೇಕಾಗಿದೆ. ಆ ವಿಷಯಗಳನ್ನು ನಿಮ್ಮ ಮುಂದೆ ಹೇಳುವುದಕ್ಕಾಗುವುದಿಲ್ಲ,

ಈಗ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಬಗ್ಗೆ ಬೇರೆ ಬಿಲ್ ತಂದಿದ್ದೀರಿ. ನಮಗೂ ಕೂಡ ಅದರ ಬಗ್ಗೆ ಒಳ್ಳೆಯ ಅಭಿಪ್ರಾಯ ಇದೆ. ಆ ಬಿಲ್ಲನ್ನು ತರಬೇಕೆಂದು ನಾನೂ ಕೂಡ ಒತ್ತಾಯ ಮಾಡುತ್ತೇನೆ. ಆದರೆ ಅದನ್ನು ತರತಕ್ಕಂಥ ಉದ್ದೇಶ ಒಳ್ಳೆಯದಾಗಿದ್ದರೂ ಅದನ್ನು ತಂದಮೇಲೆ ನಿಮಗೆ ಯಾವ ರೀತಿ ಬೇಕೋ ಆ ರೀತಿ ಕೆಲಸಗಳನ್ನು ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂದು ನಮಗೆ ಅನುಮಾನಕ್ಕೆ ಆಸ್ಪದವಾಗಿದೆ. ಹಿಂದೆ ಕಂದಾಯವನ್ನು ಹೆಚ್ಚಿಸಿದಾಗ ಕಂದಾಯ ಹೆಚ್ಚಿಸಿಲ್ಲ ಎನ್ನುವ ಮಾತನ್ನು ಹೇಳಿದಿರಿ. ಈವೊತ್ತು ಕಂದಾಯ ವಸೂಲ್ಮಾಡಿದ ರಶೀತಿ ತೋರಿಸುತ್ತೇನೆ. ಒಂದು ಎಕರೆಗೆ 100 ರೂಪಾಯಿಗಿಂತಲೂ ಹೆಚ್ಚು ವಸೂಲ್ಮಾಡಿರುವುದನ್ನೂ ಸಹ ಬೇಕಾದರೆ ತೋರಿಸುತ್ತೇನೆ. ಅದೇ ರೀತಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಎಂದು ಹೇಳಿ ಯಾವ ಯಾವ ಕಡೆ ಎಷ್ಟೆಷ್ಟು ವಸೂಲ್ಮಾಡುತ್ತೀರೋ ಎನ್ನುವ ಅನುಮಾನ ನಮಗೆ ಉಂಟಾಗಿದೆ. ಇದರ ಬಗ್ಗೆ ನಿಮ್ಮ ಮನಸ್ಸನ್ನು ಬಿಚ್ಚಿ ಯಾವುದನ್ನೂ ಹೇಳುತ್ತಾ ಇಲ್ಲ. ಅಲ್ಲದೆ ಜನಗಳಿಗೆ ಈವಾಗ ಬಹಳ ಕಷ್ಟಕಾಲ ಬಂದಿದೆ. ಇದುವರೆಗೆ ಭದ್ರಾ ಪ್ರಾಜೆಕ್ಟ್ ಒಂದನ್ನು ಬಿಟ್ಟರೆ ಇನ್ನಾವ ಪ್ರಾಜೆಕ್ಟನ್ನೂ ತೆಗೆದು

(ಶ್ರೀ ಎಂ. ಕೆ. ಬೊಮ್ಮೇಗೌಡ)

ಕೊಂಡಿಲ್ಲ ಎಂದು ಹೇಳುತ್ತೇನೆ. ನಿಮಗೆ ಕೇಂದ್ರದ ಸಹಾಯ ಹೆಚ್ಚು ಸಿಕ್ಕುತ್ತಾ ಇಲ್ಲ. ಭಕ್ರಾ ನಂಗಲ್ 700 ಕೋಟಿ ರೂಪಾಯಿ ಯೋಜನೆ. ಇದರ ಖರ್ಚನ್ನು ಕೇಂದ್ರದವರೇ ಪೂರ್ತಿ ನಿರ್ವಹಿಸಿದ್ದಾರೆ. ನಮಗೆ ಕೇಂದ್ರದಿಂದ ಸಾಕಷ್ಟು ಸಹಾಯ ಬಾರದೇ ಇರುವುದನ್ನು ನೋಡಿದರೆ ನಿಮ್ಮ ಲೀಡರ್‌ಷಿಪ್‌ನ್ನು ಚೆನ್ನಾಗಿ ಬಲಪಡಿಸಿಕೊಂಡಿಲ್ಲ ಎಂದು ನಮಗೆ ಕಾಣಿಸುತ್ತದೆ. ನೀವು ಅವರ ಕೈಗೊಂಬೆಗಳಾಗಿದ್ದೀರೋ ಏನೋ ಎಂದು ಅನುಮಾನವಾಗುತ್ತಿದೆ. ಈವೊತ್ತಿನ ದಿವಸ ಗ್ರಾಮಾಂತರ ಪರಿಸ್ಥಿತಿಯನ್ನು ತೆಗೆದುಕೊಂಡರೆ ಅಲ್ಲಿಯ ಜನಗಳಿಗೆ ಎರಡು ಹೊತ್ತು ಊಟವೂ ಕೂಡ ಸಿಕ್ಕುವುದಿಲ್ಲ. ಅಂಥಾದನ್ನೆಲ್ಲಾ ಅರಿತುಕೊಂಡು ಅವರಿಗೆ ಬೇಕಾದ ಅಭ್ಯುದಯ ಕಾರ್ಯಗಳನ್ನು ಅಂದರೆ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವುದರಲ್ಲಿ ಉದಾಸೀನ ಮಾಡಬಾರದು. ಇದನ್ನು ನಿಮಗೆ ಮಾಡುವುದಕ್ಕೆ ಶಕ್ತಿ ಇಲ್ಲದಿದ್ದರೆ ಕೇಂದ್ರ ಸರ್ಕಾರದವರನ್ನು ಕೇಳಿಯಾಗಲಿ ಮತ್ತೆ ಇನ್ನಾರನ್ನಾದರೂ ಕೇಳಿಯಾಗಲಿ ಕಾರ್ಯಗತವಾಗುವಂತೆ ಮಾಡುವ ಪ್ರಯತ್ನ ಮಾಡಬೇಕು. ಇಲ್ಲದೇ ಹೋದರೆ ಸರ್ಕಾರ ನಿಶ್ಶಕ್ತತೆ ತೋರಿಸಿದರೆ ಅದರಿಂದ ಜನರಿಗೆ ಏನೂ ಪ್ರಯೋಜನವಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇಷ್ಟು ಹೇಳಿ, ನನಗೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಮಾನ್ಯ ಅಧ್ಯಕ್ಷರೇ, ಈ ದಿವಸ ಶ್ರೀಮಾನ್ ಶಿವಪ್ಪನವರು ತಂದಿರತಕ್ಕಂಥ ನಿರ್ಣಯ ನಮ್ಮ ಮುಂದೆ ಇದೆ. ಅದಕ್ಕೆ ಶ್ರೀಮಾನ್ ಸಿದ್ದಯ್ಯನವರೂ ಮತ್ತು ಇತರೇ ಸ್ನೇಹಿತರೂ ಸೇರಿ ಒಂದು ಅಮೆಂಡ್‌ಮೆಂಟ್ ಕೂಡ ಕಳುಹಿಸಿದ್ದಾರೆ. ಈ ಎರಡನ್ನೂ ಸಹ ನಾವು ಮುಂದಿಟ್ಟುಕೊಂಡು ಚರ್ಚೆ ಮಾಡುತ್ತಾ ಇದ್ದೇವೆ. ಈ ನಿರ್ಣಯ ಯಾವುದು ಎಂದರೆ ಕಾವೇರಿ ನದಿ ನೀರಿನ ಉಪಯೋಗ ಜಾಗ್ರತೆ ಆಗಬೇಕು ಎನ್ನುವುದನ್ನು ತಿಳಿಸತಕ್ಕಂಥಾದ್ದು. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರ ಒತ್ತಾಯವೂ ಇರುವುದರಿಂದ ಇದಕ್ಕೆ ಸಾಕಷ್ಟು ಹಣವನ್ನು ಒದಗಿಸಿ ಜಾಗ್ರತೆ ಕಾವೇರಿ ಬೇಸಿನ್‌ನಲ್ಲಿರತಕ್ಕಂಥಾ ಎಲ್ಲಾ ಜಲಾಶಯಗಳನ್ನೂ ಕಟ್ಟಿ ಅದರ ನೀರನ್ನು ಉಪಯೋಗಿಸಬೇಕೆನ್ನುವ ದೃಷ್ಟಿಯಿಂದ 1966ರ ಬಡ್ಜೆಟ್ ಅಧಿವೇಶನದಲ್ಲಿ ಒಂದು ನಿರ್ಣಯವನ್ನು ಸಹ ಪಾಸು ಮಾಡಿದೆ ಎಂದು ಶ್ರೀಮಾನ್ ನಂಜೇಗೌಡರು ಮಾತನಾಡುತ್ತಾ ಹೇಳಿದರು. 1966ರಲ್ಲಿ ಪಾಸಾದ ನಿರ್ಣಯವನ್ನೂ ಕೂಡ ಸಭೆಯ ಗಮನಕ್ಕೆ ತರುತ್ತೇನೆ; ಅದು ಈ ರೀತಿ ಇದೆ: That this House urges on the Government to devise ways and means of utilising before 1974 the waters of the Cauvery Basin. ಈ ಒಂದು ನಿರ್ಣಯವನ್ನು ಸರ್ವಾನುಮತದಿಂದ ಪಾಸು ಮಾಡಿದ್ದಾರೆ. ಮತ್ತು 1969ನೇ ಇಸವಿಯಲ್ಲೂ ಕೂಡ ಇಂಥಾದ್ದೇ ಒಂದು ನಿರ್ಣಯವನ್ನು ಈ ಸಭೆಯಲ್ಲಿ ಪಾಸು ಮಾಡಿದ್ದಾರೆ. ಅವನ್ನೂ ಸಹ ನಮ್ಮ ಮುಂದಿಟ್ಟುಕೊಂಡು 1924ರ ಅಗ್ರಿಮೆಂಟ್ ಏನು ಇದೆ ಅದರ ಪ್ರಕಾರ 1974ನೇ ಇಸವಿಯೊಳಗೆ ಕಾವೇರಿ ಬೇಸಿನ್ನಿನ ನೀರನ್ನು, ಅದರಲ್ಲೂ ನಮ್ಮ ಭಾಗಕ್ಕೆ ಬರಬೇಕಾದಂಥ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು ಎನ್ನುವ ದೃಷ್ಟಿ ಇರುವಾಗ ಈಗ ಮತ್ತೆ ಅದೇ ತರಹ ನಿರ್ಣಯ ತಂದಿರುವ ಔಚಿತ್ಯವಾದರೂ ಏನು ಎಂದು ಅವರನ್ನು ನಾನು ಕೇಳಬೇಕಾಗಿದೆ. ಇದರಮೇಲೆ ಒಂದು ಸಾರಿ ತೀರ್ಮಾನ ತೆಗೆದುಕೊಂಡ ಮೇಲೆ ಸರ್ಕಾರ ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಎನ್ನುವ ವಿಷಯವಾಗಿ ಒಂದೆರಡು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರುವುದು ಸೂಕ್ತವೆಂದು ನನ್ನ ಅಭಿಪ್ರಾಯ.

ಮೊದಲನೆಯದಾಗಿ ಕಾವೇರಿ ಬೇಸಿನ್‌ನಲ್ಲಿ ಮುಖ್ಯವಾದ ದೊಡ್ಡ ಜಲಾಶಯಗಳು ಯಾವುವು ಎಂದರೆ ಕಪಿನಿ ಜಲಾಶಯ ಹೇಮಾವತಿ ಜಲಾಶಯ ಮತ್ತು ಹಾರಂಗಿ ಜಲಾಶಯ. ಇದಲ್ಲದೆ ತಾರಕಾ, ಗೊರೂರು, ಕಂಬದಕಡ, ಸುವರ್ಣಾವತಿ ಇವೆಲ್ಲಾ ಸಣ್ಣಪುಟ್ಟ ಜಲಾಶಯಗಳು. ಈ ಸಣ್ಣಪುಟ್ಟ ಜಲಾಶಯವನ್ನು ಸೇರಿಸಿದರೆ 8–10 ಟಿ.ಎಂ.ಸಿ.ಎಫ್.ಟಿ. ವಾಟರ್ ಆಗಬಹುದು. ಮೂರು ದೊಡ್ಡ ಜಲಾಶಯಗಳಿಂದಲೇ ನಮಗೆ ಹೆಚ್ಚಿನ ನೀರಿನ ಉಪಯೋಗವಾಗುವುದು. ಇದರ ಒಂದು ಅಂಕಿಅಂಶ ತೆಗೆದುಕೊಂಡರೆ ಅದು ಈರೀತಿ ಇದೆ—ಕಾವೇರಿ ಜಲಾಶಯ 19 ಟಿ.ಎಂ.ಎಫ್.ಸಿ.ಟಿ., ಹೇಮಾವತಿ ಜಲಾಶಯ 30 ಟಿ.ಎಂ.ಸಿ.ಎಫ್.ಟಿ., ಮತ್ತು ಹಾರಂಗಿ ಜಲಾಶಯ 15 ಟಿ.ಎಂ.ಸಿ.ಎಫ್.ಟಿ. ಹೀಗೆ ಒಟ್ಟು 64 ಟಿ.ಎಂ.ಸಿ.ಎಫ್.ಟಿ. ನೀರು ಉಪಯೋಗ ಮಾಡುವುದರ ಜೊತೆಗೆ ಸಣ್ಣಪುಟ್ಟ ಜಲಾಶಯದ್ದು 8–10 ಟಿ.ಎಂ.ಸಿ.ಎಫ್.ಟಿ. ಅಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬಹುದು ಎನ್ನುವ ಉದ್ದೇಶ ನಮಗಿದೆ. ಆದರೆ ಈ ಕಾರ್ಯ ಹೇಗೆ ನಡೆದಿದೆ ಎಂದರೆ 1966ನೇ ಇಸವಿಯಲ್ಲಿ ಇದರ ಬಗ್ಗೆ ಒಂದು ನಿರ್ಣಯ ಮಾಡಿದೆ. ಮತ್ತು ಅದಕ್ಕಿಂತ ಮುಂಚಿತವಾಗಿಯೇ

1965ನೇ ಇಸವಿ ಮೇನಲ್ಲಿ ಹೇಮಾವತಿ ಮತ್ತು ಹಾರಂಗಿ ಈ ಎರಡಕ್ಕೂ ಹಿಂದಿನ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀಮಾನ್ ನಿಜಲಿಂಗಪ್ಪನವರೇ ಖುದ್ದಾಗಿ ಹೋಗಿ ಅದರ ಅಸ್ತಿಭಾರವನ್ನು ಹಾಕಿ ಕೆಲಸ ಮಾಡಬೇಕೆಂದು ಮಾಡಿದರು. ಅದೇ ರೀತಿ ಕಪಿನಿ ಜಲಾಶಯವನ್ನು 1958–59ರಲ್ಲಿ ಪ್ರಾರಂಭ ಮಾಡಿದರು. ಆದರೂ ಅದರ ಕೆಲಸ ಇನ್ನೂ ತಡವಾಗಿದೆ. ಈ ಕಪಿನಿ ಜಲಾಶಯಕ್ಕೆ ಇದುವರೆಗೆ 4½ ಕೋಟಿ ರೂಪಾಯಿ ಖರ್ಚಾಗಿದೆ. ಇದರ ಎಸ್ಟಿಮೇಟ್ 24–25 ಕೋಟಿ ರೂಪಾಯಿ ಎಂದು ಒಂದು ಅಂದಾಜು ಮಾಡಿದ್ದಾರೆ. ಮತ್ತೆ ಇದು ರಿವೈಸ್ ಆಗಬಹುದು. ಇನ್ನೂ ಹೆಚ್ಚು ಹಣ ಬೇಕಾಗುತ್ತದೆ, ನಾವು 10 ವರ್ಷದಿಂದ ಇದುವರೆಗೆ 4½ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ.

5-30 P. M.

ಹಾಗೆಯೇ ಹಾರಂಗಿ ಮತ್ತು ಹೇಮಾವತಿ ಜಲಾಶಯಗಳಿಗೆ ಮತ್ತು ಇತರ ಜಲಾಶಯಗಳಿಗೆ 1965ನೇ ಇಸವಿಯಲ್ಲಿ ಅಸ್ತಿಭಾರಶಿಲೆಯನ್ನು ಹಾಕಿ ಕೆಲಸ ಪ್ರಾರಂಭ ಮಾಡಿದ್ದಾರೆ. ಅವುಗಳ ಬಗ್ಗೆ ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ನೋಡುತ್ತಿದ್ದೇವೆ. ಹೇಮಾವತಿಗೆ ಇದುವರೆಗೆ 150 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇದರ ಅಂದಾಜು 22 ಕೋಟಿ ರೂಪಾಯಿಗಳ ಮೇಲೆ ಇದೆ. ಹಾಗೆಯೇ ಹಾರಂಗಿ ಪ್ರಾಜೆಕ್ಟಿಗೆ 11 ಲಕ್ಷ ರೂಪಾಯಿಗಳಿಗೆ ಒಳಪಟ್ಟು ಇದುವರೆಗೆ ಖರ್ಚು ಮಾಡಿದ್ದಾರೆ. ಅದರ ಅಂದಾಜು 12 ಕೋಟಿ ರೂಪಾಯಿಗಳು. ಈ ಲೆಕ್ಕವನ್ನು ನಾವು ಗ್ರಹಿಸಿಕೊಳ್ಳುವಾಗ, ಬೇರೆ ಸಣ್ಣಪುಟ್ಟ ಪ್ರಾಜೆಕ್ಟುಗಳ ಕೆಲಸವನ್ನೇ ಪ್ರಾರಂಭ ಮಾಡಿಲ್ಲ, ಇನ್ನೂ ತೆಗೆದುಕೊಂಡಿಲ್ಲ. ತಾರಕ, ಕಂಬದಕಡ, ಈ ಪ್ರಾಜೆಕ್ಟ್‌ಗಳಿಗೆ ಕೈ ಹಾಕಿಯೇ ಇಲ್ಲ. ಇಷ್ಟು ನಿಧಾನವಾಗಿ ಕೆಲಸ ನಡೆಯುತ್ತಿದೆಯಲ್ಲ, ಎಷ್ಟು ದೊಡ್ಡ ಪ್ರಮಾಣದಲ್ಲಿ ಹಣವನ್ನು ಒದಗಿಸಬೇಕಾಗಿದೆ, ಕೆಲಸವನ್ನು ನಿರ್ವಹಿಸಬೇಕಾಗಿದೆ, ಎನ್ನುವುದನ್ನು ಒಂದು ಕಡೆ ಆದರೆ, ಒಂದು ಕಡೆ 11 ಲಕ್ಷ ಇನ್ನೊಂದು ಕಡೆ ಒಂದೂವರೆ ಕೋಟಿ ಖರ್ಚು ಮಾಡಿದ್ದಾರೆ. 25 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿರುವಾಗ ಕಳೆದ ಹತ್ತು ವರ್ಷಗಳಲ್ಲಿ ನಾಲ್ಕೂವರೆ ಕೋಟಿ ರೂಪಾಯಿ ಖರ್ಚುಮಾಡಿದ್ದಾರೆ. ಹೀಗೆ ಮಾಡಿದರೆ ಯಾವ ಕಾಲಕ್ಕೆ ಅವು ಮುಗಿಯುತ್ತವೆ? ಇದಕ್ಕೆಲ್ಲ ಹಣದ ಅಭಾವ ಮೂಲಕಾರಣವಾಗಿದೆ. ಸರ್ಕಾರಕ್ಕೆ ಇದನ್ನು ಮಾಡಬಾರದು ಎನ್ನುವ ದುರ್ಭಾವನೆ ಇಲ್ಲ. 1966ನೇ ಇಸವಿಯಲ್ಲಿ ಶ್ರೀಮಾನ್ ದೇವೇಗೌಡರು ತಂದ ನಿರ್ಣಯ ಸರ್ವಾನುಮತದಿಂದ ಈ ಸಭೆಯಲ್ಲಿ ಒಪ್ಪಿಗೆಯಾಯಿತು. ಆವಾಗ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿದ್ದು, ಈಗ ಮುಖ್ಯ ಮಂತ್ರಿಗಳಾಗಿರತಕ್ಕ ಮಾನ್ಯ ವೀರೇಂದ್ರಪಾಟೀಲರು ಹೇಳಿರತಕ್ಕ ವಿಷಯಗಳೆಲ್ಲವನ್ನೂ ಓದಿದೆ. ಸರಕಾರದ ಅಭಿಪ್ರಾಯದಲ್ಲಿ ಈ ನೀರನ್ನು ಉಪಯೋಗ ಮಾಡಬೇಕಾದ್ದು ಅಗತ್ಯವಿದೆ ಎನ್ನುವುದನ್ನು ಅವರು ಹೇಳಿದ್ದಾರೆ. 1974ನೇ ಇಸವಿಗೆ ಒಳಪಟ್ಟು ಈ ನೀರಿನ ಉಪಯೋಗ ಮಾಡತಕ್ಕ ಅಗತ್ಯವಿದೆ ಎನ್ನುವುದನ್ನು ಕೂಡ ಹೇಳಿದ್ದಾರೆ. ಆದರೆ ಇಷ್ಟೆಲ್ಲಾ ಸರ್ಕಾರದ ಉದ್ದೇಶವೂ ಕೂಡ ಈ ಕೆಲಸಗಳು ತ್ವರಿತವಾಗಿ ಆಗಬೇಕೆಂದು ಇದ್ದರೂ ಏಕೆ ನಿಧಾನವಾಗುತ್ತಿದೆ, ಇಷ್ಟು ಸಣ್ಣ ಪ್ರಮಾಣದಲ್ಲಿ ಏಕೆ ಹಣವನ್ನು ಖರ್ಚು ಮಾಡುತ್ತಿದ್ದಾರೆ, ಎಂದು ನಾವೆಲ್ಲರೂ ಕೇಳುತ್ತಿದ್ದೇವೆ, ಸರ್ಕಾರದವರು ಹೇಳಿರುವುದರಲ್ಲಿ ನಾವು ಗ್ರಹಿಸತಕ್ಕ ವಿಷಯವೇನೆಂದರೆ ಹಣದ ಅಭಾವ ಎನ್ನುವ ಉತ್ತರ ನಮಗೆ ದೊರೆಯುತ್ತದೆ. ಹಣದ ಅಭಾವ ಒಂದು ಕಡೆ, ಇನ್ನೊಂದು ಕಡೆ 1924ನೇ ಇಸವಿಯ ಒಪ್ಪಂದದ ಪ್ರಕಾರ ಕಾವೇರಿ ಬೇಸಿನ್‌ನಲ್ಲಿರುವ ನೀರಿನ ಉಪಯೋಗವನ್ನು 1974ನೇ ಇಸವಿಯ ಒಳಗೆ ಮಾಡಬೇಕು. ಆ ರೀತಿಯಾಗಿ ನಾವು ನೀರನ್ನು ಉಪಯೋಗ ಮಾಡದೆ ಇದ್ದರೆ 1974ನೇ ಇಸವಿಯಿಂದ ಆಚೆಗೆ ಆ ಒಪ್ಪಂದದಲ್ಲಿ ಏನಿದೆ ಎಂದರೆ, ನಾನು ತಿಳಿದಿರುವ ಹಾಗೆ ಎಷ್ಟು ನೀರು ಉಪಯೋಗವಾಗದೆ ಉಳಿಯುತ್ತದೆ, ಅದನ್ನು ಮದ್ರಾಸ್ ಸರ್ಕಾರದವರೂ ಮತ್ತು ಮೈಸೂರು ಸರ್ಕಾರದವರೂ ಸೇರಿ ಅದನ್ನು ಹಂಚಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ನಾವು ಉಪಯೋಗ ಮಾಡದೆ ಹೋದ ನೀರು ಮತ್ತೆ ಇನ್ನೊಬ್ಬರಿಗೆ ಹಂಚಿಕೆಯಾಗುವ ರೀತಿಯಿಂದ ಅವ್ಯವಸ್ಥೆ ಬಂದಿತೋ ಏನೋ ಎನ್ನುವ ಕುತೂಹಲ, ದುಗುಡ, ಸಂಕಟ ಇರುವುದರಿಂದ ಇದನ್ನು ಮತ್ತೆ ಸರ್ಕಾರದ ಮುಂದೆ ಒತ್ತಾಯ ಮಾಡುತ್ತಿದ್ದೇವೆ. ಈ ಸಭೆಯ ಮುಖಾಂತರ ಈ ನಿರ್ಣಯಕ್ಕೆ ನಾವು ಬರಬೇಕು ಎನ್ನುವುದೇ ಇದರ ಉದ್ದೇಶ ಎಂದು ನನ್ನ ಭಾವನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಪಾಯಿಂಟ್ ಅನುಮಾನದಲ್ಲಿದೆಯೋ ಅಥವಾ ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಅದು ಖಚಿತವಾಗಿದೆಯೋ ?

ಶ್ರೀ ಡಿ. ದೇವರಾಜ ಅರಸ್.—ನನ್ನ ಅಭಿಪ್ರಾಯದಲ್ಲಿ, ನಾನು ಓದಿರುವ ಪ್ರಕಾರ ನಾನು ತಿಳಿದುಕೊಂಡಿರುವ ಪ್ರಕಾರ 1924ನೇ ಒಪ್ಪಂದದ ಪ್ರಕಾರ 1974ನೇ ಇಸವಿಯ ಒಳಗೆ ನಾವು ಉಪಯೋಗ ಮಾಡದೆ ಇರುವ ನೀರನ್ನು ಮತ್ತೆ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ ಎಂದು ನನಗೆ ತಿಳಿದು ಬಂದಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಣದ ಅಭಾವ ಎಂದು ಹೇಳಿದರು. ಮೂರನೆಯ ಯೋಜನೆಯಲ್ಲಿ 1961-1966ರ ವರೆಗೆ ಕಂಬದಕಡ ಯೋಜನೆಗೆ 50 ಲಕ್ಷ ರೂಪಾಯಿ ಹೇಮಾವತಿಗೆ 100 ಲಕ್ಷ ರೂಪಾಯಿ, ಮತ್ತು ಹಾರಂಗಿಗೆ 2 ಕೋಟಿ ರೂಪಾಯಿ ಒದಗಿಸಿತ್ತು. ಮೂರನೇ ಯೋಜನೆ ಆಗುವುದರೊಳಗೆ ಹಾರಂಗಿ ಯೋಜನೆಗೆ ಒಂದು ಲಕ್ಷ ಆರು ಸಾವಿರ ರೂಪಾಯಿ ಖರ್ಚು ಮಾಡಿದರು, ಹೇಮಾವತಿಗೆ ಮೂರು ಲಕ್ಷ ಚಿಲ್ಲರೆ ರೂಪಾಯಿ ಖರ್ಚು ಮಾಡಿದರು, ಕಂಬದಕಡಕ್ಕೆ 50 ಲಕ್ಷ ರೂಪಾಯಿ ಒದಗಿಸಿದ್ದುದರಲ್ಲಿ ಒಂದು ಆಣೆಯನ್ನೂ ಖರ್ಚು ಮಾಡಿಲ್ಲ. ಇದಕ್ಕೆ ಏನು ಕಾರಣ ಎಂದು ಹೇಳುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಆ ಕಾರಣವನ್ನು ಹೇಳುವವರು ನೇರವಾಗಿ ಅದಕ್ಕೆ ಸಂಬಂಧ ಪಟ್ಟ ಮಂತ್ರಿಗಳಿದ್ದಾರೆ. ನಾನು ಯಾವಾಗಲೂ ಲೋಕೋಪಯೋಗಿ ಇಲಾಖೆಯ ಕೆಲಸಕಾರ್ಯ ಗಳನ್ನು ನಿರ್ವಹಿಸುವ ಸಂದರ್ಭ ಒದಗಲಿಲ್ಲವಾದ್ದರಿಂದ ನಾನು ಆ ವಿಷಯಕ್ಕೆ ಹೋಗುವುದಿಲ್ಲ.

ಈ ಪ್ರಾಜೆಕ್ಟ್‌ಗಳು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿದ್ದುದೂ ನಿಜ. ಮೂರನೆ ಯೋಜನೆ ಮುಗಿದು ಹೋಗಿ ಅದರ ಮೇಲೆ ಎರಡು ವರ್ಷವೂ ಆಯಿತು. ನಾಲ್ಕನೆ ಯೋಜನೆಯನ್ನು ಪ್ರಾರಂಭ ಮಾಡುವುದರಲ್ಲಿದ್ದೇವೆ. ಇನ್ನಾದರೂ ಕೂಡ ಈ ಪ್ರಾಜೆಕ್ಟ್‌ಗಳ ಬಗ್ಗೆ ಹಾಗೆಯೇ ಇರುವುದಕ್ಕೆ ಸಾಧ್ಯವೇ. ನಾವೆಲ್ಲರೂ ಒಪ್ಪತಕ್ಕ ಮಾತು, ಒಪ್ಪಿರತಕ್ಕ ಮಾತು ಎಂದರೆ ಸರ್ಕಾರದವರಾದಿಯಾಗಿ 1924ನೇ ಇಸವಿಯ ಒಪ್ಪಂದದ ಪ್ರಕಾರ 1974ನೇ ಇಸವಿಯೊಳಗೆ ನಮಗೆ ಬರತಕ್ಕ ನೀರಿನ ಪಾಲು ಏನಿದೆ ಅದನ್ನು ಉಪಯೋಗ ಮಾಡಿಕೊಳ್ಳುವುದರ ಅಗತ್ಯವಿದೆ ಎನ್ನುವ ಮಾತನ್ನು ಬಹುಶಃ ವಾದ ವಿವಾದಕ್ಕೆ ಎಡೆ ಇಲ್ಲದ ರೀತಿಯಲ್ಲಿ ಎಲ್ಲರೂ ಒಪ್ಪತಕ್ಕ ಮಾತು. ಇನ್ನು ಈಗ ಉಳಿದಿರತಕ್ಕುದಾದರೂ ಏನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಈಗ ಹೀಗೆ ಹೇಳುತ್ತಿದ್ದಾರೆ. ಅವರು ಮಂತ್ರಿಗಳಾಗಿದ್ದಾಗ ಹೇಗೆ ಹೇಳಿದರು ?

ಶ್ರೀ ಡಿ. ದೇವರಾಜ ಅರಸ್.—ಇರುವ ವಿಚಾರಗಳನ್ನು ನಾನು ಹೇಳುತ್ತಿದ್ದೇನೆ. 1974ನೇ ಇಸವಿಯ ಒಳಗಡೆ ಕಾವೇರಿ ಬೇಸಿನ್‌ನಲ್ಲಿ ನಮ್ಮ ಪಾಲಿಗೆ ಬರುವ ನೀರನ್ನೆಲ್ಲ ಉಪಯೋಗಮಾಡಬೇಕು ಎನ್ನುವುದು ನನಗೆ ತಿಳಿದಿರುವ ಮಟ್ಟಿಗೆ, ನನ್ನ ಅಭಿಪ್ರಾಯವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲ ಎಂದು ಹೇಳಿದರೆ ನನಗೆ ಗೊತ್ತಿಲ್ಲ. ಈ ಗಳಿಗೆಯಲ್ಲಿ ನಾನು ತಿಳಿದುಕೊಂಡಿರುವ ಮಟ್ಟಿಗೆ ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ, ಸರ್ಕಾರದ ಅಭಿಪ್ರಾಯವೂ ಇದೇ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೂ ಏಕೆ ಇದರಲ್ಲಿ ನಿಧಾನವಾಗುತ್ತಿದೆ? ಬಹುಶಃ ಸರ್ಕಾರದವರು ಇದರ ಬಗ್ಗೆ ನಿಧಾನ ಮಾಡುತ್ತಾ ಇರುವುದು ಅವರ ಉದಾಸೀನ ಭಾವನೆಯಿಂದ ಎಂದು ನಾನು ತಿಳಿಯುವುದಿಲ್ಲ. ಸರ್ಕಾರಕ್ಕೆ ಒಂದು ಉದ್ದೇಶವನ್ನು ಕಲ್ಪಿಸು ವಷ್ಟು ದೂರ ನಾವು ಹೋಗಬೇಕಾದ ಅಗತ್ಯವಿಲ್ಲವೇನೋ ಎಂದು ನನ್ನ ಭಾವನೆ. ನಿಜವಾಗಿಯೂ ಉಂಟಾಗಿರತಕ್ಕ ತೊಂದರೆ ಎಂದರೆ ಹಣದ ಕೊರತೆ. ಹಣದ ಕೊರತೆ ಇದೆ ಎನ್ನುವುದನ್ನು ಎಲ್ಲರೂ ಒಪ್ಪಬೇಕು. ಮಾನ್ಯ ಶಿವಪ್ಪನವರು ಕೂಡ ಈ ಮಾತನ್ನು ಒಪ್ಪುತ್ತಾರೆ. ಆದರೆ ಒಂದು ಮಾತನ್ನು ಅವರು ಹೇಳಿದ್ದು ನನಗೆ ಬಹಳ ಸಂತೋಷವಾಯಿತು. ಇದಕ್ಕೆ ಹಣವನ್ನು ಒದಗಿಸಬೇಕಾದರೆ ನಮ್ಮದೆಲ್ಲ ಸಹಕಾರವಿದೆ ಎಂದು ಹೇಳುತ್ತ ಬೇರೆ ಕೆಲಸವನ್ನು ನಿಲ್ಲಿಸುವುದಕ್ಕೆ ಸಿದ್ಧರಾಗಿ ನಾವು ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಇದು ಸಂತೋಷದ ವಿಚಾರ. ಮಾನ್ಯ ಎದುರು ಪಕ್ಷ ನಾಯಕರು ಏನು ಹೇಳಿದ್ದಾರೆ ಆ ಮಾತನ್ನು ಸಂಪೂರ್ಣವಾಗಿ ಅವರು ಒಪ್ಪಿಕೊಂಡು ಹೇಳಿದ್ದಾರೆ. ಅದನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಯವರೂ, ನಮ್ಮ ಸರ್ಕಾರದವರೂ ಉಪಯೋಗ ಮಾಡಿ ಕೊಳ್ಳಲಿ. ಮುಂದೆ ಹಣವನ್ನು ಒದಗಿಸಬೇಕಾದರೆ ಬೇರೆ ವಿಷಯಗಳಿಗೆ ಕೆಲವು ಕಾಲ ಹಣವನ್ನು ಖರ್ಚು ಮಾಡುವುದನ್ನು ನಿಲ್ಲಿಸಿ, ಆ ಹಣವನ್ನು ಕಾವೇರಿ ಜಲಾಶಯದ ನೀರಿನ ಉಪಯೋಗಕ್ಕೆ, ಕೃಷ್ಣರಾಜ ಜಲಾಶಯದ ನೀರಿನ ಉಪಯೋಗಕ್ಕೆ ಒದಗಿಸಿಕೊಡತಕ್ಕುದು ಬಹಳ ಅಗತ್ಯವಾದ ವಿಚಾರ ಎನ್ನುವುದನ್ನು ನಾನು ಈ ಸಭೆಯ ಮುಖಾಂತರ ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿ ಯವರ ಗಮನಕ್ಕೆ ತರುತ್ತಿದ್ದೇನೆ. ಮತ್ತೆ ಹಣದ ವಿಚಾರ ಬಂದಾಗ ಒಂದು ಮಾತು ಇದೆ. ಈಗಾ ಗಲೇ ತಮಗೆ ಗೊತ್ತಿರುವ ಹಾಗೆ ಈ ಸಭೆಯಲ್ಲಿ ಹಿಂದೆ ಈ ವಿಚಾರ ಚರ್ಚೆಗೆ ಬಂದಾಗ ಮಾನ್ಯ ಸಭೆಯವರು ಕೆಲವು ವಿಷಯಗಳನ್ನು ಸ್ವಲ್ಪ ಅಂತರಿಕವಾಗಿ ಮಾತನಾಡಿದರೆ ಒಳ್ಳೆಯದು ಎಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ ಮೇಲೆ ಈ ಸಭೆಯ ಒಂದು ಸಣ್ಣ ಕಮಿಟಿಮಾಡಿ, ಆ ಕಮಿಟಿಯಲ್ಲಿ ಚರ್ಚೆಮಾಡಲಾಯಿತು ಆ ಕಮಿಟಿಯವರು ಎರಡು ಉಪಸಮಿತಿಗಳನ್ನು ಮಾಡಿದ್ದಾರೆ. ಒಂದು ಟೆಕ್ನಿಕಲ್ ಕಮಿಟಿ, ಇನ್ನೊಂದು ಫೈನಾನ್ಸ್ ಕಮಿಟಿ. ಫೈನಾನ್ಸ್ ಕಮಿಟಿಯ ಉದ್ದೇಶ

ವಾದರೂ ಸರ್ಕಾರಕ್ಕೆ ಸಲಹೆ ಕೊಡಬೇಕಾದುದಾಗಿದೆ. ಅವರು ಯಾವರೀತಿ ಹಣವನ್ನು ಒದಗಿಸ ಬಹುದು ಎಂದು ಹೇಳುತ್ತಾರೆ ಅದರಂತೆ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಈ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಜಲಾಶಯಗಳನ್ನು ನಿರ್ಮಾಣ ಮಾಡ ವುದಕ್ಕೆ ಹಣ ಒದಗಿಸುವುದಕ್ಕೆ ಅಗತ್ಯವಾದ ಎಲ್ಲಾ ಕಾರ್ಯಕ್ರಮಗಳಿಗೂ ಸಭೆ ಬೆಂಬಲ ಕೊಟ್ಟು ಮೇಲೆ ಸರಕಾರದಲ್ಲಿ ಒಡಕು ಮಾತು ಬರಬಾರದು, ಸಂಬಂಧಪಟ್ಟ ಯೋಜನೆಗಳ ಕೆಲಸವನ್ನು ಕೈಕೊಳ್ಳಲು ಎಲ್ಲಾ ಮಂತ್ರಿಗಳೂ ಮತ್ತು ಅಧಿಕಾರಿಗಳೂ ಮನಸ್ಸಿಟ್ಟು ಕೆಲಸಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳಮೇಲೆ ಇದರ ಪೂರ್ಣ ಜವಾಬ್ದಾರಿ ಇದೆ, ಅವರು ಎಲ್ಲರನ್ನೂ ಒಗ್ಗಟ್ಟಾಗಿ ತೆಗೆದುಕೊಂಡುಹೋಗಲಿ.

ಮತ್ತೊಂದು ವಿಚಾರ. ಇದುವರೆಗಿದ್ದ ಅಡಚಣೆ ಕೇಂದ್ರ ಸರಕಾರ ಪ್ರಾಂತ ಸರಕಾರದ ಯೋಜನೆಗಳಿಗೆ ಒಪ್ಪಿಗೆ ಕೊಡಬೇಕಾಗಿತ್ತು; ಫಂಡನ್ನು ಅಲೋಕೇಟ್ ಮಾಡಬೇಕಾಗಿತ್ತು. ಇತ್ತೀಚೆಗೆ ಪ್ರಧಾನ ಮಂತ್ರಿಗಳಾದಿಯಾಗಿ ಪ್ಲಾನಿಂಗ್ ಕಮಿಷನ್ ಕೂಡ ಇನ್ನುಮೇಲೆ ಪ್ರಾಂತ ಸರಕಾರಗಳ ಸ್ವಯಂ ನಿರ್ಣಯದ ಪ್ರಕಾರ ಎಷ್ಟು ಖರ್ಚು ಮಾಡಬೇಕೆಂಬುದನ್ನು ತಾವೇ ನಿರ್ಣಯ ಮಾಡಿಕೊಳ್ಳಬಹುದು, ಇಷ್ಟು ಹಣ ಪಂಚವಾರ್ಷಿಕ ಯೋಜನೆಗೆ ಕೊಡುತ್ತೇವೆ, ಅದನ್ನು ಸ್ಥಳದ ಅನುಕೂಲತೆಗೆ ಅನುಗುಣವಾಗಿ ಯಾವ ಬಾಬಿಗೆ ಎಷ್ಟು ಖರ್ಚು ಮಾಡಬೇಕು ಎಂದು ಸಂಸ್ಥಾನದ ಸರಕಾರ ನಿರ್ಣಯ ಮಾಡಿಕೊಳ್ಳಬಹುದು ಎಂದು ಹೇಳಿರುವುದು ಗಮನಾರ್ಹವಾದ ವಿಚಾರ. ಇದನ್ನು ಸರಕಾರದವರು ತೀವ್ರವಾಗಿ ಆಲೋಚನೆ ಮಾಡಿ ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನುಮೇಲಾದರೂ ಮೈಸೂರಿಗೆ ಬೇಕಾದ ನೀರನ್ನು ಉಪಯೋಗಮಾಡಿಕೊಳ್ಳಲು ಅವಕಾಶ ಮಾಡಿಕೊಂಡು ಕಾವೇರಿ ನೀರನ್ನು 1974ರೊಳಗೆ ಉಪಯೋಗ ಮಾಡಿಕೊಳ್ಳಬೇಕು. ಆದುದರಿಂದ ಇದಕ್ಕೆ ಹೆಚ್ಚು ಹಣ ಇದಕ್ಕೆ ಉಪಯೋಗಿಸಬೇಕು, ಹೆಚ್ಚು ಹಣ ಇದಕ್ಕೆ ಕೊಡಲು ನಾಲ್ಕನೆಯ ಯೋಜನೆಯಲ್ಲಿ ಅವಕಾಶ ಮಾಡಬೇಕು. ಈ ಸಂದರ್ಭದಲ್ಲಿ ಫೈನಾನ್ಷಿಯಲ್ ರಿಸೋರ್ಸಸ್ ವಿಚಾರ ಕೇಳುತ್ತಿದ್ದಾರೆ, ಅದಕ್ಕೆ ಎರಡು-ಮೂರು ಸಲಹೆ ಕೊಡುತ್ತೇನೆ. ಈಗಾಗಲೆ ರಿಸೋರ್ಸಸ್ ಕಮಿಟಿ ಮಾಡಿದ್ದಾರೆ. ಆದರೂ ಒಂದು ಮಾತು ಹೇಳಬೇಕಾಗಿದೆ. ಹಣಕಾಸಿನ ಸಚಿವರು ಯುವಕರು, ಉತ್ಸಾಹಶಾಲಿಗಳು, ಅವರಿಗೆ ಅನುಭವವಿದೆ, ಹಣಕಾಸಿನ ವಿಚಾರ ಚೆನ್ನಾಗಿ ಗೊತ್ತಿದೆ; ಇಂದು ತಮಗೆ ಹೆಚ್ಚು ಜವಾಬ್ದಾರಿಯಿದ್ದರೂ ಹಣ ಒದಗಿಸಬೇಕೆಂದು ಹೇಳುವುದಾದರೆ ಈ ವರ್ಷ ದಲ್ಲಿ ಐದು-ಆರು ಕೋಟಿ ರೂಪಾಯಿಗಳನ್ನಾದರೂ ಕಾವೇರಿ ವ್ಯಾಲಿ ಯೋಜನೆಗಳಿಗೆ ಕೊಡುತ್ತೇನೆ ಎಂದು ಅವರು ಹೇಳುತ್ತಿದ್ದಾರೆ. ಇದನ್ನು ಅವರು ಹೇಳುವಾಗ ಅವರಿಗಿರುವ ಒಂದೇ ಒಂದು ಅಡಚಣೆ ಬೇರೆ ಇಲಾಖೆ ಮಂತ್ರಿಗಳ ಒಪ್ಪಿಗೆ. ಅವರು ಸಹಕಾರ ಕೊಡುವುದಾದರೆ ಒದಗಿಸುವುದಕ್ಕೆ ಸಾಧ್ಯ ಎಂದು ಧೈರ್ಯದಿಂದ ಹೇಳುತ್ತಿದ್ದಾರೆ. ಮುಖ್ಯ ಮಂತ್ರಿಗಳು ಸಹಕರಿಸಿ ಅವರಿಗೆ ಬೆಂಬಲ ಕೊಟ್ಟರೆ ಈ ಹಣ ಸಿಕ್ಕುವುದು. ಇದರ ಜೊತೆಗೆ ಕೆಲವು ರಿಸೋರ್ಸಸ್ ಇವೆ, ಎಕ್ಸೈಜ್ ಬಾಬಿನಿಂದ ಬಜೆಟ್ಟಿನಲ್ಲಿ ಎಷ್ಟು ಬರಬಹುದೆಂದು ಸೂಚಿಸಿದ್ದಾರೋ ಅದಕ್ಕಿಂತ ಏಳು-ಎಂಟು ಕೋಟಿ ರೂಪಾಯಿ ಹೆಚ್ಚಾಗಿ ಬರಬಹುದು. ಸೇಲ್ಸ್‌ಟ್ಯಾಕ್ಸ್ ಮತ್ತು ಕಮರ್ಷಿಯಲ್ ಟ್ಯಾಕ್ಸ್‌ನಿಂದ ಹೆಚ್ಚು ಆದಾಯ ಬರುವ ನಿರೀಕ್ಷೆ ಇದೆ. ಈಗಲೂ ಕೂಡ ಈ ಬಾಬುಗಳಿಂದ ಸರಕಾರಕ್ಕೆ ಎಷ್ಟು ಹಣ ಬರಬೇಕೋ ಅಷ್ಟು ಬರುತ್ತಿಲ್ಲ. ಸೋರಿ ಹೋಗುತ್ತಿರುವ ಹಣ ನೇರವಾಗಿ ಸರಕಾರಕ್ಕೆ ಬರುವ ಹಾಗೆ ಮಾಡಿ ದರೆ ಕೆಲವು ಕೋಟಿ ಹೆಚ್ಚಿಗೆ ಬರುವುದು. ಅರಣ್ಯ ಇಲಾಖೆ ಇದೆ, ಅದರಿಂದ ಸುಮಾರು ಸರಕಾರಕ್ಕೆ ಸುಮಾರು ಎಂಟು-ಒಂಭತ್ತು ಕೋಟಿ ರೂಪಾಯಿಗಳ ಆದಾಯವಿದೆ. ಈ ವಿಶೇಷ ಸಂದರ್ಭದಲ್ಲಿ ಹತ್ತು ಕೋಟಿ ಮರಗಳನ್ನೇಕೆ ಹೆಚ್ಚಾಗಿ ಎಕ್ಸ್‌ಪ್ಲಾಯಿಟ್ ಮಾಡಬಾರದು? ಇದನ್ನು ಯೋಚನೆ ಮಾಡಬೇಕು. ನಮ್ಮದೇ ಆದ ಒಂದು ಯೋಜನೆಯನ್ನು ಸರಕಾರದವರು ನಮ್ಮ ಮುಂದಿಟ್ಟಿದ್ದಾರೆ. ಅದಕ್ಕೆ ಸಂಬಂಧಪಟ್ಟ ಬಿಲ್ಲು ಸಭೆಯ ಮುಂದಿದೆ. ಅದು ಸೆಲೆಕ್ಟ್ ಕಮಿಟಿಗೆ ರೆಫರ್ ಆಗಿದೆ. ಇರಿಗೇಷನ್ ಬೆಟರ್‌ಮೆಂಟ್ ಲೆವಿ ಮತ್ತು ವಾಟರ್ ರೇಟಿಗೆ ಅದು ಸಂಬಂಧಪಟ್ಟಿದೆ, ಆ ಬಿಲ್ಲು ತಿದ್ದು ಪಡಿಯಾಗಿವೆ. ಆ ಬಿಲ್ಲಿನಲ್ಲಿ ಯಾವುದೇ ಪ್ರಾಜೆಕ್ಟ್ ಆಗುವುದಕ್ಕೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡು ವುದಕ್ಕೆ ರೈತರು ಮುಂದೆಬಂದರೆ ತೆಗೆದುಕೊಳ್ಳೋಣ, ಹಾಗೆ ಬಂದವರ ಹಿತಕ್ಕೆ ಬೇಕಾದ ಪ್ರಾಜೆಕ್ಟು ಗಳನ್ನು ಮಾಡಲು ಪ್ರಾಶಸ್ತ್ಯ ಕೊಡೋಣ ಎಂದು ಹೇಳಿದ್ದಾರೆ. ರೈತರ ಬಳಿ ಹಣವಿಲ್ಲ, ಅವರು ಕೊಡು ವುದಕ್ಕಾಗುವುದಿಲ್ಲ, ಏಕೆ ಈ ವಿಧೇಯಕವನ್ನು ತಂದರು ಎಂದು ಶಂಕೆ ವ್ಯಕ್ತ ಮಾಡಿದ್ದಾರೆ. ನಾನಾ ದರೂ ಹೇಳುವುದು ಈ ವಿಚಾರದಲ್ಲಿ ಯಾವ ಶಂಕೆಯೂ ಇಲ್ಲ, ಈ ತತ್ವ ಸಾಧುವಾಗಿದೆ. ಇಂದು ಇಡೀ ರಾಷ್ಟ್ರದಲ್ಲಿ ಮುಖ್ಯವಾದ ಬ್ಯಾಂಕುಗಳ ರಾಷ್ಟ್ರೀಕರಣ ಮಾಡಿದ್ದೇವೆ, ಇಂಥ ಸಂದರ್ಭದಲ್ಲಿ ಶಂಕೆ ವ್ಯಕ್ತ ಮಾಡಲು ಆಧಾರವಿಲ್ಲ. ಎಲ್ಲ ರೈತರಲ್ಲಿಯೂ ಹಣವಿಲ್ಲವೆಂಬುದು ನಿಜ. ಅವರಾಗಿಯೇ ಮುಂದೆ ಬರುವಾಗ ನಾವು ಬೇಡ, ನಮ್ಮ ಹತ್ತಿರ ಹಣವಿಲ್ಲ ಎಂದು ನಾವು ಹೇಳುವುದು ಬುದ್ಧಿ

(ಶ್ರೀ ಡಿ. ದೇವರಾಜ ಅರಸ್)

ವಂತಿಕೆಯುಲ್ಲ. ಇವತ್ತು ತಂನೆ ಹಾರಂಗಿ ಜಲಾಶಯಕ್ಕೆ ಸಂಬಂಧಪಟ್ಟವರು ಮುಖ್ಯ ಮಂತ್ರಿಗಳನ್ನು ನೋಡಿದ್ದರು, ಅವರು ನೀವು ಯೋಜನೆಯನ್ನು ಕೈಕೊಳ್ಳಬೇಕು, ಪ್ರಾರಂಭಿಸಿ ಕೆಲಸ ಮಾಡಬೇಕು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಸಿದ್ಧ ಎಂದು ಏಕ ಕಂಠದಿಂದ ಹೇಳಿದ್ದಾರೆ. ಹಾಗಿರುವಾಗ ಅವರಿಗೆ ಬೇಡವೆಂದು ಹೇಳುವುದೇಕೆ ? ಒಂದು ವೇಳೆ ಇರುವ ಹಳೆಯ ಕಾನೂನಿನಲ್ಲಿ ಅಡ್ವಾನ್ಸ್ ಕಂಟ್ರಿಬ್ಯೂಷನ್ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲದಿದ್ದರೆ ಕಾನೂನು ತಿದ್ದುಪಡಿ ಮಾಡಿ ಅವಕಾಶ ಮಾಡಿ ಮುಂದೆ ಬರುವವರಿಂದ ತೆಗೆದುಕೊಳ್ಳುವುದರಲ್ಲಿ ತಪ್ಪೇನು ? ಈ ವಿಚಾರದಲ್ಲಿ ಏಕೆ ವಿರೋಧ ಮಾಡುವರೋ ಅರ್ಥವಾಗುವುದಿಲ್ಲ. ಇಂಥ ವಿಶೇಷ ಸಂದರ್ಭಗಳಲ್ಲಿ ಬೇರೆ ಬಾಬುಗಳ ಖರ್ಚನ್ನು ನಿಲ್ಲಿಸಿ ಜಲಾಶಯಗಳಿಗೆ ಹೆಚ್ಚು ಹಣ ಖರ್ಚು ಮಾಡಬೇಕು. ನಿರ್ಮಾಣ ಮಾಡುವ ಯೋಜನೆಯಿಂದ ಯಾರು ಉಪಯೋಗ ಪಡೆಯುವರೋ ಅವರು ಕೂಡ ಸರಕಾರಕ್ಕೆ ಸಹಾಯ ಮಾಡಲು ಮುಂದೆ ಬರಬೇಕು. ಅನೇಕ ರೈತರಿಗೆ ಹಣವಿಲ್ಲದಿದ್ದರೆ ಒಂದು ವ್ಯವಸ್ಥೆ ಮಾಡಲು ಅವಕಾಶವಿದೆ. ಯಾವ ರೈತರ 10-20 ಎಕರೆ ಭೂಮಿ ಗದ್ದೆಯಾಗುವಾಗ, ನೀರಾವರಿಯಾಗುವಾಗ ಆ ಭೂಮಿಯನ್ನು ಬ್ಯಾಂಕುಗಳಿಗೆ ಒತ್ತೆ ಇಟ್ಟು ಅವರ ಪರವಾಗಿ ಅಡ್ವಾನ್ಸ್ ಕಂಟ್ರಿಬ್ಯೂಷನ್ ತೆಗೆದುಕೊಳ್ಳಬಹುದು. 1957ರಲ್ಲಿ ಇದೇ ಸಭೆಯಲ್ಲಿ ಬೆಟರ್‌ಮೆಂಟ್ ಲೆವಿ ಮತ್ತು ವಾಟರ್ ರೇಟ್ ಬಿಲ್ಲನ್ನು ಅಂಗೀಕಾರ ಮಾಡಿದ್ದೇವೆ, ಅದಕ್ಕೆ ಅನೇಕ ತಿದ್ದುಪಾಟುಗಳಾಗಿವೆ, ಎಕರೆಗೆ ಒಂದು ಸಾವಿರ ರೂಪಾಯಿ ಮಾಡಿ, 300 ರೂಪಾಯಿ, 500 ರೂಪಾಯಿ ಎಂದು ಮಾಡಿ ಮತ್ತೆ 500 ರೂಪಾಯಿ ಎಂದು ವಿಧಿಸಿದ್ದೇವೆ. ಹಳೆಯ ಮೈಸೂರಿನಲ್ಲಿ ಬೆಟರ್‌ಮೆಂಟ್ ಲೆವಿ ಹೆಚ್ಚು ಕಡಮೆ ಆಗಲೇ ವಸೂಲಾಗಿದೆ ತುಂಗಭದ್ರ ಜಲಾಶಯ ಇರುವ ಕಡೆ, ಮಲಪ್ರಭ, ಘಟಪ್ರಭ ಪ್ರದೇಶಗಳಲ್ಲಿ ಹೊಸದಾಗಿ ಲೆವಿ ತೆಗೆದುಕೊಳ್ಳಬೇಕಾಗಿದೆ. ತುಂಗಭದ್ರ ಪ್ರಾಜೆಕ್ಟ್ ಕೆಲಸ ಮುಗಿದಿದೆ. ಮತ್ತು ನಾಲ್ಕು ಲಕ್ಷ ಎಕರೆ ನೀರಾವರಿಯಾಗಿದೆ. ಈ ಕಾರಣದಿಂದ ಎಷ್ಟೋ ಸಾವಿರ ಬೆಟರ್‌ಮೆಂಟ್ ಲೆವಿ ವಸೂಲಾಗಬೇಕಾಗಿತ್ತು. ಆದರೆ ಮೂರು ಕಾಸೂ ವಸೂಲಾಗಿಲ್ಲ.

ರೀಜನ್ಯಾಲಿಸಂ ಎಂಬ ತತ್ವ ಬಹಳ ಪ್ರಾಧಾನ್ಯವಾಗಿ ನಮ್ಮ ಮುಂದೆ ತಾಂಡವವಾಡುತ್ತಿದೆ, ಅದಕ್ಕೆ ಮಾರುಹೋಗಿ ಮೊದಲು 500 ರೂಪಾಯಿ ಇದ್ದದ್ದನ್ನು 300 ರೂಪಾಯಿ ಮಾಡಿ ಎಂದರು, ಮತ್ತೆ 300 ರೂಪಾಯಿ ಬೇಡ 500 ರೂಪಾಯಿ ಆಗಬೇಕೆಂದು ಹೇಳಿದರು. 300 ಆಗಲಿ 500 ಆಗಲಿ ಯಾವುದಾದರೂ ವಸೂಲು ಮಾಡಿ ಎಂದರೆ ಇದುವರೆಗೂ ಮೂರು ಕಾಸು ವಸೂಲು ಮಾಡಿಲ್ಲ ಮೂರು ವರ್ಷವಾಯಿತು. ಆದ್ದರಿಂದ ಇದಕ್ಕೆ ಸರ್ಕಾರದವರೇ ನೇರವಾರಿ ಈ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗಿದೆ. 200 ರೂಪಾಯಿಗೂ ಕೇಳದೇ ಇದ್ದ ಜಮೀನು ಇವತ್ತು ಮೂರು ನಾಲ್ಕು ಸಾವಿರ ರೂಪಾಯಿ ಬೆಲೆಬಾಳತಕ್ಕ ಕಾಲದಲ್ಲಿ, ವರ್ಷಕ್ಕೆ 300, 400 ರೂಪಾಯಿ ಬೆಟರ್‌ಮೆಂಟ್ ಲೆವಿ ವಸೂಲು ಮಾಡಿಲ್ಲ ಎಂದರೆ ಅರ್ಥವೇನು ? ಈಗ ನಾನು ಕೇಳಿರುವ ಪ್ರಕಾರ ಎರಡೂವರೆ ಅಥವಾ ಮೂರು ಕೋಟಿ ರೂಪಾಯಿ ವಸೂಲು ಮಾಡಬೇಕಾದ ಬೆಟರ್‌ಮೆಂಟ್ ಲೆವಿ ಹಾಗೆಯೇ ಉಳಿದಿದೆ, ಅದನ್ನು ವಸೂಲು ಮಾಡಿ ಜಲಾಶಯಕ್ಕೆ ಹಾಕಿ, ದುಡ್ಡಿಲ್ಲ ಎಂದು ಏಕೆ ಹೇಳುತ್ತೀರಿ ? ಹಣದ ಅಭಾವದಿಂದ ಅಡಚಣೆಯಾಗಿದೆ ಎಂದು ಅನ್ನುವುದಾದರೆ ಇದನ್ನು ಮಾಡಬಹುದು. ಅದು ಬಿಟ್ಟು ಪದೇ ಪದೇ ಸರ್ಕಾರದವರು ಹಣ ಇಲ್ಲವೆನ್ನುವ ವಾದವನ್ನೇ ಮುಂದಿಟ್ಟು ಈ ಜಲಾಶಯಗಳ ನಿರ್ಮಾಣವನ್ನು ಹಿಂದಕ್ಕೆ ಹಾಕುವುದು ಎಂದೆಂದಿಗೂ ಸೂಕ್ತವಾದ ಮಾತಾಗುವುದಿಲ್ಲ. ಈ ಜಲಾಶಯಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಿಲ್ಲ ಅಂತ ಅನ್ನುವುದು ದಿಟ್ಟತನದಿಂದ, ದಕ್ಷತೆಯಿಂದ ಸರ್ಕಾರ ನಡೆಸುವವರ ಲಕ್ಷಣವಾಗುವುದಿಲ್ಲ. ಆದ್ದರಿಂದ ಕಾವೇರಿ ನೀರನ್ನು ಉಪಯೋಗ ಮಾಡಬೇಕೆಂಬ ತೀವ್ರತೆ ಇದೆ ಎಂಬುದನ್ನು ಒಪ್ಪಿಕೊಂಡ ಮೇಲೆ ಎಲ್ಲಿ ಮನಸ್ಸು ಇರುತ್ತದೆಯೋ ಅಲ್ಲಿ ಮಾರ್ಗ ಇದ್ದೇ ಇರುತ್ತದೆ ಅಂತ ಅನ್ನುವ ಹಾಗೆ ಯಾವ ರೀತಿಯಲ್ಲಾದರೂ ಹಣವನ್ನು ಒದಗಿಸುವ ಸಾಧ್ಯತೆ ಇದ್ದೇ ಇದೆ. ಆದ್ದರಿಂದ ಈ ಮಾನ್ಯ ಸಭೆ ಮತ್ತು ಸದಸ್ಯರಿಂದ ಯಾವ ರೀತಿಯ ಸಹಾಯ ಬೇಕೋ, ಯಾವ ಒಂದು ಸಲಹೆ ಬೇಕೋ ಅದನ್ನು ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಹಣ ಇಲ್ಲ ಇಲ್ಲ ಅಂತ ಅನ್ನುವುದು ಸರಿಯಾದ ಮಾತಲ್ಲ. ಜವಾಬ್ದಾರಿ ಹೊತ್ತಿರತಕ್ಕ ಜನ ನೀವು, ನಿಮ್ಮ ಮೇಲೆ ಈ ಜವಾಬ್ದಾರಿ ಇದೆ. ಯಾವ ರೀತಿ ಹಣ ಒದಗಿಸುವುದಕ್ಕೆ ಸಾಧ್ಯವಿದೆ ಎಂಬುದನ್ನು ನಮ್ಮ ಮುಂದೆ ತಿಳಿಸಿ, ಆ ರೀತಿ ಮಾಡುವುದಕ್ಕೆ ನಾವು ಒಪ್ಪುವುದಿಲ್ಲ ಎಂದರೆ ಆಗ ದೂಷಣೆ ಮಾಡುವುದಕ್ಕೆ ಅವಕಾಶವಿದೆಯೇ ಹೊರತು ಮತ್ತೆ ಬೇರೆ ಅಲ್ಲ. ದಯಮಾಡಿ ಹಣವನ್ನು ಒದಗಿಸುವುದಕ್ಕೆ ಮನಸ್ಸು ಮಾಡಿ, ಕಾರ್ಯಕ್ರಮ ತೆಗೆದುಕೊಳ್ಳಿ, ನಮ್ಮ ಸಹಕಾರ ಅದಕ್ಕೆ ಸಂಪೂರ್ಣವಾಗಿ ಇದೆ, 1974ನೇ ಇಸವಿಯೊಳಗೆ ನಮ್ಮ ಜಲಾಶಯಗಳೆಲ್ಲವೂ ನಿರ್ಮಾಣವಾಗಬೇಕು. ಕೊನೆಯದಾಗಿ ಒಂದು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

We have made reference to 1924 agreement. Have we grown wiser from 1966-67? What is the objective in making an amendment of this sort? I am unable to understand. Perhaps my hon. Friend Sri D. M. Siddiah will enlighten us on the amendment he has brought.

Mr. SPEAKER.—He has already enlightened.

Sri D. DEVARAJ URS.—I do not understand the logic of the amendment in the light of Sri Deve Gowda's resolution which was unanimously accepted by this very House unless Sri Deve Gowda who may speak after sometime enlightens us because he is one of the signatories to this amendment.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಸಭಾಪತಿಗಳೇ, ಕಾವೇರಿ ಕಣಿವೆಯ ವ್ಯಾಪ್ತಿಗೆ ಒಳಪಟ್ಟ ಪ್ರಾಜೆಕ್ಟುಗಳ ಬಗ್ಗೆ ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ. ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನ ಜೊತೆಗೆ ಈ 50 ವರ್ಷದ ಅವಧಿಯಲ್ಲಿ ಕಾವೇರಿ ಕಣಿವೆಗೆ ಸಂಬಂಧಪಟ್ಟ ಎಲ್ಲಾ ಪ್ರಾಜೆಕ್ಟುಗಳನ್ನೂ ನಿರ್ಮಾಣ ಮಾಡಬೇಕೆಂಬ ಒಂದು ಒಡಂಬಡಿಕೆ ಇದ್ದಾಗ್ಯೂ ಕೂಡ ಆಳುವ ಪಕ್ಷ ಈ ಕಡೆಗೆ ಹೆಚ್ಚಿನ ಗಮನವನ್ನು ಕೊಡದೆ ಮಲತಾಯಿಧೋರಣೆಯನ್ನು ತಾಳಿದೆ. ಇನ್ನು ನಾಲ್ಕುಮುಕ್ಕಾಲು ವರ್ಷ ಮಾತ್ರ ಉಳಿದಿದೆ. ಈ ಅವಧಿಯಲ್ಲಿ ಶ್ರೀಮಾನ್ ಚನ್ನಬಸಪ್ಪನವರು ಹೇಳಿದ ಹಾಗೆ 120 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಈ ಪ್ರಾಜೆಕ್ಟುಗಳನ್ನು ಪೂರ್ಣ ಮಾಡುವುದಕ್ಕೆ ಸಾಧ್ಯವೇ ಎಂದು ಸರ್ಕಾರದವರನ್ನು ಪ್ರಶ್ನೆ ಮಾಡುತ್ತೇನೆ. ಹಣ ಇಲ್ಲ ಎಂಬ ವಾದವನ್ನು ಪ್ರತಿಯೊಂದು ಸಂದರ್ಭದಲ್ಲೂ ಸರ್ಕಾರ ನಮ್ಮ ಮುಂದೆ ಇಡುತ್ತಾ ಇದೆ. ನಾವು ನೋಡುತ್ತಾ ಇರುವಂತೆ ಅನೇಕ ಅನಾವಶ್ಯಕವಾದ ಬಾಬುಗಳಿಗೆ ಸರ್ಕಾರ ಹಣ ಖರ್ಚು ಮಾಡುತ್ತಾ ಇದೆ, ಸಾಮಾನ್ಯ ಜನರ ಜೀವನ ಮಟ್ಟವನ್ನು ಹೆಚ್ಚು ಮಾಡಲು ಕೋಟಿಗಟ್ಟಲೆ ಹಣವನ್ನು ಸರ್ಕಾರ ವೆಚ್ಚ ಮಾಡುತ್ತಾ ಇದೆ. ಆದರೂ ಕೂಡ ಜನರು ನೆಮ್ಮದಿಯಾದಂತಹ ಒಂದು ಅಂತಸ್ಥನ್ನು ಮುಟ್ಟಿಲ್ಲ ಎಂದು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಹೇಳುತ್ತೇನೆ. ಕೃಷ್ಣಾ ಪ್ರಾಜೆಕ್ಟು, ಘಟಪ್ರಭಾ, ಮಲಪ್ರಭಾ ಪ್ರಾಜೆಕ್ಟು ಈ ರೀತಿ ಅನೇಕ ಪ್ರಾಜೆಕ್ಟುಗಳು ಇವೆ. ಇವುಗಳನ್ನು ತೆಗೆದುಕೊಳ್ಳಬೇಡಿ ಎಂದು ಯಾರೂ ಒತ್ತಾಯ ಮಾಡಿ ಹೇಳಿಲ್ಲ, ಹಾಗಿರುವಾಗ ಕಾವೇರಿ ಕಣಿವೆ ಜಲಾಶಯದ ನಿರ್ಮಾಣದ ಬಗ್ಗೆ ಉದಾಸೀನ ಮನೋಭಾವ ತಾಳುತ್ತಿರುವುದು ಈ ಭಾಗದ ಒಂದೂವರೆ ಕೋಟಿ ಜನತೆಯ ಅನ್ನ ಮತ್ತು ನೀರಿನ ಉಪಯೋಗದಲ್ಲಿ ವಿನಾಕಾರಣ ಅನ್ಯಾಯ ಮಾಡಿದಂತಾಗುತ್ತದೆ ಎಂದು ಹೇಳಲು ಬಯಸುತ್ತೇನೆ.

6-00 P. M.

ಈ ನಾಲ್ಕನೇ ಪಂಚವಾರ್ಷಿಕ ಯೋಜನೆಯು ಇಲ್ಲಿಗೆ ಎರಡುವರೆ ವರ್ಷಗಳ ಹಿಂದೆಯೇ ಪ್ರಾರಂಭವಾಗಬೇಕಾಗಿತ್ತು. ಆದರೆ ಅದಿನ್ನೂ ಆ ಗಜಗರ್ಭದಲ್ಲೇ ಇದೆ. ಆನೆಮರಿ ಗರ್ಭದಿಂದ ಹೊರಬರಬೇಕಾದರೆ 12 ವರ್ಷಗಳು ಕಳೆಯಬೇಕಂತೆ. ಆದ್ದರಿಂದ ಅದು ಗರ್ಭದಿಂದ ಹೊರ ಬರುವತನಕ ಕಾವೇರಿ ಕಣಿವೆಯಲ್ಲಿ ನೀರನ್ನು ಬಳಸತಕ್ಕ ಕಾರ್ಯವನ್ನು ನಿಲ್ಲಿಸಬೇಕೆಂದು ಹೇಳುವುದು ಸರಿಯಲ್ಲ. ಆದ್ದರಿಂದ ಸರ್ಕಾರದವರು ಯಾವಾಗಲೂ ಹೇಳುತ್ತಿರುವಂತೆ ಈಗಲೂ ನಮ್ಮಲ್ಲಿ ಹಣವಿಲ್ಲ ಎಂದು ಹೇಳುವುದನ್ನು ಬಿಟ್ಟು ಇನ್ನು ನಾಲ್ಕು ವರ್ಷಗಳೊಳಗಾಗಿ ಕೆ. ಆರ್. ಸಾಗರಕ್ಕೆ ಹೊಂದಾವಣಿಕೆಯಾದಂಥ ಕಪಿಲಾ, ಹೇಮಾವತಿ, ಹಾರಂಗಿ ಮತ್ತು ಕಂಬದಕಡ ಈ ಪ್ರಾಜೆಕ್ಟ್‌ಗಳಿಗೆ ಅಗತ್ಯವಾಗಿ ಬೇಕಾದ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಒಂದು ನಿರ್ದಿಷ್ಟವಾದ ನಿಲುವನ್ನು ತಾಳಬೇಕು. ಆದರೆ ಸರ್ಕಾರದವರು ಇಲ್ಲಿಯವರೆಗೂ ನಿರ್ದಿಷ್ಟವಾದ ಅಂಕಿಅಂಶಗಳನ್ನು ಶೇಖರಣೆ ಮಾಡಿಲ್ಲ. ಹಿಂದೆ ಹೇಮಾವತಿ ಯೋಜನೆಯನ್ನು ಕಟ್ಟಬೇಕೆಂದು ಇಲ್ಲಿ ಚರ್ಚೆಯಾಗುತ್ತಿದ್ದ ಕಾಲದಲ್ಲಿ ನಮಗೆ ಅಲ್ಲಿ 6 ಟಿ. ಎಂ. ಸಿ. ಎಫ್. ಟಿ. ನೀರು ಮಾತ್ರ ಇದೆಯೆಂದು ಹೇಳಿದ್ದರು. ಅನಂತರ 1963ರಲ್ಲಿ ಅದು 12 ಟಿ. ಎಂ. ಸಿ. ಎಫ್. ಟಿ. ಗೆ ಏರಿತು. ಈ ದಿವಸ ಅದು 17 ಟಿ. ಎಂ. ಸಿ. ಎಫ್. ಟಿ. ಗೆ ನಿಂತಿದೆ. ಹೀಗೆ ಒಂದೊಂದು ಸಂದರ್ಭದಲ್ಲಿ ಒಂದೊಂದು ರೀತಿಯಾಗಿ ಅಂಕಿಅಂಶಗಳನ್ನು ಕೊಡುತ್ತಿದ್ದಾರೆ. ಇಂಥ ಪರಿಸ್ಥಿತಿಯನ್ನು ನೋಡಿ ನಾನು ನಿಜವಾಗಿಯೂ ದುಃಖಪಡಬೇಕಾಗಿದೆ. ನಮ್ಮ ಸರ್ಕಾರದವರ ನಿರ್ದಿಷ್ಟವಾದ ನಿಲುವೇನು ಎಂಬುದನ್ನು ಅವರು ತಿಳಿಸಲೇ ಬೇಕು. ನಮ್ಮ ಹಕ್ಕಿನ ನೀರೆಷ್ಟಿದೆ, ಎಷ್ಟು ಜಮೀನು ನೀರಾವರಿ

(ಶ್ರೀ ಬಿ. ದೊಡ್ಡಬೋರೇಗೌಡ)

ಯಾಗುತ್ತದೆ ಎಂಬುದರ ಬಗ್ಗೆ ಸರ್ಕಾರದವರಲ್ಲಿ ಒಂದು ನಿರ್ದಿಷ್ಟವಾದ ಪ್ಲಾನಿಲ್ಲ. ಈ ವಿಚಾರದಲ್ಲಿ ನಮ್ಮ ಮುಖ್ಯ ಮಂತ್ರಿಗಳು ನನಗೂ ಕರುಣೆಯಿದೆ, ಮರುಕವಿದೆ, ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಬಾಯಿವಾತಿನಲ್ಲಿ ಹೇಳುತ್ತಿದ್ದಾರೆ. ಹೀಗೆ ಅವರು ಹೇಳುತ್ತಾ ಹೋದರೆ ನಮ್ಮ ಹಕ್ಕಿನ ನೀರನ್ನು ಇನ್ನು ನಮಗೆ ಉಳಿದಿರತಕ್ಕ ನಾಲ್ಕುವರೆ ವರ್ಷಗಳಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಖಂಡಿತ ಸಾಧ್ಯವಿಲ್ಲ ಎಂದು ನಾನು ಛಾಲೆಂಜ್ ಮಾಡುತ್ತೇನೆ. ಇವರು ಈ ಎಲ್ಲಾ ಯೋಜನೆಗಳ ಬಗ್ಗೆ ಕೇಂದ್ರ ಸರ್ಕಾರದವರ ಅನುಮತಿಯನ್ನು ಎಂದು ಪಡೆಯುತ್ತಾರೆ ಯಾವಾಗ ಹಣವನ್ನು ಒದಗಿಸಿಕೊಳ್ಳುತ್ತಾರೆ? ಹಣವನ್ನು ಎಲ್ಲಿಂದ ತರುತ್ತಾರೆ? ಇವೆಲ್ಲಾ ನಮಗೆ ಕುತೂಹಲ ಕೆರಳಿಸುವಂಥ ವಿಷಯಗಳಾಗಿವೆ. ಈ ಪ್ರಶ್ನೆಯಾದರೂ ಒಂದೂವರೆ ಕೋಟಿ ಪ್ರಜೆಗಳ ಅನ್ನ ನೀರಿನ ಸಮಸ್ಯೆಗೆ ಸಂಬಂಧಪಟ್ಟದ್ದು. ಅನ್ನ ನೀರು ಈ ಎರಡಕ್ಕೆ ಗತಿಯಿಲ್ಲದ ಮೇಲೆ ಯಾವ ರಾಜ್ಯದಲ್ಲಾಗಲಿ ಜನರು ಸುಖದಿಂದ ಇರುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ತುತ್ತು ತೂಕ ಕೆಡಿಸಿತೆಂದಹಾಗೆ ನಾವು ಅನ್ನಕ್ಕೆ ಬೇರೆ ದೇಶಗಳಲ್ಲಿ ಅಲೆಯುತ್ತಿದ್ದೇವೆ. ಆದ್ದರಿಂದ ಈಗಲಾದರೂ ಈ ನೀರಾವರಿಗೆ ಸಂಬಂಧಪಟ್ಟ ಎಲ್ಲಾ ಯೋಜನೆಗಳನ್ನೂ ನಮ್ಮ ಆ ಅಗ್ರಿಮೆಂಟಿನ ಅವಧಿ ಮುಗಿಯುವುದರೊಳಗಾಗಿ ನಮ್ಮ ಹಕ್ಕಿನ ಎಲ್ಲಾ ನೀರನ್ನೂ ಉಪಯೋಗಮಾಡಿಕೊಳ್ಳುವುದಕ್ಕೆ ಯಾವ ಒಂದು ಕುಂಟು ನೆಪವನ್ನೂ ಒಡ್ಡದಂತೆ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಅಭಿಪ್ರಾಯವನ್ನು ಈ ಸಭೆಯ ಮುಂದೆ ಮಂಡಿಸಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎಂ ಚನ್ನಬಸಪ್ಪ.—ಸ್ವಾಮಿ, ಕಾವೇರಿ ನದಿ ನೀರಿನ ವಿಚಾರವಾಗಿ ನಾನು ಮಾತನಾಡಬಾರದೆಂತಲೇ ಇದ್ದೆ. ಆದರೆ ನಾನು ಮಾತನಾಡುವುದಕ್ಕೆ ಒಂದು ಮುಖ್ಯ ಕಾರಣ ಎಂದರೆ ಹೋದ ವರ್ಷ ಇದೇ ಸಭೆಯಲ್ಲಿ ಕಾವೇರಿ ನದಿ ನೀರನ್ನು ಬಳಸತಕ್ಕ ವಿಚಾರದಲ್ಲಿ ವಿಪುಲವಾಗಿ ಚರ್ಚೆ ನಡೆದು ಆ ದಿವಸ ಈ ಸಭೆಯಲ್ಲಿ ಒಂದು ನಿರ್ಣಯ ಪಾಸಾಯಿತು. ಅನಂತರ ಇದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳೂ, ಮದ್ರಾಸಿನ ಮುಖ್ಯ ಮಂತ್ರಿಗಳೂ ಮತ್ತು ಕೇಂದ್ರದ ನೀರಾವರಿ ಸಚಿವರು ಈ ಮೂವರ ನಡುವೆ ಒಂದು ಚರ್ಚೆ ನಡೆದು ಆ ಮೂವರು ಒಂದು ತೀರ್ಮಾನಕ್ಕೆ ಬಂದಹಾಗೆಯೂ ಮತ್ತು ಮೈಸೂರು ಸರ್ಕಾರದವರಿಗೆ ಹೇಮಾವತಿ ನದಿಗೆ ಒಂದು ಅಡ್ಡಗಟ್ಟೆಯನ್ನು ಹಾಕುವುದಕ್ಕೆ ಕ್ಲಿಯರನ್ಸ್ ಸಿಕ್ಕಿದೆ, ಕೇಂದ್ರದವರ ಅನುಮತಿ ದೊರೆತಿದೆ ಅನ್ನುವ ಸಮಾಚಾರವನ್ನು ನಾನು ಕೆಲವು ಪತ್ರಿಕೆಗಳಲ್ಲಿ ಓದಿದೆನು. ಆಗ ನನ್ನ ಮನಸ್ಸಿಗೆ ಒಂದು ವಿಷಯ ಹೊಳೆಯಿತು, ಏನೆಂದರೆ ನಾವಿನ್ನೂ ಈ ಕಾವೇರಿ ನೀರಿನ ವಿಚಾರದಲ್ಲಿ ಮಾತನಾಡಬಾರದು ಎಂಬುದಾಗಿ. ಅದಕ್ಕೆ ಕಾರಣವೇನೆಂದರೆ ನಮ್ಮ ಸರ್ಕಾರಕ್ಕೆ ಕಿವಿಯಿದ್ದರೂ ಇದು ಕಿವುಡು ಮತ್ತು ಕಣ್ಣಿದ್ದರೂ ಇದು ಕುರುಡು ಸರ್ಕಾರ ಎಂಬುದನ್ನು ಅರ್ಥ ಮಾಡಿಕೊಂಡು ಆ ರೀತಿ ತೀರ್ಮಾನ ಮಾಡಿಕೊಂಡಿದ್ದೆನು. ಆಡಳಿತ ನಡೆಸತಕ್ಕ ಜನರೇನಿದ್ದಾರೆ ಇವರು ಆಗಿಂದಾಗ್ಗೆ ರಾಜಕೀಯಗತ್ತುಗಾರಿಕೆಯಿಂದ ಒಂದೊಂದು ಹೇಳಿಕೆಯನ್ನು ಕೊಡುತ್ತಿರುತ್ತಾರೆ. ಆ ಹೇಳಿಕೆಗಾದರೋ ಅನೇಕ ಅಪಾರ್ಥಗಳಿಂದ ಕೂಡಿರುತ್ತವೆ. ಅಂಥ ಅಪಾರ್ಥಗಳಿಂದ ಕೂಡಿರತಕ್ಕ ಅಪದ್ಧಗಳಿಂದ ಕೂಡಿರತಕ್ಕ ಹೇಳಿಕೆಗಳನ್ನು ಇಂಥ ಸಭೆಗಳ ಮುಂದಿಟ್ಟು ದೇಶದಲ್ಲಿರತಕ್ಕ ಜನರ ಕಣ್ಣಿಗೆ ಮಣ್ಣನ್ನೆರಚುವುದಕ್ಕೆ ಪ್ರಾರಂಭಮಾಡಿದ್ದಾರೆ. ಆಡಳಿತದಲ್ಲಿರತಕ್ಕ ಜನ ಹೀಗೇ ಜನರ ಕಣ್ಣಿಗೆ ಮಣ್ಣೆರಚುತ್ತಾ ಕಾಲವನ್ನು ತಳ್ಳಿಕೊಂಡು ಹೋಗುವುದಕ್ಕೆ ಇಂಥ ಆಟಗಳನ್ನಾಡಿಕೊಂಡು ಬರುತ್ತಿದ್ದಾರೆಂದು ಇವರ ಬಗ್ಗೆ ನನಗೆ ತುಂಬಾ ಅನುಮಾನವುಂಟಾಗಿದೆ.

ನಾನು ಅಧಿಕಾರವನ್ನು ಬಿಟ್ಟಿದ್ದು ತಾರೀಖು 28–9–1962 ರಲ್ಲಿ. ನಾನು ಆ ಮಂತ್ರಿ ಪದವಿಯನ್ನು ಬಿಟ್ಟ ತಕ್ಷಣವೆ ''ಮಂತ್ರಿಗಳು ಕೊಡತಕ್ಕ ಹೇಳಿಕೆಗಳು ಯಾವತ್ತೂ ಅಸತ್ಯ ಅಸಂಭವ್ಯತಗಳಿಂದ ಕೂಡಿರುತ್ತವೆ'' ಎಂಬುದಾಗಿ ಹೇಳಿದ್ದೇನೆ. ಮೈಸೂರು ರಾಜ್ಯದಲ್ಲಿ ಕೆಲವು ರಾಜಕಾರಣಿಗಳಿಗೆ ಕಾವೇರಿ ನದಿ ನೀರನ್ನು ರೈತರಿಗೆ ಒದಗಿಸಬೇಕೆಂಬ ಆಕಾಂಕ್ಷೆ ಇಲ್ಲದಿದ್ದರೂ ರಾಜಕೀಯ ಗತ್ತುಗಾರಿಕೆಯಿಂದ ತಮ್ಮ ಸ್ವಂತಕ್ಕೆ ಕೆಲವು ಅನುಕೂಲತೆಗಳನ್ನು ಪಡೆಯುವುದಕ್ಕಾಗಿ ಆಗಾಗ್ಗೆ ಒಂದೊಂದು ಹೇಳಿಕೆಯನ್ನು ಕೊಡತಕ್ಕದ್ದು ವಾಡಿಕೆಯಾಗಿ ಬಂದಿದೆ ಎಂದು ಶ್ರೀ ನಂಜೇಗೌಡರು ಹೇಳಿದರು............

ಒಬ್ಬ ಮಾನ್ಯ ಸದಸ್ಯರು.—ಶ್ರೀಮಾನ್ ಚನ್ನಬಸಪ್ಪನವರೂ 1962 ರಲ್ಲಿ ಮಂತ್ರಿಗಳಾಗಿದ್ದರಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಜ, ನಾನು ಮಂತ್ರಿಯಾಗಿದ್ದೆ. ಆ ವಿಚಾರ ಹಾಗಿರಲಿ, ಈ ಆಡಳಿತಗಾರರು ಹೀಗೇ ತಮ್ಮ ಒಂದು ರಾಜಕೀಯ ಗತ್ತುಗಾರಿಕೆಯಲ್ಲಿಯೇ ಕಾಲವನ್ನು ತಳ್ಳಿಕೊಂಡು ಹೋಗುವುದಾಗಿದ್ದರೆ ಮುಂದೆ ಇವರ ಚರಿತ್ರೆಯನ್ನು ಚರಿತ್ರಕಾರರು ಇವರ ಮುಖಕ್ಕೆ ಕಪ್ಪು ಮಸಿಯನ್ನು ಹಚ್ಚಿ ಚರಿತ್ರೆಯನ್ನು ಬರೆಯುತ್ತಾರೆಂಬುದನ್ನು ಇವರು ಮರೆಯಬಾರದು. ಸರ್ಕಾರದವರು ಒಂದಾವರ್ತಿ ಕೊಟ್ಟ ಹೇಳಿಕೆಯನ್ನು ಬದಲಾಯಿಸುವುದಕ್ಕೆ ಅಂಥ ಯಾವ ಕಾರಣಗಳೂ ಕಂಡುಬರುವುದಿಲ್ಲ ಮತ್ತು ಕಳೆದ ಏಳು ವರ್ಷಗಳಲ್ಲಿ ಪರಿಸ್ಥಿತಿ ಕೂಡ ಬದಲಾವಣೆ ಯಾಗಿಲ್ಲ. ಹಾಗಿದ್ದರೂ ಸಹಾ ಸರ್ಕಾರದವರು ಕೊಟ್ಟಿರತಕ್ಕ ಅಪ್ರಮಾಣಿಕ ಹೇಳಿಕೆಗಳೇನಿವೆ ಅವುಗಳನ್ನು ಶ್ರೀ ನಂಜೇಗೌಡರು ಸವಿಸ್ತಾರವಾಗಿ ಹೇಳಿದ್ದಾರೆ. ರಾಜ್ಯದ ಮುಖ್ಯ ಮಂತ್ರಿಯಾಗತಕ್ಕವರು ರಾಜ್ಯದಲ್ಲಿರತಕ್ಕ ಜನರ ನಂಬಿಕೆಗೆ ಪಾತ್ರರಾಗಿರಬೇಕಾದ್ದು ಬಹಳ ಮುಖ್ಯವಾದುದೆಂದು ನಾನು ತಿಳಿದುಕೊಂಡಿದ್ದೇನೆ. ಇಂಥ ಒಂದು ಸಂದರ್ಭದಲ್ಲಿ ರಾಜ್ಯದ ಮುಖ್ಯ ಮಂತ್ರಿಗಳಾಗಿರತಕ್ಕವರು ಏನಾದರೂ ಒಂದು ಹೇಳಿಕೆಯನ್ನು ಕೊಟ್ಟರೆ ರಾಜ್ಯದಲ್ಲಿರತಕ್ಕ ಕೋಟ್ಯಾನು ಕೋಟಿ ಜನರು ಆ ಹೇಳಿಕೆಯನ್ನು ಸತ್ಯವಾದುದೆಂದು ನಂಬುತ್ತಾರೆ. ಹಾಗೆ ಜನರು ನಂಬುವಂಥ ಹೇಳಿಕೆಯನ್ನು ಕೊಡತಕ್ಕ ವ್ಯಕ್ತಿಗಳು ಇಲ್ಲಿ ಯಾರಾದರೂ ಇದ್ದಾರೆಯೇ ಎಂಬುದನ್ನು ಅವರವರೇ ಅವರ ಆತ್ಮಸಾಕ್ಷಿಯಾಗಿ ಅವರವರ ಹೃದಯಗಳನ್ನು ಪರೀಕ್ಷೆಮಾಡಿಕೊಳ್ಳಬೇಕು. ಇಲ್ಲಿಯವರೆಗೂ ಕೊಟ್ಟಂಥ ಹೇಳಿಕೆಗಳೆಲ್ಲವೂ ಬರಿಯ ಗತ್ತುಗಾರಿಕೆಯ ತೀರ್ಮಾನಗಳೇ. ನಮ್ಮ ಮುಂದೆ ಈ ದಿವಸ ಇರತಕ್ಕ ಪ್ರಶ್ನೆ ಇಷ್ಟೇ ಕಾವೇರಿ ಕಣಿವೆಯಲ್ಲಿ ಬರತಕ್ಕ ನೀರಿನಲ್ಲಿ ಮೈಸೂರಿನವರ ಪಾಲೆಷ್ಟಿದೆ, ಅದರಲ್ಲಿ ನಮ್ಮ ಹಕ್ಕಿನ ನೀರೆಷ್ಟು? ಆ ನೀರನ್ನು ನಾವು ಬರುವ 1974ರೊಳಗೆ ಹೇಗೆ ಉಪಯೋಗ ಮಾಡಿಕೊಳ್ಳಬೇಕು ಅನ್ನುವುದು ಒಂದನೇ ವಿಷಯ. ಇನ್ನು ಎರಡನೇಯದಾಗಿ ಈ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಎಷ್ಟು ಹಣಬೇಕು ಎಂಬುದನ್ನು ನಿರ್ಣಯಮಾಡಿ ಅದನ್ನು ಭದ್ರಮಾಡಿಕೊಳ್ಳಬೇಕು. ಅವಧಿ ಮುಗಿಯುವುದೊರೊಳಗೆ ಕಾರ್ಯವನ್ನು ಸಾಧಿಸಬೇಕು ಅನ್ನುವುದು ನಮ್ಮ ಮುಂದಿರತಕ್ಕ ಪ್ರಶ್ನೆ. ನಮ್ಮ ನೀರಿನ ಹಕ್ಕು ಎಷ್ಟಿದೆಯೆಂಬುದನ್ನು ಮೊದಲು ಭದ್ರಮಾಡಿಕೊಳ್ಳಬೇಕಾದ್ದು ಬಹಳ ಪ್ರಾಮುಖ್ಯವಾದ ಅಂಶ. ಆದರೆ ಈ ವಿಚಾರದಲ್ಲಿ ಶ್ರೀಮಾನ್ ದೇವರಾಜ ಅರಸು ಅವರು ಯಾವ ನಿಲುವನ್ನು ತಾಳುತ್ತಾರೋ ಅನ್ನತಕ್ಕ ಬಗ್ಗೆ ನನಗೊಂದು ಸಂಶಯವಿತ್ತು. ಅವರು ತಮ್ಮ ಖಚಿತವಾದ ನಿಲುವೇನೆಂಬುದನ್ನು ಸಭೆಯ ಮುಂದಿಟ್ಟಿದ್ದಾರೆ...............

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರು ಆತ್ಮಸಾಕ್ಷಿಯ ಗುಂಪಿಗೆ ಸೇರಿದ್ದಾರೆ ಈಗ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಅವರ ಹೇಳಿಕೆಯನ್ನು ಬದಲಾಯಿಸಬಹುದು ಎಂದಿದ್ದೆ. ಇದೇನು ದೌರ್ಭಾಗ್ಯ? ಒಂದು ಕಡೆ ಅರಸ್ ಅವರು ಮಂತ್ರಿಮಂಡಲದಲ್ಲಿದ್ದಾಗ 1974 ರೊಳಗೆ ನೀರು ಪೂರ್ತಿಯಾಗಿ ಉಪಯೋಗವಾಗಬೇಕು ಎಂದು ಹೇಳುತ್ತಿದ್ದರು. ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರು, ಮಾನ್ಯ ಮುಖ್ಯ ಮಂತ್ರಿಗಳಾಗಿರುವ ಶ್ರೀ ವೀರೇಂದ್ರಪಾಟೀಲ್ ಅವರು ಕಾವೇರಿ ನದಿಯಲ್ಲಿ ನೀರು ಚೆನ್ನಾಗಿ ಹರಿಯುತ್ತಿದೆಯೆಂದು ಮತ್ತೆ ಹೇಳುತ್ತಾರೆ. ತಾವು ದಯವಿಟ್ಟು ತಮ್ಮ ಅಧಿಕಾರಸ್ಥಾನದ ಗೌರವವನ್ನು ಕಾಪಾಡಿಕೊಳ್ಳಿ. ಅಸತ್ಯ ಬಿಡಿ, ಮತ್ತು ಅಪ್ರಾಮಾಣಿಕತೆ ನುಡಿಯುವುದು ಬಿಡಿ. ದೇಶದಲ್ಲಿ ಇಂತಹ ಸಮಸ್ಯೆಗಳನ್ನು ಜಾಗ್ರತೆಯಾಗಿ ಎದುರಿಸಬೇಕು. ಮಾನ್ಯ ಶ್ರೀ ಸಿದ್ದವೀರಪ್ಪನವರು ಮಾತನಾಡುತ್ತಿರುವಾಗ ಅವರಿಗೆ ಒಂದು ಮಾತನ್ನು ಹೇಳಿದರು, 1974ರವರೆಗೆ ನಮ್ಮ ನೀರಿನ ಹಕ್ಕು ಹೋಗುವುದಿಲ್ಲ, ಮತ್ತೆ ನಮ್ಮ ಅಧಿಕಾರಿಗಳು, ಇಂಜಿನಿಯರುಗಳು ಒಂದು ರಿಕಾರ್ಡ್ ತಯಾರು ಮಾಡಿದ್ದಾರೆ, ಆದ್ದರಿಂದ 1974ರೊಳಗೆ ನಮ್ಮ ನೀರು ಹೋಗುವುದಿಲ್ಲವೆಂದು ಹೇಳಿದ್ದಾರೆ. ಅದು ಯಾವ ರಿಕಾರ್ಡ್ ನಮಗೆ ಕೊಡಿ ಎಂದು ಹೇಳಿದರೆ, ಅದು ಗುಟ್ಟು ಎಂದು ಹೇಳುತ್ತೀರಿ ಅದನ್ನು ಕೊಡುವುದಿಲ್ಲವೆಂದು ಏಕೆ ಹೇಳುತ್ತೀರಿ? ನಿಮ್ಮಲ್ಲಿ ರಾಜಕೀಯ ಗತ್ತುಗಾರಿಕೆ ಇರಬಹುದು. ಆಡಳಿತವನ್ನು ಜವಾಬ್ದಾರಿಯಿಂದ ನಡೆಸಬೇಕಾಗಿದೆ. ಎರಡೂವರೆ ಕೋಟಿ ಜನಗಳ ಪ್ರತಿನಿಧಿಗಳಾದ ನಾವೂ ಸಹ ನಿಮ್ಮಂತೆ ದೇಶದ ಜವಾಬ್ದಾರಿಯನ್ನು ಹೊತ್ತಿದ್ದೇವೆ. ನಮ್ಮೊಡನೆ ಗುಟ್ಟಾಗಿ ಇಡುವುದು ಬೇಡ. ಹೋದಸಾರಿ ಇದೇ ಸಭೆಯಲ್ಲಿ ಇದು ಬಹಳ ಸೀಕ್ರಟ್ ಇದೆ, ಡೆಲಿಕೆಸಿ ಇದೆಯೆಂದು ಹೇಳಿದಿರಿ. ಯಾವುದು ಸೀಕ್ರೆಟ್ ಯಾವುದು ಡೆಲಿಕೆಸಿ? ಟೆಕ್ನಿಕಲ್ ಕಮಿಟಿಯನ್ನು ನೇಮಕಮಾಡಿದ್ದೇವೆಂದು ಹೇಳಿದ್ದೀರಿ. ಆ ಗುಟ್ಟನ್ನು ನಾನು ಇವತ್ತು ರಟ್ಟುಮಾಡುತ್ತೇನೆ. ನಾನು ಆ ರೀತಿ ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಕಾವೇರಿ ನೀರಿನ ವಿಷಯ ನಿಮ್ಮ ನಮ್ಮ ಸಂಸಾರದ ವಿಷಯವಲ್ಲ. ಮದ್ರಾಸ್ ಇಂಜನಿಯರುಗಳನ್ನು ಹೆದ್ದರು ಎಂದು ತಿಳಿದಿದ್ದೀರಾ? ನಿಮಗಿಂತಲೂ ಬುದ್ಧಿವಂತರು ಅಲ್ಲಿ ಇದ್ದಾರೆ. ಅವರು ಎಲ್ಲಾ ವಿಚಾರಗಳನ್ನೂ ತಿಳಿದುಕೊಂಡಿ

(ಶ್ರೀ ಎಚ್. ಎಂ. ಚನ್ನಬಸಪ್ಪ)

ದ್ದಾರೆ. ಅವರು ಗುಟ್ಟು ರಟ್ಟುಮಾಡುವುದಿಲ್ಲ. ಇಂದು ಈ ಸಭೆಯ ಸದಸ್ಯರಿಗೆ ಹಾಗೂ ಈ ದೇಶದ ಜನಗಳಿಗೆ ಕಣ್ಣಿಗೆ ಮಣ್ಣು ಎರಚಿದ್ದೀರಿ. ಹೀಗೆ ಎಲ್ಲಿಯವರೆಗೂ ರಾಜ್ಯಭಾರ ಮಾಡುತ್ತೀರಿ? ಒಬ್ಬರನ್ನು ಒಂದು ಸಾರಿ ಮೋಸ ಮಾಡಬಹುದು. ಎಲ್ಲರನ್ನೂ ಎಲ್ಲಾ ಕಾಲದಲ್ಲಿಯೂ ಮೋಸ ಮಾಡುವುದಕ್ಕೆ ಸಾಧ್ಯವೇ ಇಲ್ಲ. 1950ನೇ ಇಸವಿಯಲ್ಲಿ ಈ ನೀರಿನ ವಿಷಯದಲ್ಲಿ ಇವರು ಹೇಳಿರುವುದು ಸರಿಯಿಲ್ಲವೆನ್ನುವುದಕ್ಕೆ ನಾನು ಅಧಿಕಾರಯುತವಾಗಿ ತಮಗೆ ಹೇಳುತ್ತಿದ್ದೇನೆ. ಕೃಷ್ಣರಾಜಸಾಗರ ಒಣಗಿಹೋದ ಕಾಲದಲ್ಲಿ ಶೇಷಾಚಾರ್ ಕಮಿಟಿಯೊಂದು ನೇಮಿಸಿದರು. ಮಾನ್ಯ ಶ್ರೀ ಶೇಷಾಚಾರ್ ಅವರು ಇಂಜಿನಿಯರುಗಳಲ್ಲಿ ಅಗ್ರಗಣ್ಯರು. ಈಗಿನ ಇಂಜಿನಿಯರುಗಳನ್ನೆಲ್ಲಾ ಮೀರಿಸುವವರಾಗಿದ್ದರು. ಅವರು ಒಂದು ತೀರ್ಮಾನಕ್ಕೆ ಬಂದರು. ಅದು ಈ ರೀತಿ ಇದೆ:

> "The experience of this fairly long period can be made use of for consideration of the several problems that need re-examination and an attempt should be made to bring about a revision of the Agreement within the next two years so as to remove all the disadvantages and bring about a fair settlement."

ಅವರು ಹೇಳಿರುವುದು ಸರಿಯಾಗಿಲ್ಲವೆಂದು, ಮತ್ತೆ ಬೇರೊಂದು ಕಮಿಟಿ ಆಗಬೇಕೆಂದು ಹೇಳಿದ್ದರಿಂದ ಸರ್ಕಾರದಿಂದ ನೇಮಿಸಲ್ಪಟ್ಟ ಅನಂತಾಚಾರ್ ಕಮಿಟಿ ಬಂತು. 1959ರಲ್ಲಿ ಅನಂತಾಚಾರ್ ಕಮಿಟಿಯವರು ಒಂದು ನಿರ್ಣಯಕ್ಕೆ ಬಂದರು. ಅದು ಈ ರೀತಿ ಇದೆ:

> "The expert has statad that Mysore cannot achieve even what has been assured under the Agreement. Owing to the restrictions and rules for impounding water at the K. R. Sagar, the prospects of their additional reservoirs above K. R. Sagar are very much limited. Mysore should move for the revision of the Agreement so as to impound 45 M. T. M. C. feet of water. Negotiations should be started for revising the time factor and impounding formula. Expert legal advice should be secured."

ಆಮೇಲೆ ಮೈಸೂರು ಸರ್ಕಾರದ ಟೆಕ್ನಿಕಲ್ ಅಡ್ವೈಸರ್, ಶ್ರೀ ತಿರುಮಲ ಅಯ್ಯಂಗಾರ್ ಅವರು ಈ ರೀತಿ ಹೇಳಿದ್ದಾರೆ:

> "Without affecting the impounding of water in the K. R. Sagar and strictly adhering to the Rules and Regulations under 1924 Agreement, we can build reservoirs above K. R. Sagar for the aggregate storage of one million T. M. C.ft. of water."

ಇಂತಹ ಮಹಾ ಮಹಾ ಇಂಜನಿಯರುಗಳು 1950ನೇ ಇಸವಿಯಿಂದ ಹೇಳಿ ಈಗ್ಗೆ 19 ವರ್ಷಗಳು ಆದವು. ಹೀಗೆ ದೊಡ್ಡದೊಡ್ಡ ಎಕ್ಸ್‌ಪರ್ಟ್ಸ್ ಕಮಿಟಿಯವರು ಸರ್ಕಾರಕ್ಕೆ ಹೇಳಿದ್ದರೂ, ಇವರು ಈಗಿನ ಕರಾರನ್ನು ರಿವಿಷನ್ ಮಾಡದೇ ಹೋದ ಪಕ್ಷದಲ್ಲಿ ನಿಮಗೆ 45 ಟಿ. ಎಂ. ಸಿ. ಫೀಟ್ ನೀರನ್ನು ಉಪಯೋಗಮಾಡುವುದು ನಿಜವಾಗಿ ತಪ್ಪಿಹೋಗುತ್ತದೆ. ಯಾವ ಧೈರ್ಯದಿಂದ, ಯಾವ ಮುಖದಿಂದ ಆ ನೀರು ನಮಗೆ ಹೋಗುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದಾರೋ ಗೊತ್ತಿಲ್ಲ. ಯಾರು ನಿಮಗೆ ಅಡ್ವೈಜ್ ಮಾಡಿದ್ದಾರೆ? ಇವತ್ತಿನ ಇಂಜನಿಯರುಗಳು ಅಡ್ವೈಜ್ ಮಾಡಿದ್ದಾರೆಯೇ? ಅದೂ ಇಲ್ಲ.

ಮೊನ್ನೆ ನಾವೆಲ್ಲರೂ ಸೇರಿ ಈ ವಿಚಾರವಾಗಿ ಚರ್ಚೆಮಾಡಿದ್ದೇವೆ. ನಾನು ಇದೇ ಸಭಾ ಸದಸ್ಯನಾಗಿ ಹೋದವರ್ಷ ಇಲ್ಲಿ ಇದು ಚರ್ಚೆಗೆ ಬಂದಾಗ ನೀವು ಅದನ್ನು ಕಾನ್‌ಫಿಡೆನ್ಷಿಯಲ್ ಆಗಿ ಚರ್ಚೆಮಾಡಬೇಕೆಂದು ಕರೆದು ಚರ್ಚೆ ಮಾಡಿದ ಕಾಲದಲ್ಲಿ ಆಗಾಗ್ಗೆ ಟೆಕ್ನಿಕಲ್ ಮ್ಯಾಟರ್ಸ್ ಬಂದಾಗ

ನೀವು ಒಂದು ಸಣ್ಣ ಕಮಿಟಿ ಮಾಡಿಕೊಂಡು ಚರ್ಚೆಮಾಡಿದ್ದೀರಾ ? ಇದರಿಂದ 10 ಟಿ. ಎಂ. ಸಿ. ಫೀಟ್ ನೀರೂ ಸಹ ಮುಂದೆ ಸಿಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಹೇಮಾವತಿಗೆ ಈಗ ಯಾವ ಧೈರ್ಯದಿಂದ ಅಣೆಕಟ್ಟು ಕಟ್ಟಿದ್ದೀರಿ ? ಹಾರಂಗಿ ಮತ್ತು ಕಂಬದಕಡ ಅಣೆಕಟ್ಟುಗಳನ್ನು ಹೇಗೆ ಕಟ್ಟಬೇಕೆಂಬುದನ್ನು ನೀವು ಹೇಳಬೇಕು. 30–40 ಟಿ. ಎಂ. ಸಿ. ಫೀಟ್ ನೀರು ಸಿಗುತ್ತದೆಂದು ಹೇಳಿದ್ದಾರೆ. ಹಿಂದೆ ಒಂದು ಸಾರಿ ನಿಮ್ಮ ಕಮಿಟಿಯಲ್ಲಿ ಕೂತು ಚರ್ಚೆಮಾಡಿ ನಿಮ್ಮ ಇಂಜಿನಿಯರುಗಳ ಜೊತೆಯಲ್ಲಿ ಪರಿಶೀಲನೆಮಾಡಿ ಅವರು ಏನು ಹೇಳಿದ್ದಾರೆಂಬುದನ್ನು ತಮಗೆ ಹೇಳುತ್ತೇನೆ.

> "It is the considered opinion of the present engineers that not more than 10 T. M. C. ft is available on 75 per cent dependability in Cauvery Valley basin."

Do you condemn that? You dare not. ಮತ್ತು ಎಲ್ಲಾ ಇಂಜಿನಿಯರುಗಳ ಅಭಿಪ್ರಾಯವೂ ಹೀಗೆ ಇದೆ. ಕಾಲ ಮಿಂಚಿ ಹೋಗುವುದರೊಳಗೆ ನೀವು ಕಾವೇರಿ ಕಣಿವೆಯಲ್ಲಿರತಕ್ಕ ಎಲ್ಲಾ ಪ್ರಾಜೆಕ್ಟುಗಳನ್ನೂ ಕಟ್ಟದೆ ಹೋದರೆ, ಮುಂದಿನ ಪೀಳಿಗೆ ನಿಮ್ಮನ್ನು ಶಪಿಸಬಹುದೆಂಬ ಅಭಿಪ್ರಾಯವೂ ಇದೆ. ಹಿಂದಿನ ಇಂಜಿನಿಯರುಗಳ ಅಭಿಪ್ರಾಯವೂ ಇದೆ. 1974ರ ಮೇಲೆ ಸರಿಯಾಗಿ ನೀರು ಸಿಗುವುದಕ್ಕೆ ಅಗ್ರಿಮೆಂಟ್ ರಿವೈಸ್ ಮಾಡಬೇಕು, ಮತ್ತು ಅದಕ್ಕೆ ಬೇಕಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ನಾವು ಇದಕ್ಕೆ ಹಣ ಒದಗಿಸಲೇ ಬೇಕು ; ಮತ್ತು ನೀರನ್ನು ಉಪಯೋಗಿಸಿಕೊಳ್ಳಲೇಬೇಕು ಎಂಬ ಅಭಿಪ್ರಾಯ ಇದೆ. ಇಲ್ಲಿ ಇವರು ಸಭೆಗೆ ಅಪ್ರಮಾಣಿಕವಾದ ವಿಷಯವನ್ನು ಹೇಳುತ್ತಿದ್ದಾರೆ. ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಕೂಡ ಸ್ಪಷ್ಟವಾಗಿ ಹೇಳಿದ್ದಾರೆ. ಇವರು ರಾಜಕೀಯ ಮಾಡಿ ಇದೆಲ್ಲಾ ಹಾಳಾಗಿ ಹೋಯಿತು ಎಂದು ಹೇಳಿದರು. ನೀವಲ್ಲದಿದ್ದರೂ, ನಿಮ್ಮ ಪೊಲಿಟಿಕಲ್ ಫಾದರ್‌ನಿಂದ ಎಲ್ಲಾ ಆಯಿತು. ಚನ್ನಬಸಪ್ಪನವರು 1959 ರಲ್ಲಿ ಹಾರಂಗಿ ಪ್ರೊಜೆಕ್ಟಿಗೆ 200 ಲಕ್ಷ ರೂಪಾಯಿಯನ್ನು ಪ್ರೊವೈಡ್ ಮಾಡಿ ಎಂದರೂ ಕೇಳಲಿಲ್ಲ, ಆದ್ದರಿಂದ ಅವರನ್ನೇ ಕಿತ್ತುಹಾಕಿರಿ ಎಂದುಬಿಟ್ಟರು. ಭರತಖಂಡದ ಸಿಂಡಿಕೇಟಿಗೂ, ಇದಕ್ಕೂ ಸ್ವಲ್ಪ ಸಂಬಂಧವಿದೆ. ಇವತ್ತು ಮಂಡ್ಯದವರ ಮೇಲೆ ಮೈಸೂರಿನವರನ್ನು ಎತ್ತಿ ಕಟ್ಟುವುದು, ಮೈಸೂರಿನವರ ಮೇಲೆ ಹಾಸನದವರನ್ನು ಎತ್ತಿ ಕಟ್ಟುವುದು, ಹೀಗೆ ಇವರು ಅವರ ಮೇಲೆ, ಅವರು ಇವರ ಮೇಲೆ ಎಂದು ಹೇಳುತ್ತಾ ಕೊನೆಗೆ ಕಾವೇರಿ ನೀರಿನ ಹಕ್ಕು ಹೋಗುತ್ತದೆ. ಒಬ್ಬರಿಗೆ ಆ ರೀತಿ ಹೇಳುವುದು, ಇನ್ನೊಬ್ಬರಿಗೆ ಈ ರೀತಿ ಹೇಳುವುದು. ಹಾರಂಗಿ, ಹೇಮಾವತಿ ಯೋಜನೆಗಳನ್ನು ಕೆ. ಆರ್. ಎಸ್ ಮೇಲೆ, ಕಟ್ಟಿದರೆ, ನಿಮಗೆ ಈಗ ಇರುವ ತೊಂದರೆಗಿಂತ ಇನ್ನೂ ಹೆಚ್ಚಿನ ತೊಂದರೆ ಬರುತ್ತದೆ ಎಂದು ಹೇಳಿಬಿಟ್ಟರೆ, ಮಾನ್ಯ ಮಂಚೇ ಗೌಡರು ಗಾಬರಿಪಟ್ಟುಕೊಂಡು ಬಿಡುತ್ತಾರೆ. ಮಾನ್ಯ ದೇವೇ ಗೌಡರು, ಹಾಸನದವರು, ಮೊನ್ನೆ ರಿಸೊಲ್ಯೂಶನ್ ತಂದಿದ್ದಾರೆ, ಈ ರೀತಿ ಒಂದು ರಾಜಕೀಯ ಮಾಡುತ್ತಿದ್ದಾರೆ. ಹಾರಂಗಿ ಪ್ರೊಜೆಕ್ಟ್ ಮಾಡಿಕೊಳ್ಳಲು ಮಲೆನಾಡು ಕಾನ್‌ಫರೆನ್ಸ್ ಮಾಡಿದ್ದಾರೆ. ಅಧಿಕಾರಕ್ಕೆ ಬಂದ ಮಾರನೆಯ ದಿನ ಹಾರಂಗಿ, ಕಂಬದಕಡದ ಬಗ್ಗೆ. ಒಂದು ತೀರ್ಮಾನ ಮಾಡುತ್ತಾರೆ. ಒಂದು ಸರ್ಕಾರ ಮಾಡಿದ ಪಾಲಿಸಿಯನ್ನು ಮುಂದುವರಿಸಿಕೊಂಡು ಹೋಗತಕ್ಕದ್ದು ಇನ್ನೊಂದು ಸರ್ಕಾರದ ಕರ್ತವ್ಯ ಮತ್ತು ನೀತಿ. ಅಲ್ಲಿಂದ ಟ್ವಿನ್ ಪ್ರೊಜೆಕ್ಟ್ಸ್ ಮಾಡಿ, ಕಾಫಿ ತೋಟ ಮುಳುಗಡೆಯಾಗುವುದನ್ನು ಕಡಿಮೆ ಮಾಡಿದ್ದಾರೆ. ನೀವು ಅದನ್ನು ಹಾಗೆ ಯಾವ ಕಾರಣದಿಂದ ಮಾಡಿದ್ದೀರಿ ಎಂಬುದನ್ನು ಉತ್ತರ ಕೊಡುವಾಗ ಹೇಳಬೇಕು. ಅಲ್ಲಿ 1400 ಎಕರೆ ಮುಳುಗಿ ಹೋಗುತ್ತದೆಂದು, ಅದನ್ನು ಕಡಿಮೆ ಮಾಡುವುದಕ್ಕೋಸ್ಕರ ಬೇರೆ ಜಾಗದಲ್ಲಿ ಮಾಡಿದರು. ಅದನ್ನು ಸಿ. ಡಬ್ಲ್ಯು ಪಿ. ಸಿ. ಯವರಿಗೆ ಕಳಿಸಿದ್ದಾರೆ. ಯಾರೋ ಒಬ್ಬರು, ನಿಮಗೆ ಬೇಕಾದವರ ಜಮೀನ್ದಾರರ ಜಮೀನು ಮುಳುಗಡೆಯಾಗುತ್ತದೆಂದು ಆ ರೀತಿ ಬದಲಾವಣೆ ಮಾಡಿದ್ದೀರಿ. ಇಲ್ಲಿ ಏನು ಹೇಳಿದ್ದಾರೆಂದರೆ:

> "The estimated cost of the Project is 11.05 crores to utilise 18 T. M. Cft. This project was submitted to the Central Water and Power Commission in 1963. Even this proposal met with stiff opposition, on the plea that the plantations of quality coffee would be submerged.

ಪಸಂದಾದ ಕಾಫಿ ತೋಟ ಮುಳುಗಿ ಹೋಗುತ್ತದೆ ಇದು ಬೇಡವೆಂದು ಹೇಳುತ್ತಾರೆ. ಆಮೇಲೆ ಇನ್ನೊಂದು ಪ್ರೊಜೆಕ್ಟ್ ತೆಗೆದುಕೊಂಡರು. ಇವರು ಇವತ್ತು ಪಟ್ಟಭದ್ರಹಿತಗಳ ಕೈವಾಡಗಳಿಗೆ

(ಶ್ರೀ ಹೆಚ್. ಎಂ. ಚನ್ನಬಸಪ್ಪ)

ಸಿಕ್ಕಿ ಪದೇ ಪದೇ ದೇಶದ ಹಿತವನ್ನು ದೂರೀಕರಿಸಿ ಕೆಲಸಗಳನ್ನು ಮಾಡುತ್ತಿದ್ದಾರೆ. ಇವತ್ತು ನಿಮ್ಮೆಲ್ಲರ ಪ್ರೇಮವು ನನ್ನಲ್ಲಿ ಇದೆ. ಆದರೆ ಓಟು ಮಾತ್ರ ನಿಮ್ಮಲ್ಲಿ ಇದೆ. ಪ್ರೇಮವು ಆದರವೂ ಎಲ್ಲವೂ ಇದೆಯೆಂದು ನಾವು ನೀವು ಮಾತನಾಡುವಾಗ ಗೊತ್ತಾಗುತ್ತದೆ. ನಮ್ಮ ರಾಚಯ್ಯನವರಿಗೂ ನಮ್ಮ ಮೇಲೆ ಪ್ರೇಮ ಇದೆ. ಆದರೆ ಓಟು ನಿಮ್ಮ ಕಡೆ. ಮಾನ್ಯ ಪುಟ್ಟಸ್ವಾಮಿಯವರಿಗೆ ಅನಂತ ಪ್ರೇಮ ಇದೆ. ಆದ್ದರಿಂದ ಈ ರೀತಿಯಾದ ಅಪ್ರಮಾಣಿಕವಾದಂತಹ ಸ್ಟೇಟ್‌ಮೆಂಟುಗಳನ್ನು ಮಾಡುವುದು ಸರಿಯಲ್ಲ. ನಾಳೆ ಪೇಪರಿನಲ್ಲಿ ದೊಡ್ಡದಾಗಿ ಬರುತ್ತದೆ, ಇನ್ನು 276 ಟಿ. ಎಂ. ಸಿ. ಎಫ್ ಟಿ. ನೀರು ಇದೆ ಎಂದು ಮಾನ್ಯ ಮುಖ್ಯಮಂತ್ರಿಯವರ ಸ್ಪಷ್ಟೋಕ್ತಿ ಎಂದು. ಇವರು ಏನಾದರೂ ಬರೆದರೂ, ಅವರ ಮೇಲಿನವರೂ ಬಿಡುವುದಿಲ್ಲ. ನಾವು ಕಾವೇರಿ ನದಿ ನೀರನ್ನು ಒಂದು ತೊಟ್ಟು ಕೂಡ ಬಿಡುವುದಿಲ್ಲ, ಎಂದು ಮಾನ್ಯ ಮುಖ್ಯಮಂತ್ರಿಯವರು ವಿಧಾನಸಭೆಯಲ್ಲಿ ಖಂಡತುಂಡವಾಗಿ ಹೇಳಿದರು ಎಂದು ನಾಳೆ ಪತ್ರಿಕೆಯಲ್ಲಿ ಬರುತ್ತದೆ. ಆದ್ದರಿಂದ ನಾನು ಆರಿಕೆ ಮಾಡಿಕೊಳ್ಳುವುದೇನೆಂದರೆ, ಮೊದಲು ನೀರನ್ನು ಭದ್ರ ಮಾಡಿಕೊಳ್ಳಿ. ನಾನು ಹೇಳುತ್ತಿರುವುದು ನಿಮ್ಮ ಅಧಿಕಾರವನ್ನು ಕಿತ್ತೊಗೆಯಬೇಕು, ಅಥವಾ ಅದನ್ನು ರಾಜಕೀಯ ಕಾರಣದಿಂದ ಹೇಳುತ್ತಾ ಇಲ್ಲ. ಇದನ್ನು ನಾನು ನನ್ನ ಮನನೊಂದು ಹೇಳುತ್ತಿದ್ದೇನೆ. ಈ ಪ್ರಾಂತ್ಯದಲ್ಲಿ ಜನರು ಎಷ್ಟು ಕಷ್ಟದಲ್ಲಿ ಸಿಕ್ಕಿದ್ದಾರೆಂಬುದು ನನಗೆ ಗೊತ್ತಿದೆ. ನೀವು ನಿಮ್ಮ ಸ್ಥಾನವನ್ನು ಭದ್ರ ಮಾಡಿಕೊಳ್ಳುವುದಕ್ಕೋಸ್ಕರ ಹೇಗೋ ಮುಂದುವರಿಸಿಕೊಂಡು ಹೋಗುತ್ತಿದ್ದೀರಿ. ಇದು ನಿಮಗೆ ಯಾವ ಶೋಭೆಯನ್ನು ತರುವುದಿಲ್ಲ.

6-30 P.M.

ಮೊನ್ನೆ ಮಾನ್ಯ ಹಣಕಾಸಿನ ಸಚಿವರು ಹೇಳಿದರು ಈ ಕಾವೇರಿ ಯೋಜನೆಗೆ 5-6 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಕಷ್ಟವಾಗುವುದಿಲ್ಲ ಅದನ್ನು ಕೊಡುತ್ತೇವೆ ಎಂಬುವನ್ನು ಅದಕ್ಕೆ ತಮ್ಮ ಸಹಕಾರ ಏತಕ್ಕೆ ಇಲ್ಲ? ಈ ಯೋಜನೆಗೆ ಈ ವರ್ಷ 6 ಕೋಟಿ ರೂಪಾಯಿಗಳನ್ನು ಒದಗಿಸಿ. ಮುಂದಿನ ವರ್ಷದಿಂದ ಒಂದು ವರ್ಷಕ್ಕೆ 30 ಕೋಟಿ ರೂಪಾಯಿಗಳನ್ನು ಒದಗಿಸಿ. ಕಾವೇರಿ ನೀರಿನ ಬಗ್ಗೆ ರಾಜಕೀಯವನ್ನು ಏತಕ್ಕೆ ತಂದೊಡ್ಡುತ್ತಿದ್ದೀರಿ? ನೀವು ಅಪದ್ದ ನುಡಿಯುವುದಕ್ಕೆ ಎಲ್ಲಿಯವರೆಗೆ ಹೋಗಿದ್ದೀರಿ ಎಂದರೆ ಹಾರಂಗಿ ಪ್ರಾಜೆಕ್ಟಿಗೆ ಅಸ್ತಿಭಾರವನ್ನು ಹಾಕುವುದಕ್ಕೆ ಹಿಂದೆ ಪ್ರಧಾನಮಂತ್ರಿಗಳಾಗಿದ್ದ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಗಳವರನ್ನು ಇನ್‌ವೈಟ್ ಮಾಡಿದಾಗ ಆ ಯೋಜನೆಗೆ ತಾಂತ್ರಿಕ ಮಂಜೂರಾತಿ ದೊರೆಯದೇ ಇದ್ದುದರಿಂದ ಅವರು ಅದಕ್ಕೆ ಒಪ್ಪಿಕೊಳ್ಳಲಿಲ್ಲ. ಇನ್‌ವಿಟೇಷನ್ ಪ್ರಿಂಟ್ ಮಾಡಿಸಿ ಪ್ರೋಗ್ರಾಮ್ ಹಾಕಿ ವ್ಯವಸ್ಥೆ ಮಾಡಿದ್ದು ನಿಂತುಹೋಯಿತು. ನಾವು ಯಾವೊತ್ತು ಈ ಕಾರ್ಯಕ್ಕೆ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳವರನ್ನು ಇನ್‌ವೈಟ್ ಮಾಡಲಿಲ್ಲ ಎಂದು ಸರ್ಕಾರದವರು ಹೇಳಿದರು. ಈ ರೀತಿ ಸುಳ್ಳು ಹೇಳಬಹುದೇ, ಅಪದ್ದ ಹೇಳಬಹುದೇ, ಸುಳ್ಳು ಹೇಳುವುದಕ್ಕೂ ಒಂದು ಲಿಮಿಟ್ ಇದೆ. ಯಾವ ಕೆಲಸವನ್ನು ತೆಗೆದುಕೊಳ್ಳುವುದಕ್ಕೂ ದುಡ್ಡು ಇಲ್ಲ, ದುಡ್ಡು ಇಲ್ಲ ಎಂದು ಹೇಳುತ್ತಿದ್ದೀರಿ. ಈಗ 5 ವರ್ಷಗಳಿಂದ ಹಾರಂಗಿ ಪ್ರಾಜೆಕ್ಟಿಗೆ ಒಂದು ಲಕ್ಷ 60 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಈಗ ದುಡ್ಡು ಇಲ್ಲ ಎಂದು ಆ ಪ್ರಾಜೆಕ್ಟಿನ ಕೆಲಸವನ್ನು ನಿಲ್ಲಿಸಿದ್ದೀರಿ. ಯಾವ ರಾಜಕೀಯ ಉದ್ದೇಶದಿಂದ ಈ ಯೋಜನೆಯನ್ನು ನಿಲ್ಲಿಸಿದ್ದೀರಿ ಎಂಬುದನ್ನು ಹೇಳಿ. ಇದು ರಾಜಕೀಯ ಗತ್ತುಗಾರಿಕೆಯಲ್ಲದೇ ಮತ್ತೇನು? ಈ ಪ್ರಾಜೆಕ್ಟಿಗೆ ಹಣವನ್ನು ಕೊಡಕೂಡದು ಎಂದು ಮನಸ್ಸಿನಲ್ಲಿಟ್ಟುಕೊಂಡು ದುಡ್ಡು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ. ಇದು ಸರಿಯಲ್ಲ. ಇದು ತಪ್ಪು. ಇದನ್ನು ನೀವು ಬಿಡಬೇಕು. ನಿಮ್ಮ ಖಜಾನೆಯಲ್ಲಿ ಹಣ ಇಲ್ಲ ಎಂದು ತಿಳಿದ ಮೇಲೆ ಈ ಹಾರಂಗಿ ಪ್ರಾಜೆಕ್ಟಿನ ಕೆಲಸಕ್ಕೆ ಏತಕ್ಕೆ ಟೆಂಡರ್ ಕಾಲ್‌ಫಾರ್ ಮಾಡಿದಿರಿ? ಟೆಂಡರ್ ಕಾಲಫಾರ್ ಮಾಡಿ ಟೆಂಡರು ಬಂದಮೇಲೆ ಆ ಟೆಂಡರನ್ನು ಒಪ್ಪಿಕೊಂಡಿದ್ದೀರಿ, ಅಮೇಲೆ 3 ತಿಂಗಳಾದಮೇಲೆ ಆ ಟೆಂಡರನ್ನು ವಜಾ ಮಾಡಿದ್ದೀರಿ. ಇಂಥಾ ಕುಟಿಲ ನೀತಿ ಮುಖ್ಯ ಮಂತ್ರಿಗಳಿಗೆ ಸಲ್ಲದು. ಆ ಸ್ಥಾನವನ್ನು ಅಲಂಕರಿಸಿದಮೇಲೆ ಬಹಳ ಜವಾಬ್ದಾರಿಯಿಂದ ಕೆಲಸಮಾಡಬೇಕು. ಈ ಸಭೆಯ 216 ಜನ ಮಾನ್ಯ ಸದಸ್ಯರು ಕಾವೇರಿ ಬೇಸಿನ್‌ನಲ್ಲಿರತಕ್ಕ ಎಲ್ಲಾ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದು ಒಂದು ತೀರ್ಮಾನವನ್ನು ಕೈಗೊಂಡು ಯುನಾನಿಮಸ್ ಡಿಸಿಷನ್ ತೆಗೆದುಕೊಂಡು ಅದನ್ನು ಜಾರಿಗೆ ಕೊಡಿ ಎಂದು ಹೇಳಿದರೆ ಅದನ್ನು ಧೈರ್ಯವಾಗಿ ಜಾರಿಗೆ ಕೊಡುವುದಕ್ಕೆ ಇವರು ಪ್ರಯತ್ನ ಮಾಡಿಲ್ಲ. ಈ ಬಗ್ಗೆ ಹೇಳಬೇಕಾದ್ದು ಬೇಕಾದಷ್ಟು ಇದೆ. ನನಗೇನೂ

ಅಧಿಕಾರಕ್ಕೆ ಬರಬೇಕೆಂದು ಆಶೆ ಇಲ್ಲ. ನಾನಾದರೂ ಹೇಳುವುದು ಇಷ್ಟೆ. 1924ನೇ ಇಸವಿಯ ಅಗ್ರಿಮೆಂಟ್ ಪ್ರಕಾರ ಕಾವೇರಿ ನೀರಿನಲ್ಲಿ ನಮಗೆ ಬರಬೇಕಾಗಿರತಕ್ಕ ನೀರಿನ ಹಕ್ಕನ್ನು 1974ನೆಯ ಇಸವಿಯ ಒಳಗಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಸರ್ಕಾರದವರು ಸರ್ವ ಪ್ರಯತ್ನವನ್ನೂ ಮಾಡಬೇಕು. ಅದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಬೇಕು. 45 ಟಿ. ಎಂ. ಸಿ. ಎಫ್. ಟಿ ನೀರಿನ ಶೇಖರಣೆಗೆ ಎಲ್ಲಾ ಪ್ರಯತ್ನವನ್ನೂ ಮಾಡಬೇಕು. ಮತ್ತು 1924 ನೇ ಇಸವಿಯಲ್ಲಿ ಆದಂತಹ ಅಗ್ರಿಮೆಂಟನ್ನು ರಿವೈಜ್ ಮಾಡಬೇಕು. ಅದು ಆಗದೇ ಕಟ್ಟೆಯನ್ನು ಕಟ್ಟುತ್ತೇವೆಂದು ಹೇಳಿಕೊಂಡು ಹೋದರೆ ನಿಜವಾಗಿಯೂ ದೇಶಾಭಿಮಾನದಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. 1924 ನೇ ಇಸವಿಯಲ್ಲಿ ಆದಂತಹ ಅಗ್ರಿಮೆಂಟನ್ನು ರಿವೈಜ್ ಮಾಡುವುದಕ್ಕೆ 5 ಕಾರಣಗಳಿವೆ. ಇದರಲ್ಲಿ ಒಂದನೆಯದಾಗಿ 1924 ನೇ ಇಸವಿಯಲ್ಲಿ ರೂಲ್ಸ್ ಆಫ್ ರೆಗ್ಯೂಲೇಷನ್ ಅನ್ನು ಮಾಡಿದಾಗ ಸಾಕಷ್ಟು ಅವಶ್ಯವಾದಂತಹ ಅಂಕಿ ಅಂಶಗಳ ಆಧಾರಗಳು ಇರಲಿಲ್ಲ. ಆದ್ದರಿಂದ ಯಾವ ಯಾವ ಕಾಲದಲ್ಲಿ ಕೃಷ್ಣರಾಜಸಾಗರಕ್ಕೆ ಎಷ್ಟೆಷ್ಟು ನೀರು ಬಿಡಬೇಕು ಎನ್ನುವುದು ಅಡ್ ಹಾಕ್ ಬೇಸಿಸ್ ಮೇಲೆ ತೀರ್ಮಾನಿಸಲಾಗಿತ್ತು. ಈಗ 45 ವರ್ಷಗಳ ಅನುಭವದಲ್ಲಿ ಈಗ ನಮಗೆ ಬಂದಿರುವ ಅನುಭವದ, ಅಂಕಿ ಅಂಶಗಳ ಆಧಾರದಿಂದ ರೂಲ್ಸ್ ಆಫ್ ರೆಗ್ಯೂಲೇಷನ್‌ನಲ್ಲಿ ಕಂಡ ಅಂಶಗಳು ವಾಸ್ತವಾಂಶಕ್ಕೆ ದೂರವಾಗಿವೆ. ಈ ಕಾರಣದಿಂದ ಇದು ಬದಲಾವಣೆಯಾಗಬೇಕು. ಇದು ಒಂದು ಕಾರಣ. ಎರಡನೆಯದಾಗಿ 1924 ನೇ ಇಸವಿಯಲ್ಲಿ ಇದ್ದಂತಹ ಪರಿಸ್ಥಿತಿ ಇವೊತ್ತು ಇಲ್ಲ ಪರಿಸ್ಥಿತಿ ತೀವ್ರವಾಗಿ ಬದಲಾವಣೆ ಹೊಂದಿದೆ. ರಾಜ್ಯ ಪುನರ್ವಿಂಗಡಣೆಯಾದ ಪ್ರಯುಕ್ತ ಕಾವೇರಿ ನದಿಯ ಜಲಾನಯನದಲ್ಲಿರುವ ಕೊಡಗು, ಕೊಳ್ಳೇಗಾಲ ಮುಂತಾದ ಪ್ರದೇಶಗಳು ಮೈಸೂರಿಗೆ ಸೇರಿವೆ. ಈ ಹೊಸ ಪರಿಸ್ಥಿತಿಯಲ್ಲಿ ಇದಕ್ಕೆ ಅನುಗುಣವಾಗಿ ರೂಲ್ಸ್ ಆಫ್ ರೆಗ್ಯುಲೇಷನ್ ಬದಲಾವಣೆಯಾಗತಕ್ಕದ್ದು ಅವಶ್ಯಕ. ನ್ಯಾಯಸಮ್ಮತವಾದುದು. ಮೂರನೆಯದಾಗಿ ಆ ಒಪ್ಪಂದ ಆದಾಗಿನಿಂದ ಇದುವರೆಗೆ ಒದಗಿರುವ ಗೇಜಿಂಗ್ ಅಂಕಿ ಅಂಶಗಳಿಂದ ಅಗ್ರಿಮೆಂಟಿನಲ್ಲಿ ಮೈಸೂರಿಗೆ ಇರುವ ಹಕ್ಕು ಎಂದರೆ 45 ಸಾವಿರ ದಶಲಕ್ಷ ಘನ ಅಡಿ ನೀರನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಗ್ರಿಮೆಂಟಿನಲ್ಲಿ ನಮಗೆ ಇರುವ ಹಕ್ಕನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುವಂತೆ ರೂಲ್ಸ್ ಆಫ್ ರೆಗ್ಯೂಲೇಷನ್ ಮಾರ್ಪಾಟು ಮಾಡತಕ್ಕದ್ದು ನ್ಯಾಯದೃಷ್ಟಿಯಿಂದ ಅವಶ್ಯಕ. ನಾಲ್ಕನೆಯದಾಗಿ ಆ ಅಗ್ರಿಮೆಂಟ್ ಆದಮೇಲೆ ಮದ್ರಾಸ್ ರಾಜ್ಯದವರು ಮೆಟ್ಟೂರು, ಭವಾನಿ, ಅಮರಾವತಿ, ಮೊದಲಾದ ಕೆಲವು ಯೋಜನೆಗಳನ್ನು ಕಟ್ಟಿಕೊಂಡಿದ್ದಾರೆ. ರೂಲ್ಸ್ ಆಫ್ ರೆಗ್ಯೂಲೇಷನ್ ಮಾಡುವ ಕಾಲದಲ್ಲಿ ಈ ಜಲಾಶಯಗಳು ಇರಲಿಲ್ಲ. ಇದರಿಂದ ರೂಲ್ಸ್ ಆಫ್ ರೆಗ್ಯುಲೇಷನ್‌ನಿಂದ ಪರಿಣಾಮವೇನಾಗುತ್ತದೆ ಎನ್ನುವುದನ್ನು ಅರಿಯಲು ಮದ್ರಾಸ್ ರಾಜ್ಯದವರು ನಮಗೆ ಮಾಹಿತಿಗಳನ್ನು ಇದುವರೆಗೂ ದೊರಕಿಸಿಲ್ಲ. ಆದ ಕಾರಣ ಮೈಸೂರಿನ ಹಿತಕ್ಕೆ ಧಕ್ಕೆಬಾರದ ರೀತಿಯಲ್ಲಿ ರೂಲ್ಸ್ ಆಫ್ ರೆಗ್ಯುಲೇಷನ್ ಬದಲಾವಣೆ ಮಾಡತಕ್ಕದ್ದು ಅನಿವಾರ್ಯವಾಗುತ್ತದೆ. ಐದನೆಯದಾಗಿ ಮದ್ರಾಸ್ ಸರ್ಕಾರದವರು ಮೈಸೂರಿನವರಿಗೆ ತಿಳುವಳಿಕೆ ಕೊಡದೆ ಅಗ್ರಿಮೆಂಟಿಗೆ ವಿರೋಧವಾಗಿರುವಂಥಾ ಮೆಟ್ಟೂರ್ ಹೈಲೆವೆಲ್ ಕೆನಾಲ್, ಕಟ್ಟಲಾಯ ಮುಂತಾದ ಹಲವು ಜಲಾಶಯಗಳನ್ನು ಕಟ್ಟಿದ್ದರ ಪರಿಣಾಮವಾಗಿ ಅದು ಅಗ್ರಿಮೆಂಟಿಗೆ ವಿರೋಧವಾಗಿರುವುದಲ್ಲದೆ ರೂಲ್ಸ್ ಆಫ್ ರೆಗ್ಯುಲೇಷನ್ ಮೇಲೆ ದುಷ್ಪರಿಣಾಮ ಉಂಟು ಮಾಡತಕ್ಕದ್ದಾಗಿದೆ. ಆದ ಕಾರಣ ರೂಲ್ಸ್ ಆಫ್ ರೆಗ್ಯುಲೇಷನ್ ಬದಲಾವಣೆ ಮಾಡತಕ್ಕದ್ದು ಅನಿವಾರ್ಯ. ಈ 5 ಕಾರಣಗಳನ್ನು ನ್ಯಾಯ ಪರಿಸ್ಥಿತಿಗನುಗುಣವಾಗಿ ವಿಚಾರ ಮಾಡಿದರೆ ಈ ಅಗ್ರಿಮೆಂಟ್ ರಿವೈಜ್ ಆಗಲೇಬೇಕು. ಅಲ್ಲದೆ ಒಂದು ಅಗ್ರಿಮೆಂಟಿಗೆ ಎರಡು ಪಾರ್ಟಿಗಳು ಇವೆ. ಇದರಲ್ಲಿ ಅಗ್ರಿಮೆಂಟಿಗೆ ಒಳಪಟ್ಟ ಉಭಯ ಪಾರ್ಟಿಗಳು ಯಾರೊಬ್ಬರು ಅಗ್ರಿಮೆಂಟನ್ನು ಉಲ್ಲಂಘಿಸಿದರೆ ಮತ್ತೊಂದು ಪಾರ್ಟಿಯವರು ಅಗ್ರಿಮೆಂಟ್ ಪ್ರಕಾರ ಮಾಡಬೇಕಾದ ಕರ್ತವ್ಯವನ್ನು ನಿರ್ವಹಿಸಬೇಕಾದ್ದಿಲ್ಲ ಎಂಬುದು ಶಾಸನಬದ್ಧವಾಗಿದೆ, ಶಾಸನಕ್ಕನುಗುಣವಾಗಿದೆ. ಆದಕಾರಣ ಅಗ್ರಿಮೆಂಟ್ ರದ್ದಾಗಬೇಕೆಂಬುದು ಮೈಸೂರಿನ ಖಚಿತವಾದ ಅಭಿಪ್ರಾಯವಾಗಿದೆ. ಆದ್ದರಿಂದ ಏನೇನು ಹೊಸ ಅಂಶಗಳು ಇವೆ ಅವುಗಳನ್ನೆಲ್ಲಾ ಆಲೋಚನೆ ಮಾಡಿ ಈ ಕಾರ್ಯಕ್ರಮವನ್ನು ಮುಂದುವರಿಸುವುದಕ್ಕೆ ಕಾವೇರಿ ನೀರನ್ನು ಭದ್ರ ಮಾಡಿಕೊಳ್ಳಬೇಕು, ಮತ್ತು ಈ ಯೋಜನೆಗೆ ಬೇಕಾದ ಹಣವನ್ನು ಒದಗಿಸಬೇಕು. ಎಲ್ಲೆಲ್ಲಿ ಅನ್ ಪ್ರೊಡಕ್ಟೀವ್ ಐಟಂಗಳು ಇವೆ. ಅವುಗಳಿಗೆ ಸದ್ಯಕ್ಕೆ ಹಣವನ್ನು ಒದಗಿಸುವುದನ್ನು ನಿಲ್ಲಿಸಿ ಆ ಹಣವನ್ನು ಈ ಪ್ರಾಜೆಕ್ಟುಗಳನ್ನು ಕಟ್ಟುವುದಕ್ಕೆ ಉಪಯೋಗಿಸಿಕೊಳ್ಳಬೇಕು. ಮಾನ್ಯ ಹಣಕಾಸಿನ ಮಂತ್ರಿಗಳು 6 ಕೋಟಿ ರೂಪಾಯಿಗಳನ್ನು ಎಲ್ಲಿಂದಾದರೂ ತೆಗೆದು ಈ ಯೋಜನೆಗೆ ಕೊಡುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ಈಗ ತಕ್ಷಣ 6 ಕೋಟಿ ರೂಪಾಯಿಗಳನ್ನು ಇದಕ್ಕೆ ಒದಗಿಸಿ ಹಾರಂಗಿ, ಕಂಬದಗಡ, ಹೇಮಾವತಿ ಈ ಪ್ರಾಜೆಕ್ಟುಗಳ ಕೆಲಸ ಪ್ರಾರಂಭ ಮಾಡಿ, ಮುಂದಿನ ವರ್ಷದಿಂದ ಈ ಯೋಜನೆಗಳಿಗೆ 30 ಕೋಟಿ

(ಶ್ರೀ ಎಚ್. ಎಂ. ಚನ್ನಬಸಪ್ಪ)

ರೂಪಾಯಿಗಳನ್ನು ಯಾವರೀತಿ ಒದಗಿಸಬೇಕು ಎನ್ನತಕ್ಕದ್ದನ್ನು ನಿಧಾನವಾಗಿ ಕುಳಿತುಕೊಂಡು ಆಲೋಚನೆ ಮಾಡಬೇಕು. ಒಟ್ಟಿನಲ್ಲಿ ಈ ಕೆಲಸ ಆಗಲೇ ಬೇಕು. ಆ ರೀತಿ ಆಗದಿದ್ದರೆ ಅದರಿಂದ ಒಂದು ಮಹತ್ತರ ಪರಿಣಾಮ ಉಂಟಾಗುತ್ತದೆ. ಯಾವ ರೀತಿಯ ಪರಿಣಾಮ ಉಂಟಾಗುತ್ತದೆ ಎಂಬುದನ್ನು ನಾನು ದೂರದೃಷ್ಟಿಯಿಂದ ನೋಡಿ ಹೇಳುತ್ತಿದ್ದೇನೆ. 9 ವರ್ಷದ ಹಿಂದೆ ನಾನು ಏನು ಹೇಳಿದ್ದೆನೋ ಅದನ್ನೇ ಇವತ್ತು ಕೂಡ ಹೇಳುತ್ತಿದ್ದೇನೆ. ಈಗ ಅನೇಕ ಕಡೆ ಚಳುವಳಿ ನಡೆಯುತ್ತಿದೆ. ನಿಮ್ಮ ಅಧಿಕಾರ ಚ್ಯುತಿಯಾಗುವುದಕ್ಕೆ ಇದೂ ಒಂದು ಕಾರಣವಾಗಬಹುದು. ಪರಿಸ್ಥಿತಿ ಬಹಳ ಭೀಕರವಾಗಿರುವುದರಿಂದ ಕೂಡಲೇ ಈ ಯೋಜನೆಗಳನ್ನು ಕೈಕೊಳ್ಳದಿದ್ದರೆ ನಿಮ್ಮ ಅಧಿಕಾರ ಚ್ಯುತಿಯಾಗುವುದಕ್ಕೆ ಇದೇ ನಾಂದಿಯಾಗಬಹುದು. ಈ ಕಾರಣದಿಂದ ಒಂದು ನಿಮಿಷ ಕೂಡ ಕಾಲ ಕಳೆಯದೆ ಈ ನಿರ್ಣಯವನ್ನು ಒಪ್ಪಿಕೊಂಡು ಕೂಡಲೇ ಕೆಲಸಕಾರ್ಯಗಳನ್ನು ಕೈಕೊಳ ಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಶಿವಪ್ಪನವರು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯ ಏನಿದೆ, ಅದು ಚರ್ಚೆಯಾಗುವ ಕಾಲದಲ್ಲಿ ಈ ಸಭೆಯ ಎಲ್ಲಾ ಸದಸ್ಯರ ಕುತೂಹಲ ಮತ್ತು ಆಸಕ್ತಿ ಈ ಕಾವೇರಿ ಬೇಸಿನ್‌ನಲ್ಲಿರುವ ನೀರನ್ನು ಉಪಯೋಗಿಸಿಕೊಳ್ಳ ಬೇಕು ಎಂಬುದೇ ಎಲ್ಲರ ಗುರಿಯಾಗಿದೆ. ಈ ಒಂದು ನಿರ್ಣಯ ಚರ್ಚೆಯಾಗುವ ಕಾಲದಲ್ಲಿ ಆ ಒಂದು ನಿರ್ಣಯಕ್ಕೆ ಏನು ಒಂದು ತಿದ್ದುಪಡಿಯನ್ನು ತರಲಾಗಿದೆ ಅದಕ್ಕೆ ನಾನು ಕೂಡ ಸಹಿ ಹಾಕಿರುವವರಲ್ಲಿ ಒಬ್ಬನಾಗಿದ್ದೇನೆ. ಈ ತಿದ್ದುಪಡಿಗೆ ನಾನು ಸಹಿ ಹಾಕಿರುವ ಬಗ್ಗೆ ಮಾನ್ಯ ನಂಜೇಗೌಡರು ಮತ್ತು ಮಾನ್ಯ ಚೆನ್ನಬಸಪ್ಪನವರು ಒಂದು ವ್ಯಾಖ್ಯಾನ ಕೊಟ್ಟರು. ಆ ವಿಚಾರದಲ್ಲಿ ನಾನು ನನ್ನ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಟ್ಟು ನನ್ನ ಭಾಷಣವನ್ನು ಮುಂದುವರಿಸುತ್ತೇನೆ. ಇವತ್ತು ನಾನು ಏನು ಒಂದು ತಿದ್ದುಪಡಿಯನ್ನು ಸೂಚಿಸಿದ್ದೇನೆ, ಅದೇ ಅರ್ಥ ಬರುವ ಒಂದು ನಿರ್ಣಯವನ್ನು ನಾನು 1964ರಲ್ಲಿಯೇ ಈ ಸಭೆಯ ಮುಂದೆ ಮಂಡಿಸಿದ್ದೆ. ಅದು ಈ ರೀತಿ ಇದೆ :

> "That this House recommends to the Government to take all necessary steps to utilise to the full extent the potential resources of Cauvery waters and to implement all the schemes necessary in this behalf within the Fourth Five Year Plan".

ನಾನು 1964ರಲ್ಲಿಯೇ ಈ ರೀತಿ ಒಂದು ನಿರ್ಣಯದ ರೂಪದಲ್ಲಿ ಈ ಸಭೆಯ ಮುಂದೆ ಮಂಡಿಸಿದ್ದೆ. ಇವತ್ತು ನಾನು ವೀರೇಂದ್ರ ಪಾಟೀಲರ ಕಡೆ ಸೇರಿಕೊಂಡು ಜಾದು ಮಾಡುವುದಕ್ಕೆ ಹೊರಟಿಲ್ಲ. 1974 ರೊಳಗೆ ನಮ್ಮ ಭಾಗದ ನೀರನ್ನು ಉಪಯೋಗಿಸಿಕೊಳ್ಳದಿದ್ದರೆ ವೀರೇಂದ್ರ ಪಾಟೀಲರ ಅಧಿಕಾರಕ್ಕೆ ಕುತ್ತು ಬರುವುದಕ್ಕೆ ನಾಂದಿಯಾಗುವುದು ಎಂಬುದು ಇಲ್ಲಿನ ಮುಖ್ಯ ಪ್ರಶ್ನೆಯಲ್ಲ. ಇದು ಕಾವೇರಿ ಬೇಸಿನ್‌ನಲ್ಲಿರುವ ಜನರ ಪ್ರಶ್ನೆಯಾಗಿದೆ. ನಾನು ಈ ವಿಚಾರದಲ್ಲಿ ಲಘುವಾದ ಧಾಟಿಯನ್ನು ತಾಳಿದ್ದೇನೆ ಎಂಬ ಮಾತನ್ನು ಏನು ಕೆಲವರು ಸದಸ್ಯರು ಹೇಳಿದರು ಅದಕ್ಕೆ ವಿವರಣೆ ಕೊಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು 1966ರಲ್ಲಿ ಏನು ಒಂದು ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದ್ದರು ಅದನ್ನು ಸಹ ಈಗ ಹೇಳಲಿ.

Sri H. N. NANJE GOWDA.—On a point of order. The resolution adopted by the House during 1996 April, which was referred to by my hon. Friend is this :

> " That this House urges upon the Government to devise all ways and means of utilising fully before 1974 the waters of the Cauvery basin."

He has referred to another motion that was passed in 1964 and he is trying to mislead this House......

Mr. SPEAKER.--There is no force in the point of order. Hon. member is entitled to explain his point.

ಶ್ರೀ ಎಚ್. ಡಿ. ದೇವೇಗೌಡ.—ನಾನು ಈ ಸಭೆಯನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಹೋಗುವ ಅವಶ್ಯಕತೆ ಇಲ್ಲ. ನಾನು ಈ ಸಭೆಯಲ್ಲಿ ಹಿಂದೆ ಮಂಡಿಸಿರತಕ್ಕ ಎರಡು ನಿರ್ಣಯಗಳು ಸಹ ಚರ್ಚೆಯಾಗಿ, ಒಂದು ಒಪ್ಪಿಗೆಯಾಗಿದೆ ; ಇನ್ನೊಂದನ್ನು ಸಭೆಯ ಅನುಮತಿಯ ಮೇಲೆ ನಾನು ವಾಪಸ್ ತೆಗೆದುಕೊಂಡಿದ್ದೇನೆ. ಅಗ್ರಿಮೆಂಟ್ ಅವಧಿ ಮುಗಿಯುವುದರೊಳಗೇ ಎಲ್ಲಾ ನೀರನ್ನು ಉಪಯೋಗಿಸಿಕೊಳ್ಳಬೇಕು ಎಂಬುದೇ ನನ್ನ ಎರಡು ನಿರ್ಣಯಗಳ ಉದ್ದೇಶವಾಗಿತ್ತು.

Sri H. M. CHANNABASAPPA.—On a point of order, Sir, ಮಾನ್ಯ ಸದಸ್ಯರು ಮಂಡಿಸಿದ್ದ ಒಂದು ನಿರ್ಣಯವನ್ನು ಸಭೆ ಒಪ್ಪಿಕೊಂಡಿದೆ. ಮತ್ತು ಎಲ್ಲರೂ ಒಪ್ಪಿಕೊಂಡಿದ್ದಾರೆ. ಈಗ ಮಾನ್ಯ ಶಿವಪ್ಪನವರು ತಂದಿರತಕ್ಕ ನಿರ್ಣಯಕ್ಕೆ ಮತ್ತೊಂದು ತಿದ್ದುಪಡಿಯನ್ನು ಇದೇ ಮಾನ್ಯ ಸದಸ್ಯರು ತಂದಿದ್ದಾರೆ. ಮತ್ತು ತಿದ್ದುಪಡಿಯ ಬಗ್ಗೆ ಮಾತನಾಡುವುದಕ್ಕೆ ಹೊರಟಿದ್ದಾರೆ. ತಿದ್ದುಪಡಿಯ ಬಗ್ಗೆ ಮಾತನಾಡುವುದಕ್ಕೆ ತಾವು ಅವರಿಗೆ ಅನುಮತಿ ಕೊಟ್ಟರೆ, ಹಿಂದೆ ಇದೇ ಮಾನ್ಯ ಸದಸ್ಯರು ಮಂಡಿಸಿ ಪಾಸ್ ಆದ ನಿರ್ಣಯಕ್ಕೆ ವಿರುದ್ಧವಾಗುತ್ತದೆ. ಈ ಕಾರಣದಿಂದ ಮಾನ್ಯ ಸದಸ್ಯರು ಈಗ ತಿದ್ದುಪಡಿಯನ್ನು ತಂದಿರುವುದು ಸರಿಯಲ್ಲ ಮತ್ತು ಆ ಬಗ್ಗೆ ಚರ್ಚೆ ಮಾಡುವುದು ಸಹ ಸರಿಯಲ್ಲವೆಂದು ಹೇಳುತ್ತೇನೆ.

Sri D. DEVARAJ URS.—This hon. Member wants us to believe that this House has already taken a decision. What prevents the House after two years to change its resolution and make an amendment to the resolution ? I do not think there is any point of order or violation of the rule.

Sri H. M. CHANNABASAPPA.—The amendment cannot take away the substance of the motion. The Resolution purports to say that before 1974 all projects should be completed. The amendment purports to say that it may be done as far as possible. Rule 281 (1) says that an amendment shall not be moved which has merely the effect of negativing the vote. My point of order is that the amendment is not in order under rule 281 (1), because the amendment says : 'as far as possible', 'within the fourth five year plan' which are indefinite as against the definite mandate in the resolution that it must be finished before 1974. The amendment therefore cuts at the very root of the resolution we have before the Assembly. Therefore, the admission of this amendment is not in order. It must be ruled out.

Mr. SPEAKER.—I have heard the hon. Members regarding the admissibility of the amendment. I do not know why this objection was not taken when the amendment was admitted earlier. The amendment is moved and accepted for discussion and consideration. I think there is no force in the point of order. In the first place, it is stated that the amendment has the effect of a negative vote and therefore is inadmissible under Rule 281 (2). Here the amendment has not got the effect of a negative vote. It is moved in a positive sense. Therefore, there is no bar for it under Rule 281(2). In the second place, Rule 281 (3) was cited. It says : "An amendment on a question shall not be inconsistent with a previous decision on the same question." It cannot be questioned except by an appropriate resolution or motion. When a new motion is brought, this does not come into operation. As a matter of fact, there is no contradiction between, the previous motion and the present motion. Therefore, I rule out the point of order.

† ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಇಲ್ಲಿ ತಂದಿರುವ ರೆಸಲ್ಯೂಷನ್ ಹಾಗೂ ನಾವು ತಂದಿರುವ ತಿದ್ದುಪಡಿಯಲ್ಲಿ ಅಂತಹ ವ್ಯತ್ಯಾಸವೇನಿಲ್ಲ. 1974 ರೊಳಗೆ ನಮ್ಮ ರಾಜ್ಯದಲ್ಲಿರುವ ಕಾವೇರಿ ನದಿಯ ಎಲ್ಲ ನೀರನ್ನೂ ಉಪಯೋಗಿಸಿಕೊಳ್ಳಲು ಪ್ರಯತ್ನ ನಡೆಸಬೇಕು ಎಂದು ಈ ತಿದ್ದುಪಡಿ ತಂದಿದ್ದಾಗಿದೆ. ಇವರ ಬಗ್ಗೆ ಯಾವ ರೀತಿಯ ಚರ್ಚೆಗಳಾದವು ಮತ್ತು ಯಾವ ಭರವಸೆಗಳನ್ನು ಸರಕಾರ ಹಿಂದೆ ಕೊಟ್ಟಿತ್ತು ಎಂಬುದರ ಬಗ್ಗೆ ಇಲ್ಲಿ ನಾನು ವಾದ ವಿವಾದ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಮುಂದೆ ಇವೊತ್ತು ಇಲ್ಲಿರತಕ್ಕದ್ದು 1974ನೇ ಇಸವಿಯೊಳಗಾಗಿ ನೀರನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುವುದರ ಬಗ್ಗೆ ಏನೇನು ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎನ್ನುವುದು. 1966 ರಲ್ಲೇ ಈ ಸಭೆ ಇಂತಹ ಒಂದು ನಿರ್ಣಯವನ್ನು ಒಪ್ಪಿತ್ತು ಮತ್ತು ಅದನ್ನು ಏಕೆ ಕಾರ್ಯಗತ ಮಾಡಲಿಲ್ಲ ಎನ್ನುವುದನ್ನು ನಮಗೆ ಕಾರಣಗಳು ಗೊತ್ತಿಲ್ಲ. ಆದರ ಚರ್ಚೆಗೆ ನಾನು ಹೋಗುವುದಿಲ್ಲ. ತಮಗೇ ಗೊತ್ತಿರುವ ಹಾಗೆ ಕಬಿನಿ, ಹೇಮಾವತಿ ಹಾಗೂ ಕೆಲವು ಪ್ರಾಜೆಕ್ಟ್‌ಗಳ ಕೆಲಸ ನಮ್ಮ ನಿರೀಕ್ಷೆಯ ಮಟ್ಟದಲ್ಲಿ ಆಗಲಿಲ್ಲ. ಇದನ್ನು ನಾವೂ ಒಪ್ಪುತ್ತೇವೆ. ಇದರ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಇಂತಹ ಒಂದು ರೆಸಲ್ಯೂಷನ್ ತಂದು ಸರಕಾರದ ಮೇಲೆ ಒತ್ತಾಯ ತರುವುದು ಅವಶ್ಯಕ. ಹಿಂದೆ ಕೂಡ ಇದೇ ರೀತಿಯ ಒಂದು ನಿರ್ಣಯ ಚರ್ಚೆಗೆ ಬಂದ ಕಾಲದಲ್ಲಿ ಸಾಕಷ್ಟು ತ್ವರಿತವಾದ ರೀತಿಯಲ್ಲಿ ಸರಕಾರ ಇದನ್ನು ಇಂಪ್ಲಿಮೆಂಟು ಮಾಡಲಿಲ್ಲ ಎಂದು ಹೇಳಿದ್ದೆವು. ಹಿಂದೆ ಸರ್ಕಾರ ಈ ಯೋಜನೆ ಕೆಲಸ ಜಾಗ್ರತೆ ತೆಗೆದುಕೊಳ್ಳುತ್ತೇವೆನ್ನುವ ಭರವಸೆ ಕೊಟ್ಟಿದ್ದರೂ ಅದರಂತೆ ಮಾಡಲಿಲ್ಲ ಎಂದು ಪುನಃ ಸರಕಾರದ ಗಮನವನ್ನು ಸೆಳೆಯಲು ಈಗ ಈ ನಿರ್ಣಯ ತಂದಿರುವುದರ ಉದ್ದೇಶ ಎಂದು ನನ್ನ ಭಾವನೆ. ಶ್ರೀಮಾನ್ ಚನ್ನಬಸಪ್ಪನವರು ಇಲ್ಲಿ ಮಾತನಾಡುತ್ತಾ ಇದರಲ್ಲಿನ ಅಗ್ರಿಮೆಂಟನ್ನು ಏಕೆ ರಿವೈಸು ಮಾಡಬೇಕಾಗಿತ್ತು ಎಂದು ಹೇಳಿದರು. ಅವರು ಈಗ ಇಲ್ಲಿಲ್ಲ. ಅವರು ಇಲ್ಲೇ ಕುಳಿತಿದ್ದರೆ ಇದರ ಬಗ್ಗೆ ವಿವರಗಳನ್ನು ಹೇಳುತ್ತಿದ್ದೆ. ಸರಕಾರ ಆಗಿದ್ದ ಅಗ್ರಿಮೆಂಟನ್ನು ರಿವೈಸು ಮಾಡಲು ಒಂದು ರೀತಿಯ ಅಸಡ್ಡೆಯನ್ನು ತೋರಿಸಿದರು ಎಂದು ಹೇಳಿದರು. 1959 ರಲ್ಲಿ ಅಗ್ರಿಮೆಂಟು ರಿವೈಸು ಮಾಡಬೇಕೆಂದು ಆಗಿದ್ದ ನಿಜಲಿಂಗಪ್ಪನವರ ಮಂತ್ರಿಮಂಡಲದವರು ಮುಂದುವರಿಸಿಕೊಂಡು ಹೋಗಲಿಲ್ಲ ಎಂದು ನಾನು ಹಿಂದೆ ಇದೇ ರೀತಿಯ ರೆಸಲ್ಯೂಷನ್ನಿನ ಮೇಲೆ ಮಾತನಾಡುವ ಕಾಲದಲ್ಲಿ ಪ್ರತಿಪಾದನೆ ಮಾಡಿದ್ದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. 1950 ರಲ್ಲಿ ಟೆಕ್ನಿಕಲ್ ಕಮಿಟಿ ಏನಿತ್ತು ಮತ್ತು ಆ ಸನ್ನಿವೇಶದಲ್ಲಿ ಅವರು ಏನು ಹೇಳಿಕೆ ಕೊಟ್ಟರು ಎನ್ನುವುದು ಮಾನ್ಯ ಸದಸ್ಯರಾದ ಶ್ರೀಮಾನ್ ಚನ್ನಬಸಪ್ಪನವರಿಗೂ ಗೊತ್ತು. ಪ್ರಾಯಶಃ ನನಗೆ ತಿಳಿದ ಹಾಗೆ ಆಗಿನಿಂದ ಸುಮಾರು ಮೂರು ನಾಲ್ಕು ವರ್ಷಗಳ ಕಾಲ ಮಾನ್ಯ ಶ್ರೀ ಚನ್ನಬಸಪ್ಪನವರೇ ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿದ್ದರು. ಆಗ ಅವರೇ ಏತಕ್ಕಾಗಿ ಇದನ್ನು ರಿವೈಸು ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ? ಈ ಕಾರಣದಿಂದ ಈಗ ಪುನಃ ಅಗ್ರಿಮೆಂಟನ್ನು ರಿವೈಸ್ ಮಾಡುವುದರಲ್ಲಿ ಶ್ರೀಮಾನ್ ವೀರೇಂದ್ರ ಪಾಟೀಲರವರ ಮಂತ್ರಿಮಂಡಲ ಅಸಡ್ಡೆ ತೋರುತ್ತಿದೆ ಎಂದು ಹೇಳುವ ವಾದದಲ್ಲಿ ಹುರುಳಿಲ್ಲ. 1958 ರಿಂದ 1967 ರ ವರೆಗೆ ಆಡಳಿತ ಮಾಡಿರತಕ್ಕ ಎಲ್ಲರಲ್ಲಿಯೂ ಲೋಪ ಇದೆ ಎನ್ನುವುದನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇವೊತ್ತು ಇಲ್ಲಿರುವ ಮಂತ್ರಿಮಂಡಲವೇ ಹೊಣೆ ಎಂದು ಹೇಳುವ ವಾದ ಅಷ್ಟು ಸರಿಯಾದುದಲ್ಲ ಮತ್ತು ಆ ತರಹದ ವಾದ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಇದರಲ್ಲಿ ಇನ್ನೂ ಸೀಕ್ರೆಸಿ ಏತಕ್ಕಾಗಿ ಮೆಂಟೇನ್ ಮಾಡಬೇಕು? ಇದರಲ್ಲೇನು ಗುಮ್ಮ ಬರುತ್ತದೆಯೇ ಎನ್ನುವ ಒಂದು ಮಾತನ್ನು ಸಹ ಅವರ ಹೇಳುತ್ತಾ ಸರಕಾರಕ್ಕೆ ಧೈರ್ಯ ಇಲ್ಲ ಎಂದು ಹೇಳಿದರು. ಈ ಪ್ರಶ್ನೆಯನ್ನು ಪರಿಶೀಲನೆ ಮಾಡುವಾಗ ನಮಗೆ 10 ಟಿ. ಎಂ. ಸಿ. ನೀರು ಕೂಡ ಸಿಗುವುದಿಲ್ಲ ಮತ್ತು ಡಿಪೆಂಡಬಿಲಿಟಿ ಶೇಕಡಾ 75 ರಷ್ಟು ಇರುವುದಿಲ್ಲ ಎಂದು ಒಬ್ಬರು ಹೇಳುತ್ತಾರೆ. ಇನ್ನೊಬ್ಬರು ಶೇಕಡಾ 60 ರಷ್ಟು ಡಿಪೆಂಡಬಿಲಿಟಿ ಇರುವುದಿಲ್ಲ ಎಂದು ಹೇಳುತ್ತಾರೆ. ಮತ್ತೆ ಕೆಲವರು ಶೇಕಡಾ 45 ಪರ್ಸೆಂಟ್ ಡಿಪೆಂಡಬಿಲಿಟಿ ಕೂಡ ಇರುವುದಿಲ್ಲ ಎಂದು ಹೇಳುತ್ತಾರೆ. ಈ ಪ್ರಕಾರ ನಾವು ನಾವುಗಳು ಬೇಕಾದಷ್ಟು ಇಲ್ಲಿ ಹೇಳಬಹುದು. ಆದರೆ ಟೆಕ್ನಿಕಲ್ ಕಮಿಟಿಯವರು ನಿರ್ಣಯ ಮಾಡಿದಾಗ ಏನು ಮಾಡಿದರು ಎನ್ನುವುದು ನಮಗೆ ಗೊತ್ತಿಲ್ಲ. ಸುಮ್ಮನೆ ನಮ್ಮ ನಮ್ಮ ಮನಸ್ಸಿಗೆ ಬಂದ ಹಾಗೆ ಇಲ್ಲಿ ವ್ಯಾಖ್ಯಾನ ಮಾಡುವುದು ಸರಿಯಲ್ಲ. ಆದುದರಿಂದ ಇಲ್ಲಿರುವ ಇಂಜನೀಯರುಗಳು ಡಿಪೆಂಡಬಿಲಿಟಿ ಶೇಕಡಾ 60 ರಷ್ಟು ಇದೆಯೋ ಇಲ್ಲವೆ ಅಥವಾ 70 ರಷ್ಟು ಇದೆ ಎಂದು ಹೇಳಿದರೆ ನಾಳೆ ಇದನ್ನು ಸರಕಾರದವರು ಸಮರ್ಥನೆ ಮಾಡಬೇಕು. ಹೀಗಿರುವಾಗ ಕಾವೇರಿ ನದಿಯ ನೀರಿನ ಪ್ರಮಾಣದ ಬಗ್ಗೆ ಸೀಕ್ರೆಸಿ ಏಕೆ ಮೇಂಟೇನ್ ಮಾಡಬೇಕು ಎನ್ನುವುದು ಇವರಲ್ಲಿ ಒಂದು ದೊಡ್ಡ ಪ್ರಶ್ನೆ. ಈ ಸಭೆಯ ನಾಯಕರು ಈ ಸಭೆಯಲ್ಲಿ ಆಶ್ವಾಸನೆ ಕೊಟ್ಟಂತೆ ಟೆಕ್ನಿಕಲ್ ಸಮಿತಿ ನೇಮಕ ಮಾಡಿದರು, ಇವೊತ್ತು ಪರಿಸ್ಥಿತಿ ಏನಾಗಿದೆ ಎಂದರೆ ಸಮಿತಿಯವರು ಕೊಟ್ಟಿರುವ ರಿಪೋರ್ಟ್ ಪ್ರೆಸ್ಸಿನಲ್ಲಿ ಪ್ರಕಟವಾಯಿತು. ಇದಾದ ತಕ್ಷಣ ಮದ್ರಾಸ್ ಸರಕಾರ

ಪ್ರೊಟೆಸ್ಟ್ ಮಾಡಿ ಕೇಂದ್ರಕ್ಕೆ ಒತ್ತಾಯ ಮಾಡಿ ನಾವು ಮಾಡುತ್ತಿರುವ ಕೆಲಸ ಸರಿಯಾದುದಲ್ಲ ಇದನ್ನು ಸರಿಮಾಡಬೇಕೆಂದು ಒತ್ತಾಯ ಮಾಡಿದ್ದಾರೆ. ಮುಂದೆ ಇವರ ವಾದ ಸರಿಯಲ್ಲ ಎಂದು ನಾವು ಸುಪ್ರೀಂ ಕೋರ್ಟಿಗೆ ಹತ್ತಬೇಕೇನು? 1974 ರ ವರೆಗೆ ನಮಗೆ ಆಗಿರುವ ಒಪ್ಪಂದದ ಪ್ರಕಾರ ನಮಗೆ ಬರುವ ಕಾವೇರಿ ನೀರನ್ನು ಪೂರ್ಣ ಉಪಯೋಗಿಸಿಕೊಳ್ಳಬೇಕು. ಇದರಲ್ಲಿ ಇಲ್ಲ ಸಲ್ಲದ ವಾದಗಳನ್ನು ಮಾಡಿ ಕಾಂಪ್ಲಿಕೇಷನ್‌ಗಳನ್ನು ಏತಕ್ಕಾಗಿ ಮಾಡಲು ಹೋಗಬೇಕು? ಇದಕ್ಕಾಗಿ ಮಾನ್ಯ ಸಭಾನಾಯಕರು ದೇಶದ ಹಿತದೃಷ್ಟಿಯಿಂದ ಇದರ ವಿಷಯವನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದು ಹೇಳಿದುದು ಸರಿಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲದೇ ಹೋದರೆ ಮುಂದೆ ನಾವು ಸುಪ್ರೀಂ ಕೋರ್ಟಿಗೆ ಹೋಗಬೇಕಾಗಿ ಬರಬಹುದು ಎಂದು ನನ್ನ ಅಭಿಪ್ರಾಯ. ನಾವು ನಮ್ಮಲ್ಲಿರುವ ನೀರನ್ನು ಉಪಯೋಗಿಸುವುದರ ಬಗ್ಗೆ ನಿಮಗೆ ಹೇಗೆ ಆಸೆ ಇದೆಯೋ ನಮಗೂ ಆಸೆ ಇದೆ. ಮಾನ್ಯ ಚನ್ನಬಸಪ್ಪನವರಿಗೂ ಆಸೆ ಇದೆ. ಇರುವ ನೀರನ್ನು ಪೂರ್ಣವಾಗಿ ಉಪಯೋಗಿಸದೆ ಇದ್ದರೆ ಅದು ಪೂರ್ಣ ಅಪರಾಧವಾಗುತ್ತದೆ ಎನ್ನುವುದನ್ನು ನಾನೂ ಕೂಡ ಒಪ್ಪುತ್ತೇನೆ. ಆದರೆ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಅಸಡ್ಡೆಯಿಂದ ಇದ್ದಾರೆ ಎಂದು ಇದನ್ನು ಕೈಬಿಡುವುದಕ್ಕೆ ಸಾಧ್ಯವಿಲ್ಲ. ದೇಶದ ಪ್ರಗತಿಪರವಾದ ಕೆಲಸಗಳನ್ನು ಸರಕಾರ ಮಾಡಬೇಕು ಎಂದು ನೀವುಗಳು ಒತ್ತಾಯ ಮಾಡು ವಂತೆ ನಿಮ್ಮ ಜೊತೆಗೆ ನಾವೂ ದನಿಗೂಡಿಸಲು ಸಿದ್ಧರಾಗಿದ್ದೇವೆ.

7-00 P.M.

ಆದರೆ ಈಪೊತ್ತು ವಸ್ತುತಃ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ನೋಡಬೇಕು. ಈ ತಿದ್ದುಪಡಿ ತಂದಿರುವ ಉದ್ದೇಶ ಈಪೊತ್ತಿನ ದಿವಸ ಇದರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಬೇಕು ಎನ್ನುವುದು. ಈ ಕೆಲಸವನ್ನು ಪೂರ್ಣವಾಗಿ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಅಡಚಣೆ ಇದೆ ಎಂದು ಹೇಳುವ ವಾದ ಸರಿಯಲ್ಲ. ಈ ದಿವಸ ಮದ್ರಾಸ್ ಸರ್ಕಾರದವರು ತಳೆದಿರ ತಕ್ಕಂಥ ಧೋರಣೆಯನ್ನೇ ನಮ್ಮ ಸಭಾನಾಯಕರಾದ ಮುಖ್ಯಮಂತ್ರಿಗಳು ತಳೆಯಬೇಕು ಮತ್ತು ಈ ಕೆಲಸವನ್ನು ನಿರ್ವಹಣೆ ಮಾಡುವಾಗ ನಮಗೆ ಏನು ರಕ್ಷಣೆ ಕೊಡಬೇಕು ಎನ್ನುವುದನ್ನು ನ್ಯಾಯಾಧಿಕಾರಿಗಳು ಮತ್ತು ತಾಂತ್ರಿಕ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಇದರ ಬಗ್ಗೆ ಒಂದು ಹೆಚ್ಚಿನ ಪುನರ್ವಿಮರ್ಶೆ ಮಾಡಬೇಕು; ಮತ್ತು ಈ ವಿಷಯದಲ್ಲಿ ಒಂದು ಸ್ಪಷ್ಟವಾದ ನಿಲುವು ತಾಳ ಬೇಕು ಎಂದು ಈ ಸಭೆಯಲ್ಲಿ ತಿಳಿಸಲು ಇಷ್ಟಪಡುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಈಪೊತ್ತು ಈ ಬಗ್ಗೆ ಒಂದು ರಿಸೋರ್ಸಸ್ ಕಮಿಟಿಯನ್ನು ಅಪಾಯಿಂಟ್ ಮಾಡಿದ್ದಾರೆ. ಅವರ ಒಂದು ರಿಪೋರ್ಟ್ ಬಂದಮೇಲೆ ಇತರೇ ನೀರಾವರಿ ಪ್ರಾಜೆಕ್ಟ್‌ಗಳನ್ನೂ ಕೂಡ ಕಾರ್ಯಗತ ಮಾಡುವುದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳ ಬೇಕಾಗುತ್ತದೆಂದು ಹೇಳಿದ್ದಾರೆ. ರಿಸೋರ್ಸಸ್ ಕಮಿಟಿ ರಿಪೋರ್ಟ್ ಯಾವಾಗ ಬರುತ್ತದೆ, ಎಷ್ಟು ದಿವಸದಲ್ಲಿ ಬರುತ್ತದೆ ಎನ್ನುವುದನ್ನು ಕಾದು ನೋಡಬೇಕು. ಮಾನ್ಯ ಶ್ರೀಮಾನ್ ದೇವರಾಜ್ ಅರಸ್‌ರವರು ಮಾತನಾಡುವಾಗ ಹೇಳಿದರು ಫೈನಾನ್ಸ್ ಮಿನಿಸ್ಟರ್ ಒಂದುವೇಳೆ ನನಗೇ ಫ್ರೀಡಮ್ ಕೊಡುವುದಾದರೆ 6 ಕೋಟಿ ರೂಪಾಯಿಯನ್ನು ಒದಗಿಸಿಕೊಡುತ್ತೇವೆ ಎಂದು. ಇವರ ಬಗ್ಗೆ ಅಡ್ಡಿ ಬಂದವರಾರು ಎಂದು ನಾನು ಕೇಳುತ್ತೇನೆ. ಈ ನೀರಾವರಿ ಸಮಸ್ಯೆ ಬಂದಾಗ ಇದು ದೇಶದ ಸಮಸ್ಯೆ ಎಂದು ತಿಳಿದುಕೊಳ್ಳಬೇಕು. ನಾನು ನಿನ್ನೆ ಪತ್ರಿಕೆಯಲ್ಲಿ ಓದಿದೆ, ಏನೆಂದರೆ ಬೆಂಗಳೂರಿ ನಲ್ಲಿ ಎಲ್ಲಾ ಕೋರ್ಟುಗಳೂ ಒಂದೇ ಸ್ಥಳದಲ್ಲಿ ಇರುವುದಕ್ಕೆ ಕೋರ್ಟ್‌ಬಿಲ್ಡಿಂಗ್ ಕಟ್ಟಡ ಕಟ್ಟುವುದಕ್ಕೆ 1 ಕೋಟಿ 80 ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ ಎಂದು ಇತ್ತು. ಈ ಮೊಬಲಗು ಬಜೆಟ್ ನಲ್ಲೂ ಇನ್‌ಕ್ಲೂಡ್ ಮಾಡಿಲ್ಲ ಮತ್ತು ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲೂ ಇನ್‌ಕ್ಲೂಡ್ ಮಾಡಿಲ್ಲ. ಈ ರೀತಿಯಾಗಿ ಬೆಂಗಳೂರಿನಲ್ಲಿ 1 ಕೋಟಿ 80 ಲಕ್ಷ ರೂಪಾಯಿ ಕೊಟ್ಟು ಬಿಲ್ಡಿಂಗ್ ಕಟ್ಟುವುದಕ್ಕೆ ಇನ್ನೂ 4–5 ವರ್ಷ ತಡವಾಗಿದ್ದರೆ ಆಗುತ್ತಾ ಇರಲಿಲ್ಲವೇ? ಈ ಅನ್‌ಪ್ರೊಡಕ್ಟಿವ್ ವರ್ಕನ್ನೂ ತಡೆಹಿಡಿಯುವುದಕ್ಕಾಗುತ್ತಿರಲಿಲ್ಲವೇ? 1966ರಲ್ಲಿ ಒಂದು ರೆಸಲ್ಯೂಷನ್‌ಗೆ ಏನು ಒಪ್ಪಿಗೆ ಕೊಟ್ಟಿದ್ದೀರಿ ಅದನ್ನು ತಡೆಹಿಡಿಯಬೇಕೆನ್ನುವುದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳುತ್ತೇನೆ. ಮತ್ತು ಅವರು ಪಿ.ಡಬ್ಲ್ಯೂ.ಡಿ. ಮಂತ್ರಿಗಳಾಗಿದ್ದಾಗ ಇದಕ್ಕೆ ಅಮೀನ್‌ಬಾವಿ ಅಧ್ಯಕ್ಷತೆಯಲ್ಲಿ ಟೆಕ್ನಿಕಲ್ ಎಕ್ಸ್‌ಪರ್ಟ್ ಕಮಿಟಿ ಮಾಡಿ ಅವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಆ ರಿಪೋರ್ಟ್ 5–6 ಛಾಪ್ಟರ್‌ನಷ್ಟು ಇದೆಯೆಂದು ಕೇಳಿದ್ದೇನೆ. ಹೇಮಾವತಿ ಪ್ರಾಜೆಕ್ಟ್‌ಗೆ ಕ್ಲಿಯರೆನ್ಸ್ ಬರಲ ಕಷ್ಟೋಣ ಎಂದು ಆಗ ಹೇಳಿದ್ದರು.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಹೇಮಾವತಿ ಪ್ರಾಜೆಕ್ಟ್‌ಗೆ ಕ್ಲಿಯರೆನ್ಸ್ ಏತಕ್ಕೆ ಬರಲಿಲ್ಲ ಎಂಬುದನ್ನು ಹೇಳುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಏತಕ್ಕೆ ಬಂದಿಲ್ಲ ಎನ್ನುವುದು ನಮಗೆ ಗೊತ್ತಿಲ್ಲ. ಅಂದಿನ ದಿವಸ ತಾವು ಮಂತ್ರಿಗಳಾಗಿದ್ದಿರಿ ಆದುದರಿಂದ ನಿಮಗೆ ಗೊತ್ತಿರಬೇಕು.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಹೇಮಾವತಿ ಪ್ರಾಜೆಕ್ಟ್‌ಗೆ ಕ್ಲಿಯರೆನ್ಸ್ ಬರುವುದಕ್ಕೋಸ್ಕರ ಶ್ರಮಪಡುತ್ತಿದ್ದುದಕ್ಕೆ ನನ್ನನ್ನು ಹೊರಗೆ ಹಾಕಿದ್ದು.

ಶ್ರೀ ಹೆಚ್. ಡಿ. ದೇವೇಗೌಡ.—ಕ್ಲಿಯರೆನ್ಸ್ ಬರಲಿ, ಬಾರದೇ ಇರಲಿ ನೀವು ಪ್ರಯತ್ನ ಮಾಡುತ್ತಾ ಇದ್ದುದು ದಿಟ ಇರಬಹುದು. ತಾವು ಮಂತ್ರಿಗಳಾಗಿದ್ದವರು. ಇದರ ಬಗ್ಗೆ ಎಲ್ಲಾ ವಿಷಯಗಳೂ ತಮಗೆ ಗೊತ್ತಿದೆ. ರಿಕಾರ್ಡ್‌ನಲ್ಲಿರುವ ಅಂಕಿಅಂಶಗಳನ್ನೆಲ್ಲಾ ಇಟ್ಟುಕೊಂಡು ಮಾತನಾಡುತ್ತೀರಿ. ನನ್ನ ಹತ್ತಿರವೂ ಅಂಕಿಅಂಶಗಳು ಇದ್ದಿದ್ದರೆ ನಾನೂ ಮಾತನಾಡುತ್ತಿದ್ದೆ. ಅದರ ಅಂಕಿಅಂಶಗಳು ನನ್ನಲ್ಲಿಲ್ಲ. ಆದುದರಿಂದ ನಾನು ಏನೂ ಮಾತನಾಡುವುದಕ್ಕಾಗುವುದಿಲ್ಲ. 1966ನೇ ಇಸವಿಯಲ್ಲಿ ಈ ಸಭೆಯಲ್ಲಿ ಏನು ಒಂದು ರೆಸಲ್ಯೂಷನ್ ಪಾಸು ಮಾಡಿ ಒಪ್ಪಿಗೆ ಕೊಟ್ಟಿದೆ ಅದನ್ನು ಸರ್ಕಾರ ಅಸಡ್ಡೆ ಮಾಡಿದೆ, ಇದರ ಬಗ್ಗೆ ಸರ್ಕಾರ ಏನೂ ಕೆಲಸ ಮಾಡಿಲ್ಲ ಎನ್ನುವ ಉದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೀರಿ. ಕಟಿನಿ, ಹೇಮಾವತಿಯಲ್ಲಿ ನಾವು ಎಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕೋ ಅಷ್ಟನ್ನೂ ಉಪಯೋಗಿಸಿಕೊಳ್ಳಬೇಕು ಎನ್ನುವ ಒಂದು ಹೆಚ್ಚಿನ ಧಾಟಿ ಸರ್ಕಾರಕ್ಕೂ ಇದೆ. ಆದರೆ ಇದರ ಬಗ್ಗೆ ಏನೂ ಕೆಲಸ ಮಾಡುತ್ತಾ ಇಲ್ಲ ಎಂದು ಹೇಳುವುದು ನಿರ್ವಿವಾದ ಮಾತು. ಇದರಲ್ಲಿ ಸಾಕಷ್ಟು ಕೆಲಸ ನಡೆದಿಲ್ಲ ಎನ್ನುವುದು ನಾನು ಒಪ್ಪಿಕೊಳ್ಳುತ್ತೇನೆ. ಏತಕ್ಕೆಂದರೆ ನಮ್ಮಲ್ಲಿ ಸಾಕಷ್ಟು ಹಣವಿಲ್ಲ. ಅದು ಈ ಸಭೆಯ ಎಲ್ಲಾ ಸದಸ್ಯರಿಗೂ ಗೊತ್ತುಂಟು ಶ್ರೀಮಾನ್ ನಂಜೇಗೌಡರು ತಮ್ಮ ಭಾಷಣದಲ್ಲಿ ಹೇಳಿದರು. ಬಜೆಟ್ಟಿನಲ್ಲಿ ಯಾವುದಾದರೂ ಒಂದು ತೀರ್ಮಾನಕ್ಕೆ ಬಂದು 30 ಕೋಟಿ ರೂಪಾಯಿಗಳನ್ನು ನೀರಾವರಿಯೋಜನಗಳಿಗೆ ಒದಗಿಸಿ ಅದರಲ್ಲಿ 10 ಕೋಟಿ ರೂಪಾಯಿ ಕೃಷ್ಣಾ ಪ್ರಾಜೆಕ್ಟಿಗೂ ಮತ್ತು 20 ಕೋಟಿ ರೂಪಾಯಿ ಕಾವೇರಿ ಪ್ರಾಜೆಕ್ಟಿಗೂ ಖರ್ಚು ಮಾಡುವಂಥ ನಿರ್ಣಯ ಮಾಡಬಹುದು ಎಂಬುದಾಗಿ. ಬಹುಶಃ ಇದಕ್ಕೆ ಹಣ ಒದಗಿಸುವಂಥಾವರು ರಿಸೋರ್ಸಸ್ ಕಮಿಟಿಯವರು. ಅವರು ರಿಪೋರ್ಟನ್ನು ಸಾಧ್ಯವಾದಷ್ಟು ಬೇಗ ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ಈ ನೀರಾವರಿ ಬಗ್ಗೆ ಕೃಷ್ಣಾ ಬೇಸಿನ್‌ನಲ್ಲಿ ಆಗಲಿ, ಕಾವೇರಿ ಬೇಸಿನ್‌ನಲ್ಲಿ ಆಗಲಿ, ಇರುವ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವ ಸಮಾಲೋಚನೆಯನ್ನು ಶ್ರೀಮಾನ್ ವೀರೇಂದ್ರ ಪಾಟೀಲರು ಮಾಡಿ ಆ ಬಗ್ಗೆ ಮಾಡಬೇಕಾದ ಕೆಲಸವನ್ನು ಮಾಡಿದ್ದಾರೆ. ಅವರು 1965-66 ರಲ್ಲಿ ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿದ್ದಾಗ ಯಾವ ಧೋರಣೆ ಅನುಸರಿಸಿದ್ದರೋ ಅದೇ ಧೋರಣೆಯನ್ನು ಈಗಲೂ ಅನುಸರಿಸಿ ಸುಧಾರಿಸಬೇಕು ಎಂದು ಹೇಳುತ್ತೇನೆ. ಈವೊತ್ತು ಹಾರಂಗಿ ಯೋಜನೆಯಲ್ಲಿ ಸಾಕಷ್ಟು ಪ್ರೋಗ್ರೆಸ್ ಆಗಿಲ್ಲ ಎಂಬ ಭಾವನೆ ಬಂದಿದೆ. ಆದರೆ ನಾವು ಟೆಂಡರ್ ಕರೆದು ಯೋಜನೆ ತೆಗೆದುಕೊಳ್ಳಲು ನಿಧಾನ ಮಾಡಿದರೆ ಈ ನಿಲುವಿನಿಂದ ಜನರಲ್ಲಿ ನಿರಾಸೆ ಬರುತ್ತದೆ ಈ ರೀತಿ ಮಾಡಬಾರದು ಎಂದು ಮಾಡಿದ್ದೇವೆ. ಹೇಮಾವತಿ ಯೋಜನೆಯಲ್ಲಿ ಸ್ವಲ್ಪ ಪ್ರಗತಿ ಆಗಿದ್ದರೂ ಕೂಡ ಹಾರಂಗಿಯಲ್ಲಿ ಅಷ್ಟು ಆಗಿಲ್ಲ ಅನ್ನುವ ವಿಚಾರ ಇದೆ. ಇದರಲ್ಲಿ ರಾಜಕೀಯ ದೃಷ್ಟಿ ಏನೂ ಇಲ್ಲ. ಅದರಲ್ಲಿ ಏನು ಕೆಲಸವನ್ನೂ ತೆಗೆದುಕೊಳ್ಳಬಾರದು ಎನ್ನುವ ಭಾವನೆ ಏನೂ ಇಲ್ಲ. ಅದುದರಿಂದ ಸರ್ಕಾರ ಇದರ ಬಗ್ಗೆ ಒಂದು ಪೂರ್ಣ ನಿಲುವನ್ನು ತೆಗೆದುಕೊಂಡಿದ್ದಾರೆಯೇ ವಿನಃ ಯಾವ ಕಾರಣದಿಂದಲಾದರೂ ಹಿಂದಕ್ಕೆ ಹೋಗಿಲ್ಲ ಎನ್ನುವುದನ್ನು ನಾನು ತಿಳಿಸಲು ಇಷ್ಟಪಡುತ್ತೇನೆ. ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಂಚೇಗೌಡ (ಮದ್ದೂರು).—ಸನ್ಮಾನ್ಯ ಸಭಾಪತಿಯವರೇ, ಈ ಸಭೆಯ ಮುಂದಿರತಕ್ಕ ನಿರ್ಣಯ ಹಾಗೂ ಇದರ ಬಗ್ಗೆ ಶ್ರೀಮಾನ್ ಡಿ. ಎಂ. ಸಿದ್ಧಯ್ಯನವರು ಮತ್ತು ಇನ್ನೂ ಕೆಲವು ಸ್ನೇಹಿತರು ತಂದಿರತಕ್ಕಂಥ ತಿದ್ದುಪಡಿ ಬಗ್ಗೆ, ನನ್ನ ಮಾನ್ಯ ಸ್ನೇಹಿತರುಗಳು ಮಾತನಾಡತಕ್ಕಂಥ ಸಂದರ್ಭದಲ್ಲಿ ವೈಯಕ್ತಿಕವಾಗಿ ತಪ್ಪು ಭಾವನೆಯಿಂದ ನನ್ನ ಬಗ್ಗೆ ಕೆಲವು ಆರೋಪಣೆ ಏನು ಮಾಡಿದ್ದಾರೆ ಆ ಬಗ್ಗೆ ಎರಡು ಮಾತನಾಡಿ ನಂತರ ಈ ತಿದ್ದುಪಡಿಗೆ ಸಂಬಂಧಪಟ್ಟಂತೆ ಮಾತನಾಡುತ್ತೇನೆ.

ಈ ಸಭೆಯ ಮುಂದೆ ಏನು ನಿರ್ಣಯ ಇದೆ ಅದರ ಬಗ್ಗೆ ನನ್ನ ಸ್ನೇಹಿತರು ಭಾಷಣ ಮಾಡುವಾಗ ಏನು ಒಂದು ಅನುಮಾನ ವ್ಯಕ್ತಪಡಿಸಿದ್ದಾರೋ ಅದೇ ಅನುಮಾನ

ನನ್ನಲ್ಲೂ ಮೂಡಿದೆ. ಅವರು ಯಾವ ಒಂದು ಉದ್ದೇಶವನ್ನು ಇಟ್ಟುಕೊಂಡು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೋ ಆ ಅಭಿಪ್ರಾಯ ನನ್ನಲ್ಲೂ ಇದೆ. ಶ್ರೀಯುತ ಚನ್ನಬಸಪ್ಪನವರೂ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕಾವೇರಿ ಬೇಸಿನ್‌ನಲ್ಲಿ ನಿರ್ಮಿಸಬೇಕಾಗಿರತಕ್ಕಂಥ ಜಲಾಶಯಗಳಿಗೆ ಹಣ ಒದಗಿಸಿದ್ದರೂ ಕೂಡ ಸರ್ಕಾರ ಆ ಹಣ ಖರ್ಚು ಮಾಡಿಲ್ಲ ಎಂದು ಹೇಳಿದರು. ಅವರು ಹೇಳಿರುವುದರಲ್ಲಿ ಎರಡು ಅರ್ಥವಿದೆ. ಹಣ ಒದಗಿಸಿದರೂ ಕೂಡ ಸರ್ಕಾರ ಆ ಹಣ ಖರ್ಚುಮಾಡದೇ ಇರುವುದು ಒಂದು, ಮತ್ತೊಂದು ಅದಕ್ಕೆ ಸಾಕಷ್ಟು ಮೊಬಲಗನ್ನು ಒದಗಿಸಬೇಕೆಂಬುದು 1974ರ ಅಂತ್ಯದೊಳಗೆ ಕಾವೇರಿ ಬೇಸಿನ್‌ನಲ್ಲಿ ಕೆಲವು ಪ್ರಾಜೆಕ್ಟ್‌ಗಳು ಏನಿವೆ, ಆ ಪ್ರಾಜೆಕ್ಟ್‌ಗಳಿಗೆ ಎಷ್ಟು ಹಣಬೇಕು ಅಷ್ಟನ್ನು ಒದಗಿಸಬೇಕು. ಯಾವ ಆಧಾರದ ಮೇಲೆ ಹಣವನ್ನು ಒದಗಿಸಬೇಕು ಎಂದರೆ ಈವತ್ತಿನ ದಿವಸ ತಮ್ಮಲ್ಲಿರತಕ್ಕ ಬೇರೆ ಯೋಜನೆಗಳನ್ನು ಕಡಿಮೆಮಾಡಿ ಅವುಗಳಿಗೆ ಒದಗಿಸಿರತಕ್ಕ ಹಣವನ್ನು ಉಳಿಸಿ ಈ ಯೋಜನೆಗಳಿಗೆ ಒದಗಿಸಿ ಇದನ್ನು ಕಾರ್ಯಗತ ಮಾಡಬೇಕು. ಈ ಉದ್ದೇಶದಿಂದ ತಿದ್ದುಪಡಿ ತಂದಿದ್ದಾಗಿದೆ. ಇದರಲ್ಲಿ ನನ್ನ ಅಥವಾ ನನ್ನ ಸ್ನೇಹಿತರ ಸ್ವಾರ್ಥ ಅಡಕವಾಗಿಲ್ಲ ಅಥವಾ ಕನ್ನಂಬಾಡಿ ಜಲಾಶಯದ ಮೇಲುಗಡೆ ಜಲಾಶಯಗಳನ್ನು ನಿರ್ಮಿಸಬೇಕೆಂದು ಏನು ಯೋಜನೆ ಮಾಡಿದ್ದಾರೆ, ಆ ಯೋಜನೆಗಳಿಂದ ಮಂಡ್ಯದ ಜನತೆಗೆ ಪೂರ್ಣವಾಗಿ ತೊಂದರೆಯಾಗಬಹುದು ಎನ್ನುವ ದೃಷ್ಟಿಯಿಂದಲೂ ಕೂಡ ನಾನು ಈ ತಿದ್ದುಪಡಿಯನ್ನು ತಂದಿಲ್ಲ. 40 ವರ್ಷದಿಂದ ಅನುಭವಿಸಿರತಕ್ಕ ಹಕ್ಕನ್ನು ಕಿತ್ತುಕೊಳ್ಳುತಕ್ಕ ಅಧಿಕಾರ ಯಾರಿಗೂ ಇಲ್ಲ. ಇದನ್ನು ನಾವು ಚೆನ್ನಾಗಿ ತಿಳಿದುಕೊಂಡಿದ್ದೇವೆ. ನಮಗೆ ಏನು ಹಕ್ಕಿದೆ ಅದಕ್ಕೆ ಲೋಪ ಬಾರದಂತೆ ನೀರು ಉಳಿಯುತ್ತದೆಯೇ, ಇಲ್ಲವೇ ಎನ್ನುವ ಪ್ರಶ್ನೆ ಇದೆ. ಹತ್ತಾರು ವರ್ಷಗಳಿಂದ ಮಾನ್ಯ ಚನ್ನಬಸಪ್ಪನವರು ಹೇಳಿದ ಹಾಗೆ ಅನೇಕ ತಜ್ಞರ ವರದಿಗಳು ಸರ್ಕಾರದ ಮುಂದೆ ಇವೆ. ಆ ವರದಿಗಳಿಗನುಗುಣವಾಗಿ ಏನು ನೀರು ಉಳಿಯುತ್ತದ, ಆ ನೀರನ್ನು ಉಪಯೋಗಿಸಿಕೊಳ್ಳಲು ಸರ್ಕಾರ ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲೇಬೇಕು ಎಂಬುದಾಗಿ ಕಡ್ಡಾಯ ಮಾಡತಕ್ಕ ತಿದ್ದುಪಡಿಯನ್ನು ನಾವು ತಂದಿದ್ದೇವೆ. ವಿರೋಧಪಕ್ಷದ ನಾಯಕರು ಮತ್ತು ಸ್ನೇಹಿತರು ಏನು ನಿರ್ಣಯವನ್ನು ತಂದಿದ್ದಾರ ಮತ್ತು ಅದರ ಬಗ್ಗೆ ಮಾತನಾಡುತ್ತ ಅವರೇ ಏನು ಅನುಮಾನಗಳನ್ನು ವ್ಯಕ್ತಪಡಿಸಿದರು ಮತ್ತು ಹಣವನ್ನು ಒದಗಿಸಿದರೂ ಖರ್ಚು ಮಾಡುವುದಿಲ್ಲ ಎಂದು ಏನು ಹೇಳಿದರು, ಇವೆಲ್ಲವೂ ಪರಿಹಾರವಾಗಬೇಕಾದರೆ ಅವರು ಸೂಚಿಸಿರುವ ನಿರ್ಣಯವನ್ನು ಬಿಟ್ಟು ನಾವು ತಂದಿರುವ ತಿದ್ದುಪಡಿಯನ್ನು ಒಪ್ಪಿಕೊಂಡರೆ ಬಹಳ ಒಳ್ಳೆಯದಾಗುತ್ತದೆ. ಏಕೆಂದರೆ ಅದು ಬಹಳ ಎಫೆಕ್ಟಿವ್ ಆಗಿದ ಮತ್ತು it is wider in scope, ಆ ದೃಷ್ಟಿಯಿಂದ ನಾವು ತಿದ್ದುಪಡಿಯನ್ನು ತಂದಿದ್ದೇವೆಯೇ ಹೊರತು ಈ ಯೋಜನೆಗಳನ್ನು ಕೈ ಬಿಡಬೇಕೆಂದೇನೂ ಅಲ್ಲ.

ಅನೇಕ ಸ್ನೇಹಿತರು ತಾಂತ್ರಿಕವಾಗಿ ಲೆಕ್ಕಾಚಾರ ಹಾಕಿ ಅಷ್ಟು ನೀರು ಉಳಿಯುತ್ತದೆ, ಇಷ್ಟು ನೀರು ಉಳಿಯುತ್ತದೆ ಎಂದು ಹೇಳಿಕೊಂಡು ಹೋದರು. ನಾನೇ ಆಗಲೀ, ಬೇರೇ ಸ್ನೇಹಿತರೇ ಆಗಲೀ ಇದರಲ್ಲಿ ಕೈ ಹಾಕುವುದು ಅನಗತ್ಯವೆಂದು ಕಾಣುತ್ತದೆ. ಸರ್ಕಾರವನ್ನು ನಡೆಸುವವರು ಜನತೆಯ ಪ್ರತಿನಿಧಿಗಳು. ಜನರು ನಮ್ಮಲ್ಲಿ ಬಹಳ ವಿಶ್ವಾಸವಿಟ್ಟು ಕಳುಹಿಸಿದೆ; ಅಷ್ಟೇ ವಿಶ್ವಾಸವನ್ನು ಇಟ್ಟು ಸರ್ಕಾರವನ್ನು ನಾವು ನೇಮಕ ಮಾಡಿಕೊಂಡಿದ್ದೇವೆ. ದ್ರೋಹಕರವಾದ, ಹಾನಿಕರವಾದ ಕೆಲಸವನ್ನು ಅವರು ಮಾಡುತ್ತಾರೆಂದು ನಮ್ಮ ಮನಸ್ಸಿಗೆ ಬಂದ ಕೂಡಲೇ ಅದನ್ನು ಪ್ರತಿಭಟಿಸುವುದಕ್ಕೆ, ಸರ್ಕಾರವನ್ನು ಉರುಳಿಸುವುದಕ್ಕೆ, ಆತ್ಮಸಾಕ್ಷಿಯಾದ ಹಕ್ಕುಗಳಿಗೆ ಎಂದೂ ಲೋಪ ತಂದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಆ ದೃಷ್ಟಿಯಿಂದ ಎಷ್ಟೊಂದು ನೀರು ಉಳಿತಾಯವಾಗುತ್ತದೆ ಎನ್ನುವುದನ್ನು ಅವರೇ ಲೆಕ್ಕ ಹಾಕಿಕೊಳ್ಳಲಿ. ಈವಾಗ ಏನು ಕಾರ್ಯಗತ ಮಾಡುವುದಕ್ಕೆ ಯೋಜನೆಗಳನ್ನು ಕೈಗೊಂಡಿದ್ದಾರೆ, ಹಾರಂಗಿ, ಹೇಮಾವತಿ, ಅಥವಾ ಕಬಿನಿ ಇವುಗಳನ್ನು ಮಾಡಲೇ ಬೇಕು.

1974ನೇ ಇಸವಿಯೊಳಗೆ ಎಲ್ಲ ಕೆಲಸಗಳನ್ನೂ ಮಾಡಿ ಮುಗಿಸಬೇಕು ಎಂದು ಅನೇಕ ಸ್ನೇಹಿತರು ಹೇಳಿದ್ದಾರೆ. ನಾಲ್ಕನೆಯ ಯೋಜನೆಯ ಅಂತ್ಯದೊಳಗೆ ಎಂದು ನಾವು ತಿದ್ದುಪಡಿಯಲ್ಲಿ ಸೂಚನೆ ಮಾಡಿದ್ದೇವೆ. ಇಷ್ಟೇ ಅಲ್ಲ, ಈ ಸಾರಿ ಮತ್ತು ಕಳೆದ ಸಾರಿ ಈ ಸಭೆಯಲ್ಲಿ ಅನೇಕ ಸಾರಿ ಇದೇ ಸಂಬಂಧವಾದ ವಿಷಯದ ಬಗ್ಗೆ ಬಹಳವಾದ ಚರ್ಚೆಯಾಗಿದೆ. ಆದರೆ ಆಯವ್ಯಯ ಪಟ್ಟಿಯನ್ನು ಮಾಡತಕ್ಕ ಸಂದರ್ಭದಲ್ಲಿ ಹೆಚ್ಚು ಹಣವನ್ನು ಒದಗಿಸಬೇಕೆಂದು ಈ ಸಭೆಯಲ್ಲಿ ಚರ್ಚೆ ನಡೆದಿದೆ. ಆದರೆ ಆ ಧಾಟಿಯಲ್ಲಿ ಹಣವನ್ನು ಒದಗಿಸಿಲ್ಲ. ಸಾಮಾನ್ಯವಾಗಿ ಈಗಿನಂತೆ ಹಣವನ್ನು ಒದಗಿಸುತ್ತ ಹೋದರೆ ಇನ್ನು 60 ವರ್ಷವಾದರೂ ಆ ಯೋಜನೆಗಳು ಮುಗಿಯುವ ಭರವಸೆ ಇಲ್ಲ. ಈ ಯೋಜನೆಗಳು ಮುಗಿಯಬೇಕಾದರೆ 80 ಕೋಟಿ ರೂಪಾಯಿಗಳು ಬೇಕಾಗುತ್ತವೆ.

(ಶ್ರೀ ಎಂ. ವೆಂಚೇಗೌಡ)

ಈ 80 ಕೋಟಿ ರೂಪಾಯಿಗಳನ್ನು ಐದು ವರ್ಷದೊಳಗೆ ಒದಗಿಸಬೇಕಾದರೆ ವರ್ಷಂಪ್ರತಿ 15-20 ಕೋಟಿ ರೂಪಾಯಿಗಳನ್ನು ಒದಗಿಸಬೇಕು. ಈ ಸಾರಿ ಹಣವನ್ನು ಒದಗಿಸಿಲ್ಲ. ನಾಲ್ಕನೆ ಯೋಜನೆ ಏನು ತಯಾರಾಗುತ್ತಿದೆ ಅದರಲ್ಲಿ ಕೂಡ ಒದಗಿಸಿಲ್ಲ. ಇಷ್ಟರವರೆಗೂ ಏನೂ ಹಣವನ್ನು ಒದಗಿಸದೆ ಇರುವಾಗ ಎಷ್ಟು ಟೀಕೆ ಮಾಡಿದರೂ, ಎಷ್ಟು ಚರ್ಚೆ ಮಾಡಿದರೂ ಏನು ಪ್ರಯೋಜನ ? ಬಜೆಟ್ ಅಧಿವೇಶನದ ಸಂದರ್ಭದಲ್ಲಿ ಒಂದು ರಿಸೋರ್ಸಸ್ ಕಮಿಟಿ ಎಂದು ಮಾಡಿದ್ದಾರೆ. ಆ ರಿಸೋರ್ಸಸ್ ಕಮಿಟಿಯಿಂದ ಏನು ವರದಿ ಬರುತ್ತದೆ ಎನ್ನುವ ಬಗ್ಗೆ ನನಗೆ ಹೆಚ್ಚು ಆಶಯವಿಲ್ಲ, ನಿರಾಸೆ ಇದೆ. ಕೆಲವು ದಿವಸಗಳ ಹಿಂದೆ ವಿರೋಧಪಕ್ಷದ ಸ್ನೇಹಿತರು ಮಾತನಾಡಿದ ಸಂದರ್ಭದಲ್ಲಿ ಆ ವರದಿ ಬರುವುದಕ್ಕೆ ಮುನ್ನ ಐದು ಕೋಟಿ ರೂಪಾಯಿಗಳನ್ನು ಕೊಡಿರಿ ಎಂದು ಕೇಳಿದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ವರದಿ ಬರಬೇಕಾಗಿದೆ, ಸಂಬಂಧಪಟ್ಟ ಮಂತ್ರಿಗಳನ್ನು ಸೆಕ್ರೆಟರಿಗಳನ್ನು ಕೇಳಬೇಕಾಗಿದೆ, ಎಷ್ಟು ಹಣವನ್ನು ಉಳಿತಾಯ ಮಾಡುವುದಕ್ಕೆ ಸಾಧ್ಯ ಎಂದು ಅವರನ್ನು ಕೇಳಬೇಕು ಎಂದು ಹೇಳಿದರು. ನನ್ನ ಮನಸ್ಸಿನಲ್ಲಿ ಏನು ಭಾವನೆಯುಂಟಾಗಿದೆ ಎಂದರೆ ಸಂಬಂಧಪಟ್ಟ ಮಂತ್ರಿಗಳು ಅವರ ಖಾತೆಗೆ ಸಂಬಂಧಪಟ್ಟಂತೆ ಹಣವನ್ನು ಖೋತಾ ಮಾಡಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ, ಈ ಸಾರಿ ಬಜೆಟ್ಟಿನಲ್ಲಿ ಈ ಯೋಜನೆಗಳಿಗೆ ಏನು ಹಣವಿದೆ ಅದು ಸಾಕಾಗುವುದಿಲ್ಲ ಮತ್ತು ಈ ಯೋಜನೆಗಳೇನಿವೆ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆಯೋ ಅವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬುದಾಗಿ ನನ್ನ ಮನಸ್ಸಿನಲ್ಲಿ ಖಚಿತವಾಗಿದೆ. ಪ್ರತಿಯೊಂದಕ್ಕೂ ಕೂಡ ರಿಸೋರ್ಸಸ್ ಬೇಕಾಗಿಲ್ಲ. ಕಳೆದ ಸಾರಿ ತುಟ್ಟಿಭತ್ಯವನ್ನು ಹೆಚ್ಚಿಸಿದ ಸಂದರ್ಭದಲ್ಲಿ 8 ಕೋಟಿ ರೂಪಾಯಿಗಳನ್ನು ಮತ್ತು ಈ ಸಾರಿ ತುಟ್ಟಿಭತ್ಯವನ್ನು ಏರಿಸಿದ ಸಂದರ್ಭದಲ್ಲಿ ಮೂರೂವರೆ ನಾಲ್ಕು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ಈ ಸಭೆಯ ಒಪ್ಪಿಗೆಯನ್ನು ಪಡೆದಿದ್ದಾರೇ ? ಇಲ್ಲ. ಆದರೆ ಇಂಥ ಯೋಜನೆಗಳಿಗೆ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗಿಲ್ಲವೇ ? ನಮ್ಮ ರಾಜ್ಯದ ಹಿತದೃಷ್ಟಿಯಿಂದ, ನೀರನ್ನು ಇಷ್ಟು ಹೊತ್ತಿಗೆ ಉಪಯೋಗಿಸಿಕೊಂಡಿದ್ದರೆ ನಮ್ಮ ಜನಗಳ ಆರ್ಥಿಕ ಪರಿಸ್ಥಿತಿ ಬಹಳಮಟ್ಟಿಗೆ ಸುಧಾರಣೆಯಾಗುತ್ತಿತ್ತು ; ನಮ್ಮ ರಾಜ್ಯದ ಆದಾಯ ಬಹುಮಟ್ಟಿಗೆ ಹೆಚ್ಚಿಗೆ ಆಗುತ್ತಿತ್ತು. ತಾರತಮ್ಯದ ಅಭಿಪ್ರಾಯವೇನಿದೆ ಅದು ಬಹಳಮಟ್ಟಿಗೆ ಇಷ್ಟರವೇಳೆಗೆ ಉದ್ಭವಿಸುತ್ತಿರಲಿಲ್ಲ. ಇವಕ್ಕೆಲ್ಲ ಮೂಲ ಅಗತ್ಯವಾದ ಯೋಜನೆಗಳನ್ನು ಹಾಕಿಕೊಂಡು ನೀರಾವರಿ ಸೌಲಭ್ಯವನ್ನು ಹೆಚ್ಚಿಸಬೇಕಾಗಿತ್ತೋ, ಇವುಗಳನ್ನು ಹೆಚ್ಚಿಸುವುದಕ್ಕೆ ಏನೇನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತೋ ಆ ಕಾರ್ಯಕ್ರಮಗಳನ್ನು ಇಷ್ಟರವರೆಗೂ ಸರ್ಕಾರ ತೆಗೆದುಕೊಂಡಿಲ್ಲ. ಮಾನ್ಯ ಶಿವಪ್ಪನವರು ಮತ್ತು ಇತರ ಸ್ನೇಹಿತರು ಏನು ನಿರ್ಣಯ ತಂದಿದ್ದಾರೆ ಅದರಲ್ಲಿ ಎಫೆಕ್ಟಿವ್‌ನೆಸ್ ಇಲ್ಲ. ಸರ್ಕಾರ ಹಣ ಒದಗಿಸಿದರೂ ಕೂಡ ಅದನ್ನು ಉಪಯೋಗಿಸಿಕೊಂಡು ಯೋಜನೆಗಳನ್ನು ಕಾರ್ಯಗತ ಮಾಡಿಲ್ಲ. ಈ ಯೋಜನೆಗಳಿಗೆ ಬೇಕಾದ ಹಣವನ್ನು ಸರ್ಕಾರ ಒದಗಿಸಿಕೊಂಡು, ತಾಂತ್ರಿಕವಾಗಿ ಅಡ್ಡಿ ಅಡಚಣೆಗಳು ಇಲ್ಲದಂತೆ ನೋಡಿಕೊಂಡು ಯೋಜನೆಗಳನ್ನು ಪೂರ್ಣವಾಗಿ ಕಾರ್ಯಗತ ಮಾಡಬೇಕಾಗಿದೆ. ಅದಕ್ಕಾಗಿ ಈ ತಿದ್ದುಪಡಿಯನ್ನು ತರುವುದರ ಅಗತ್ಯವಿದೆ ಎನ್ನುವ ದೃಢ ನಿರ್ಧಾರ ಮಾಡಿಕೊಂಡು ನಾನು ಮತ್ತು ನನ್ನ ಸ್ನೇಹಿತರು ಈ ತಿದ್ದುಪಡಿಯನ್ನು ಸಭೆಯ ಮುಂದೆ ತಂದಿದ್ದೇವೆ. ಅನೇಕ ಸಾರಿ ಈ ವಿಷಯದಬಗ್ಗೆ ಚರ್ಚೆಯಾಗಿರಬಹುದು, ನಿರ್ಣಯವಾಗಿರಬಹುದು, ಆದರೆ ಅದು ಕಾರ್ಯರೂಪಕ್ಕೆ ಇನ್ನೂವರೆಗೆ ಬಂದಿಲ್ಲ. ಇನ್ನು ಮುಂದೆ ನಾವೆಲ್ಲರೂ ನಮ್ಮ ನಾಯಕರಿಗೆ ಹೇಳುತ್ತಿದ್ದೇವೆ, ಯಾವ ಖಾತೆಗೆ ಹಣ ಖೋತಾ ಮಾಡಿದರೂ ಒಪ್ಪಿಕೊಳ್ಳುತ್ತೇವೆ, ಬ್ಯಾಂಕುಗಳಿಂದ ಸಾಲ ಎತ್ತಿದರೂ ಒಪ್ಪಿಕೊಳ್ಳುತ್ತೇವೆ, ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡಲು ಏನು ತಿದ್ದುಪಡಿ ತಂದಿದ್ದಾರೆ ಅದನ್ನು ಕೂಡ ನಾವು ಒಪ್ಪಿಕೊಳ್ಳುತ್ತೇವೆ, ನೀವು ಏನೇನು ಕಾರ್ಯಕ್ರಮ ಹಾಕಿಕೊಂಡು ಯಾವ ಮಾರ್ಗವನ್ನು ತೋರಿಸುತ್ತೀರಿ ಅದೆಲ್ಲವನ್ನೂ ಕೂಡ ಶಿಸ್ತಿನಿಂದ ಪಾಲಿಸಿ ಹಣವನ್ನು ಒದಗಿಸುವುದಕ್ಕೆ ಒಪ್ಪಿಕೊಳ್ಳುತ್ತೇವೆ. ಎಷ್ಟು ನೀರು ನಮಗೆ ಇದೆ ಅದನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದೆಲ್ಲವನ್ನೂ ಸರ್ಕಾರದವರು ತೆಗೆದುಕೊಳ್ಳಲೇ ಬೇಕು. ಈ ಬಗ್ಗೆ ಒಮ್ಮತದ ನಿರ್ಧಾರವಾಗಬೇಕಾಗಿದೆ. ಆದ್ದರಿಂದ ನಾವು ಏನು ತಿದ್ದುಪಡಿ ತಂದಿದ್ದೇವೆ ಅದು ನಮ್ಮ ಕೆಲಸಗಳು ನೆರವೇರುವುದಕ್ಕೆ ಸಹಾಯಕಾರಿಯಾಗಿದೆ. ಅದಕ್ಕಾಗಿ ವಿರೋಧಪಕ್ಷದ ಸ್ನೇಹಿತರು ಕೂಡ ತಮ್ಮ ಮನಸ್ಸಿನಲ್ಲಿ ಏನು ನಿರಾಸೆ ಇದೆ, ಏನು ಅನುಮಾನವಿದೆ ಅದನ್ನೆಲ್ಲ ಬಿಟ್ಟು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ತಮ್ಮ ಮೂಲಕ ಅವರನ್ನು ಪ್ರಾರ್ಥಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಸ್ವಾಮಿ, ಈ ಮನೆಯ ವಿರೋಧ ಪಕ್ಷದ ನಾಯಕರು ತಂದಿರತಕ್ಕ ಸೂಚನೆಗೆ ಬೆಂಬಲ ಕೊಡುತ್ತೇನೆ. ಈಗ ನಡೆದಿರತಕ್ಕ ಎಲ್ಲ ಚರ್ಚೆಯನ್ನೂ ವಿಮರ್ಶೆ ಮಾಡಿದಾಗ ಯಾವ ಬೇಜವಾಬ್ದಾರಿ ಸರ್ಕಾರ ಇದ್ದಾಗ 1924ನೇ ಇಸವಿಯಲ್ಲಿ ಹಿಂದೂಸ್ಥಾನದಲ್ಲಿ ಏನು ಒಪ್ಪಂದವಾಗಿತ್ತೋ ಅದರ ಮೇಲೆ ಚರ್ಚೆ ನಡೆದಿದೆ. ನಮಗೆ ಜವಾಬ್ದಾರಿ ಸರ್ಕಾರ ಬಂದ ಮೇಲೆ ನಾವು 1950ರಿಂದ ಏನು ಕೆಲಸಕಾರ್ಯ ಮಾಡಿದ್ದೇವೆ ಎನ್ನುವುದನ್ನೂ, ಏನು ಉಪಯೋಗ ಹೊಂದಿದ್ದೇವೆ ಎನ್ನುವುದನ್ನೂ, ಬೇಜವಾಬ್ದಾರಿ ಸರ್ಕಾರ ಇದ್ದಾಗ ಏನು ಅನುಕೂಲತೆಯನ್ನು ಮಾಡಿದ್ದರೋ ಅದರ ಮೇಲೆ ಚರ್ಚೆ ಮಾಡುವಾಗ, ಸ್ವಾತಂತ್ರ್ಯ ಬಂದು 20 ವರ್ಷವಾದ ಮೇಲೆ ಎಷ್ಟರಮಟ್ಟಿಗೆ ಕೆಲಸಕಾರ್ಯ ಮಾಡಿದ್ದೇವೆ ಎನ್ನುವುದನ್ನೂ ನೋಡಬೇಕು. 1956ನೇ ಇಸವಿಯವರೆಗೂ ಅದಷ್ಟೂ ವ್ಯವಸ್ಥಿತ ರೀತಿಯಲ್ಲಿ ಎಲ್ಲ ಕೆಲಸಕಾರ್ಯಗಳೂ ಮುಂದೆ ಸಾಗಿದುವು. ಆದಾದ ನಂತರ ನಮಗೆ ಸಂಪನ್ಮೂಲ ಎಷ್ಟು ಜಾಸ್ತಿಯಾಗುತ್ತದೆ, ಜನಗಳ ಮೇಲೆ ಎಷ್ಟು ತೆರಿಗೆ ಹಾಕಿದೆ, ಸಂಪತ್ತು ಜಾಸ್ತಿಯಾಗಿದೆಯೋ ಎಂದು ನೋಡಿದರೆ ಅಷ್ಟು ದುರ್ವ್ಯವಹಾರ ಜಾಸ್ತಿಯಾಗುವುದಕ್ಕೆ ಅವಕಾಶವಾಯಿತು. ವ್ಯವಸಾಯಕ್ಕೆ ಬೇಕಾದ ನೀರಾವರಿ ಪ್ರಾಜೆಕ್ಟ್‌ಗಳನ್ನು ಮಾಡುವುದಕ್ಕೆ ನಮ್ಮಲ್ಲಿ ಹಣವಿಲ್ಲದ ಕಾಲದಲ್ಲಿ ಅನಗತ್ಯವಾಗಿರುವ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಮಾತ್ರ ಹಣವಿದೆ. ಶ್ರೀ ಶೈಲದಲ್ಲಿ 25 ಲಕ್ಷ ರೂಪಾಯಿ ಖರ್ಚು ಮಾಡಿ ಮೈಸೂರು ಛತ್ರವನ್ನು ಕಟ್ಟಿಸಬೇಕೆಂದು ತೀರ್ಮಾನ ಮಾಡಿ ಅದಕ್ಕೆ ಅಸ್ತಿಭಾರ ಶಿಲೆಯನ್ನು ಕೂಡ ಹಾಕಿದ್ದಾರೆ. ಇದರ ಅಗತ್ಯವಿತ್ತೇ ? ಈ ದೇಶದಲ್ಲಿರುವ ಎಲ್ಲಾ ನೀರಾವರಿ ಕೆಲಸಗಳನ್ನು ಕೈಗೊಂಡು ಮಾಡಿದರೂ ಕೂಡ ಸೇಕಡ 25 ರಷ್ಟು ನೀರಾವರಿಯಾಗದಿರುವಾಗ, ನಮ್ಮ ಲೋಕೋಪಯೋಗಿ ಶಾಖೆ ಸಚಿವರು, ಮುಖ್ಯಮಂತ್ರಿಗಳು ಯಾವುದಕ್ಕೆ ಫೌಂಡೇಷನ್ ಸ್ಟೋನ್ ಹಾಕಿದ್ದಾರೋ ಆ ಕೆಲಸಗಳಲ್ಲಿ ಒಂದನ್ನೂ ಕೂಡ ಮಾಡದೆ ಬಿಡುವುದಕ್ಕಾಗುವುದಿಲ್ಲ, ಆ ಕೆಲಸಗಳನ್ನು ಪೂರ್ತಿ ಮಾಡುವುದು ನಮ್ಮ ಕೆಲಸ ಎಂದು ಹೇಳಿದರು. ಆದರೆ ಯಾರು ಯಾವ ಕೆಲಸ ಮಾಡಬೇಕು, ದೇಶದಲ್ಲಿ ಅಗತ್ಯವಾಗಿ ಆಗಬೇಕಾದ ಕೆಲಸವೇನು ಎಂದು ನೋಡಿ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಯೋಜನೆ ಮಾಡಿ ಅದರ ಪ್ರಕಾರ ಕೆಲಸಮಾಡಿದರೆ ಮಾತ್ರ ನಾವು ನಮ್ಮ ಕೆಲಸವನ್ನು ಯಶಸ್ವಿಯಾಗಿ ಮಾಡಿದಂತಾಗುವುದು. ಹಣ ಸಾಲುವುದಿಲ್ಲ ಎಂದು ಹೇಳುವರು. 15 ಕೋಟಿ ರೂಪಾಯಿಗಳ ಆದಾಯವಿದ್ದಾಗಲೂ ಸಾಲುವುದಿಲ್ಲ, ಇಂದು 235 ಕೋಟಿ ಆದಾಯ ಬಂದರೂ ಸಾಲುವುದಿಲ್ಲ ಎಂದರೆ ಅದಕ್ಕೇನು ಹೇಳಬೇಕು ? ಇಂದು ಪಾನನಿರೋಧವನ್ನು ವಜಾಮಾಡಿದಮೇಲೆ ಸುಮಾರು 30 ಕೋಟಿ ರೂಪಾಯಿಗಳ ಹೆಚ್ಚು ಆದಾಯ ಬಂದರೂ ಕೂಡ ಅದನ್ನು ಈಗ ಅವಶ್ಯಕವಾಗಿ ಕೈಕೊಳ್ಳಬೇಕಾಗಿರುವ ಯೋಜನೆಗಳಿಗೆ ಹಣ ಒದಗಿಸುವುದಕ್ಕಾಗುವುದಿಲ್ಲ ಎಂದರೆ ಇದರಿಂದ ದುರಾಡಳಿತ, ದುರ್ವ್ಯವಹಾರ ಎಷ್ಟಾಗಿದೆ ಎಂಬುದನ್ನು ಊಹಿಸಬಹುದು. ತುಕೋಳ್ ಕಮಿಟಿಯವರು ವರದಿ ಕೊಟ್ಟಾಗ ಹೊಸ ಇಲಾಖೆಗಳನ್ನು ಸೃಷ್ಟಿ ಮಾಡಬಾರದು, ಹೊಸದಾಗಿ ಯಾರನ್ನೂ ಕೆಲಸಕ್ಕೆ ನೇಮಿಸಿಕೊಳ್ಳಬಾರದು ಎಂದು ಅದರಲ್ಲಿ ತಿಳಿಸಿದ್ದರೂ ಕೂಡ ಇಂದು ಸಾರೋದ್ಧಾರವಾಗಿ ಅಧಿಕಾರಿಗಳನ್ನು ನೇಮಕಮಾಡುವುದೂ, ಹೊಸ ಇಲಾಖೆಗಳನ್ನು ಸೃಷ್ಟಿಸುವುದೂ ನಡೆಯುತ್ತಲೇ ಇದೆ. ಅದು ನಿಂತೇ ಇಲ್ಲ. ಸರಕಾರ ಒಂದು ಸಮಿತಿಯನ್ನು ಮಾಡಿದಾಗ ಅದು ವರದಿ ಕೊಟ್ಟಮೇಲೆ ಅದರಂತೆ ನಡೆಯದಿದ್ದರೆ ಸರಕಾರಕ್ಕೆ ಜವಾಬ್ದಾರಿ ಇದೆಯೇ ಪ್ರಜಾಪ್ರಭುತ್ವವು ಯಶಸ್ವಿಯಾಗುವುದೇ ಎಂಬುವುನ್ನು ಕೇಳಬೇಕಾಗುತ್ತದೆ. 1956-57ರಲ್ಲಿ ಏನು ಕೆಲಸವಾಗಿತ್ತೋ ಅದಕ್ಕಿಂತ ಒಂದು ಇಂಚೂ ಕೂಡ ಮುಂದೆ ಹೋಗುವುದಕ್ಕೆ ಅವಕಾಶವಾಗಿಲ್ಲ. ಇದನ್ನು ನೋಡಿದರೆ ಎಷ್ಟುಮಟ್ಟಿಗೆ ದೇಶ ಮುಂದುವರೆಯಬಹುದು, ದೇಶದ ಸಮಸ್ಯೆಗಳು ಬಗೆಹರಿಯಬಹುದು ಎಂಬುದು ವ್ಯಕ್ತವಾಗುವುದು. ಅಮಾತ್ಯರಾಕ್ಷಸನು ತನ್ನ ಆಡಳಿತ ನಡೆಸುವಾಗ ವಿಷಕನ್ಯೆಗೆ ಹಾವಿನ ಕೈಲ ಕಡಿಸಿ ವಿಷದ ರೀತಿಯಲ್ಲಿ ಬೆಳೆಸಿದ. ಹಾಗೆ ಶ್ರೀ ನಿಜಲಿಂಗಪ್ಪನವರು ವ್ಯವಸ್ಥಿತವಾಗಿ ಬೆಳೆಸಿದ ನಾಯಕತ್ವ ಮುಂದುವರೆಯುತ್ತಿದೆ. ಇದು ಹೇಗೆ ನಡೆಯುತ್ತಿದೆ ಎಂಬುದನ್ನು ನೋಡಬಹುದು. ಇನ್ನುಮುಂದಾದರೂ ಕೂಡ ಇದುವರೆಗೆ ನಡೆದ ದುರಾಡಳಿತವನ್ನು ನಿಲ್ಲಿಸಿ ಎಷ್ಟೇ ಕಷ್ಟವಾದರೂ ಚಿಂತೆಯಿಲ್ಲ, ಯಾವ ರಸ್ತೆಯೂ ಬೇಡ, ಯಾವ ಕಟ್ಟಡವೂ ಬೇಡ, ಎಲ್ಲ ಕೆಲಸಗಳನ್ನೂ ನಿಲ್ಲಿಸಿ 1974 ರೊಳಗೆ ಆಗಬೇಕಾಗಿರುವ ಯೋಜನೆಗಳನ್ನು ಕೈಕೊಂಡು ಸರಕಾರ ತನ್ನ ಜವಾಬ್ದಾರಿಯನ್ನರಿತು ಅವುಗಳನ್ನು ಮುಗಿಸಬೇಕು. ಹಳೇ ಮೈಸೂರಿನವರು ಬಹಳ ಸೌಜನ್ಯದಿಂದ ಬೆಳೆದವರು, ಜಗಳವಾಡಿ ಅವರಿಗೆ ಅಭ್ಯಾಸವಿಲ್ಲ, ಸತ್ಯದಿಂದ, ಧರ್ಮದಿಂದ ನಡೆದಿರುವವರು, ಗಲಾಟೆ ಮಾಡುವುದು ಅವರಿಗೆ ಗೊತ್ತಿಲ್ಲ. ಅವರ ಸೌಜನ್ಯವನ್ನು ಬೇರೆ ರೀತಿಯಲ್ಲಿ ಉಪಯೋಗಿಸಿಕೊಳ್ಳದೆ ಹಾಗೆ ಮಾಡುತ್ತಿದ್ದಾರೇನೋ ಎಂದು ಅನುಮಾನ ಬರುತ್ತಿದೆ—ಶೀಘ್ರವಾಗಿ ಕಾವೇರಿ ಯೋಜನೆಗಳನ್ನೆಲ್ಲಾ ತೆಗೆದುಕೊಂಡು ಪೂರ್ಣಮಾಡಬೇಕು. ಹಿಂದೆ ಕರ್ನಾಟಕವಾಗುವಾಗ ರೀಆರ್ಗನೈಜೇಷನ್ ಸ್ಟೇಟುಗಳು ಆಗುವಾಗ ಆ ವಿಚಾರ ಚರ್ಚೆಗೆ ಬಂದಾಗ ಶ್ರೀ ಹನುಮಂತಯ್ಯನವರು ಹೇಳಿರುವುದನ್ನು ಯೋಚನೆಮಾಡಬೇಕು. ಎಂದೂ ಇಂಥ

(ಶ್ರೀ ವಿ. ಎಲ್. ಶಿವಪ್ಪ)

ಕಷ್ಟ ಸನ್ನಿವೇಶದಲ್ಲಿ ಸಿಕ್ಕಿಕೊಂಡಿರಲಿಲ್ಲ, ಇದರಿಂದ ನನ್ನ ಮಿತ್ರರೆಲ್ಲಾ ದೂರವಾದರು, ಕೆಲವರು ನನ್ನ ಮೇಲೆ ಶತೃತ್ವ ಸಾಧಿಸುತ್ತಿದ್ದಾರೆ, ಇಂಥ ಪರಿಸ್ಥಿತಿಯಲ್ಲಿ ಚರ್ಚೆಮಾಡುತ್ತಿದ್ದೇವೆ, ಕರ್ಣಾಟಕ ಆಗಲೇಬೇಕು, ಅದು ನಿಲ್ಲುವುದಿಲ್ಲ, ಯಾರು ಏನೇ ಮಾಡಿದರೂ ನಿಲ್ಲುವುದಿಲ್ಲ ಎಂದು ಹೇಳಿದರು. ಹತ್ತು ವರ್ಷಗಳವರೆಗೆ ಹಳೇ ಮೈಸೂರಿನ ಅಭಿವೃದ್ಧಿ ಕುಂಠಿತಮಾಡುವುದಿಲ್ಲ ಎಂಬ ಭರವಸೆ ಸಹ ಕೊಟ್ಟಿದ್ದರು. ಹಾಗೆ ಕೊಟ್ಟು ಇದಕ್ಕೆ ಸಹಕಾರ ಮಾಡಬೇಕು ಎಂದು ಕೇಳಿಕೊಂಡಿದ್ದರು. ಆದರೆ ಈಗಿನ ಪರಿಸ್ಥಿತಿಯೇ ಬೇರೆಯಾಗಿದೆ. ಕೃಷ್ಣ, ಗೋದಾವರಿ ನೀರನ್ನು ಬೇಕಾದ ಹಾಗೆ ಉಪಯೋಗಿಸಿ, ಯಾರೂ ಬೇಡವೆಂದು ಹೇಳುವುದಿಲ್ಲ. ಅವರೆ ಡಿಸ್ಟ್ರಿಕ್ ಬ್ಯಾಂಕಿನ ಕಟ್ಟಡಕ್ಕೆ 3 ಲಕ್ಷ ಏಕೆ ಕೊಡಬೇಕಾಗಿತ್ತು ! ಇನ್ನು ಕೆಲವು ಕಡೆ ಲಕ್ಷಗಟ್ಟಲೆ ಏಕೆ ಇನ್‌ವೆಸ್ಟ್ ಮಾಡಬೇಕಾಗಿತ್ತು. ಇದೆಲ್ಲವನ್ನೂ ನಿಲ್ಲಿಸಿ ಕಾವೇರಿ ಯೋಜನೆಯನ್ನು ಕೈಕೊಳ್ಳಲು ಉಪಯೋಗಿಸಬಹುದಾಗಿತ್ತು. ಈಗಲಾದರೂ ಎಲ್ಲ ಕೆಲಸಗಳನ್ನೂ ನಿಲ್ಲಿಸಿ 74 ರೊಳಗೆ ಕಾವೇರಿ ವ್ಯಾಲಿಯ ಯೋಜನೆಗಳನ್ನು ಕೂಡಲೇ ತೆಗೆದುಕೊಳ್ಳಬೇಕು ಎಂದು ಹೇಳಿ ನಮ್ಮ ನಾಯಕರು ತಂದಿರುವ ನಿರ್ಣಯಕ್ಕೆ ಬೆಂಬಲ ಕೊಡುತ್ತೇನೆ.

† SRI K. H. PATIL (Hubli).—Sir, if the Chief Minister is to reply today itself, myself and Sri Narayanaswamy are prepared to forgo our chance to speak. I would only say that I wholeheartedly support the Resolution moved by the Leader of the Opposition.

† ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯಲ್ಲಿ ಕೃಷ್ಣ, ಕಾವೇರಿ ಇಲ್ಲ, ಭೂಪಟದಲ್ಲಿ ಅವುಗಳಿರುವ ಜಾಗವನ್ನು ನೋಡಿದ್ದೇನೆ, ಚರಿತ್ರೆಯಲ್ಲಿ ಅವುಗಳ ವಿಚಾರ ಓದಿದ್ದೇನೆ. ಆದರೂ ಕೂಡ ಈ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಕೂಲಂಕಷವಾಗಿ ಯೋಚನೆಮಾಡಿದರೆ ನಮ್ಮ ಮುಂದಿರುವ ಪ್ರಶ್ನೆ ಇಡೀ ದೇಶಕ್ಕೆ ಸಂಬಂಧಪಟ್ಟ ಪ್ರಶ್ನೆ, ಕಾವೇರಿ ನದಿ ಕೋಲಾರದಲ್ಲಿಲ್ಲದಿದ್ದರೂ ಕೂಡ ಮೈಸೂರು ದೇಶದಲ್ಲಿದೆ, ನಾವು ಈ ದೇಶದ ಪ್ರಜೆಗಳು. ಸಮಗ್ರ ಭಾರತದಲ್ಲಿ ಆಹಾರದ ಅಭಾವ ಬಹಳ ಹೇರಳವಾಗಿರುವಾಗ ಇದು ಯುದ್ಧ ಕಾಲವೆಂದು ಭಾವಿಸಿ ಆಹಾರವನ್ನು ಹೆಚ್ಚಾಗಿ ಬೆಳೆಯಬೇಕೆಂದು ದೇಶ ಸಾರುತ್ತಿದೆ. ಇಂಥ ಕಾಲದಲ್ಲಿ ಅಗತ್ಯವಾಗಿ ಆಗಬೇಕಾದ ಕೆಲಸಗಳನ್ನು ಮಾಡಿದ್ದೇವೆಯೇ ಎಂದರೆ ಇಲ್ಲ ಎಂದು ಒಪ್ಪಿಕೊಳ್ಳಬೇಕು. ಎರಡೂ ಕಡೆಯಿಂದ ಮಂಡಿಸಿದ ವಾದ ನಿಜವಾದದ್ದೂ, ಸತ್ಯವಾದದ್ದು ಒಳ್ಳೆಯ ವಿಚಾರ.

ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ ಸುಮಾರು ಅರ್ಧ ಭಾಗದಲ್ಲಿ ಪದೇಪದೇ ಅಭಾವ ಬರುತ್ತಿದೆ. ಅಭಾವ ಪ್ರದೇಶದಿಂದ ಬಂದಿರುವ ನನಗೆ ಇನ್ನುಮುಂದೆ ಏನಾಗುವುದೋ ಎನಿಸುತ್ತಿದೆ. ಯಾವ ಭಾಗದಲ್ಲಿ ಹೆಚ್ಚು ಬೆಳೆದರೂ ನಮಗೆ ಅನುಕೂಲವಾಗುವುದು, ಭಿಕ್ಷೆ ಬೇಡುವುದು ತಪ್ಪಬಹುದು ಎಂಬ ಆಸೆಯಿದೆ. ಆ ದೃಷ್ಟಿಯಿಂದ ನಮ್ಮ ಮುಂದಿರುವ ಸೂಚನೆಗೆ ಬೆಂಬಲ ಕೊಡುತ್ತಿದ್ದೇನೆ. ನಮ್ಮ ಮಿತ್ರರು ಹೇಳಿದಂತೆ ಕೆಲವು ಬಾಬುಗಳಿಗೆ ಕೋಟಿಗಟ್ಟಲೆ ಖರ್ಚುಮಾಡುತ್ತಿದ್ದೇವೆ. ತುಕೋಳ್ ವರದಿಗಾಗಿ 8 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದಿರಿ. ಕಟ್ಟಡಗಳನ್ನು ಕಟ್ಟುವುದಕ್ಕೆ ಕೋಟಿಗಟ್ಟಲೆ ಖರ್ಚಾಗುತ್ತಿದೆ. ಇವನ್ನು ನಿಲ್ಲಿಸಿ ಸಮಗ್ರ ಭಾರತ ಮತ್ತು ಮೈಸೂರು ದೃಷ್ಟಿಯಿಂದ ಕಾವೇರಿ ಮತ್ತು ಕೃಷ್ಣ ನದಿಗಳಿಗೆ ಸಂಬಂಧಪಟ್ಟ ಯೋಜನೆಗಳೇನಿವೆ ಅವನ್ನು ಕೈಕೊಳ್ಳುವುದು ಅಗತ್ಯವಾಗಿದೆ. ನಿಜವಾಗಿಯೂ ಕೂಡ ಶ್ರೀ ವೀರೇಂದ್ರ ಪಾಟೀಲರು ಬಹಳ ಜಾಣರು, ಉತ್ಸಾಹಶಾಲಿಗಳು. ಅವರು ಕಾವೇರಿ ನೀರನ್ನು ಸರಿಯಾಗಿ ಉಪಯೋಗ ಮಾಡಿದರೆ ಅವರ ಹೆಸರು ಮೈಸೂರು ಚರಿತ್ರೆಯ ಇತಿಹಾಸದಲ್ಲಿ ಪ್ರಸಿದ್ಧವಾಗಿರುವುದು. ಅವರು ಈ ವಿಚಾರದಲ್ಲಿ ಶ್ರದ್ಧೆವಹಿಸಿ ಸೂಕ್ತ ಕ್ರಮವನ್ನು ಸಕಾಲದಲ್ಲಿ ತೆಗೆದುಕೊಂಡು ದೇಶಕ್ಕೆ ಸಹಾಯ ಮಾಡುವವರೆಂದು ನಂಬಿ ಹಾಗೆ ಮಾಡಬೇಕೆಂದು ಪ್ರಾರ್ಥನೆಮಾಡಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

7-30 P.M.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಇರುವ ನಿರ್ಣಯ ಈಗ ಚರ್ಚೆಯಾಗಿ ಈ ಕಾವೇರಿ ನೀರಿನ ಬಳಕೆ ಬಗ್ಗೆ ಏನು ಕಾವೇರಿದೆ, ಆ ಕಾವನ್ನು ಸ್ವಲ್ಪ ತಣಿಸುವ ದೃಷ್ಟಿಯಿಂದ ಮಾತನಾಡುವುದಕ್ಕೆ ನಿಂತಿದ್ದೇನೆ. ಇಂತಹ ಮಹತ್ತರವಾದ ವಿಷಯವನ್ನು

ಚರ್ಚೆಮಾಡಿ ತಾವು ಇದನ್ನು ಪಕ್ಷ, ರಾಜಕಾರಣಕ್ಕೆ ಒಳಪಡಿಸಿ, ಮತಕ್ಕೆ ಹಾಕಿ, ಈ ನಿರ್ಣಯಕ್ಕೆ ಸೋಲಾದರೆ ಪರಿಣಾಮವೇನಾಗುತ್ತದೆ ಎಂಬುದನ್ನು ಸ್ವಲ್ಪ ಶ್ರೀವರ್ಮಾ ಚನ್ನಬಸಪ್ಪನವರೂ ಮತ್ತು ವೀರೇಂದ್ರಪಾಟೀಲ್‌ರವರೂ ಇಬ್ಬರೂ ಕೂಡ ವಿಚಾರ ಮಾಡಬೇಕು. ನಾನು ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ, ರಾಜ್ಯದ ಹಿತಕ್ಕೆ ಸಂಬಂಧಪಟ್ಟ ವಿಷಯ, ರೈತರ ಹಿತಕ್ಕೆ ಸಂಬಂಧಪಟ್ಟ ವಿಷಯ ಇಂತಹ ವಿಷಯಗಳನ್ನು ಮತಚಲಾವಣೆ ಮಾಡಿ ಹೇಳುವುದರಲ್ಲಿ ಏನೂ ಅರ್ಥವಿಲ್ಲ. ಆದರಿಂದ ಮೂಲ ವಿಷಯಕ್ಕೇ ನಾವು ಕೊಡಲಿ ಪೆಟ್ಟು ಕೊಟ್ಟಂತೆ ಆಗುತ್ತದೆ, ಈ ವಿಷಯವನ್ನು ಮಾನ್ಯಸದಸ್ಯರೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು, ಇದು ಒಂದು ವಿಷಯ.

ಸ್ವಾಮಿ, ನಾನು ಮಾತನಾಡುವುದಕ್ಕೆ ಇನ್ನೂ ಒಂದು ಕಾರಣವೇನೆಂದರೆ ವಿರೋಧ ಪಕ್ಷದಿಂದ ಈಚೆಗೆ ಆಳುವ ಪಕ್ಷಕ್ಕೆ ಹೋಗಿ ಕುಳಿತಂತಹ ಹೊಳೇನರಸೀಪುರದ ಸದಸ್ಯರ ಬೆಂಬಲಕ್ಕೆ, ಸಮರ್ಥನೆಗೆ ಏನು ಮುಖ್ಯ ಸಚಿವರು ಹೋದರು ಅದು ನನಗೆ ಅಷ್ಟು ಸಮಂಜಸವಾಗಿ ಕಾಣಲಿಲ್ಲ. ಏಕೆಂದರೆ ತಾವು ಹಿಂದೆ ಎಷ್ಟೋ ಕಳಕಳಿಯಿಂದ ವಾದಮಾಡಿದ್ದೀರಿ. ಆ ವಾದ ಬದಲಾವಣೆ ಮಾಡುವುದಕ್ಕೆ ಇವತ್ತು ವಾಸ್ತವವಾಗಿ ವಿಷಯಗಳೇನೂ ಬೇರೆ ಆಗಿಲ್ಲ, ಕಾವೇರಿ ನದಿ ಹರಿಯುತ್ತಲೇ ಇದೆ. 1924ರ ಒಪ್ಪಂದ ಖಾಯಂ ಆಗಿ ಉಳಿದುಕೊಂಡಿದೆ, 1974ನೇ ಇಸವಿ ಹತ್ತಿರ ಹತ್ತಿರ ಬರುತ್ತಾ ಇದೆ. ಆದಾಗ್ಯೂ ರಾಜ್ಯ ಸರ್ಕಾರ ಆ ಭಾಗದ ಕೆಲವೊಂದು ಜನರ ಮನಸ್ಸನ್ನು ಸಮಧಾನ, ತೃಪ್ತಿಪಡಿಸುವ ಮಟ್ಟಿಗೆ ಈ ಕೆಲಸವನ್ನು ಆರಂಭಿಸಿದ್ದಾರೆಯೇ ಹೊರತು ಒಂದು ವೇಗದಿಂದ ಕೆಲಸ ಮಾಡಿಲ್ಲ ಅನ್ನುವುದಕ್ಕೆ ಮಾನ್ಯ ಚನ್ನಬಸಪ್ಪನವರು ಕೊಟ್ಟಿರತಕ್ಕ ಅಂಕಿಅಂಶಗಳು ಸೂಕ್ತವಾಗಿವೆ. ಅವು ಸರ್ಕಾರದ ಅಂಕಿಅಂಶಗಳೇ, ಚನ್ನಬಸಪ್ಪನವರು ಹುಟ್ಟಿಸಿಕೊಂಡು ಹೇಳಿರತಕ್ಕ ಅಂಕಿಅಂಶಗಳೇನೂ ಅಲ್ಲ. ಒಂದು ಸಲ ಈ ಸಭೆ ಸರ್ವಸಮ್ಮತಿಯಿಂದ ಒಂದು ನಿರ್ಣಯವನ್ನು ಅಂಗೀಕಾರ ಮಾಡಿದ ಮೇಲೆ ಇವತ್ತು ಅಂಥದೇ ನಿರ್ಣಯವನ್ನು ಅಂಗೀಕಾರ ಮಾಡಬೇಕಾದ ಅಗತ್ಯತೆ ಇಲ್ಲ. ಈ ತಿದ್ದುಪಡಿಯಿಂದ ಸರ್ಕಾರಕ್ಕೆ ಸ್ವಲ್ಪ ಉಸಿರಾಡುವ ಸಮಯ ಕೊಡಬಹುದು, ಸರ್ಕಾರವನ್ನು ನಿರ್ಣಯಗಳಿಂದ ಬಂಧಿಸಬಾರದು ಎಂಬುದನ್ನು ನಾನು ಅರ್ಥಮಾಡಿ ಕೊಳ್ಳುತ್ತೇನೆ. ಒಂದು ವಿಷಯವನ್ನು ವಿಷಾದದಿಂದ ಹೇಳಬೇಕಾಗಿದೆ, ಏನೆಂದರೆ ಇಲ್ಲಿ ರಾಜಕೀಯ ಏನೂ ಇಲ್ಲ. ಎರಡು ನಿರ್ಣಯಗಳನ್ನು ಒಟ್ಟಿಗೆ ಜೋಡಿಸುವುದಕ್ಕೆ ಹೋದಾಗ ಏನು ವಿಷಯ ಚರ್ಚೆಗೆ ಬಂತು ಎಂಬುದು ಎಲ್ಲರಿಗೂ ಗೊತ್ತಿದೆ, ದುರದೃಷ್ಟವಶಾತ್ ಇದು ರಾಜಕೀಯದ ರೂಪತಾಳುತ್ತಾ ಇದೆ. ಅದಕ್ಕೇ ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ವಿವರಣಾತ್ಮಕವಾದ ಒಂದು ವರದಿಯನ್ನು ಸಭೆಯ ಮುಂದೆ ಏನು ಇಟ್ಟಿದ್ದಾರೆ ಅದು ಅಷ್ಟು ಒಡಕನ್ನು ಮುಚ್ಚಿಕೊಳ್ಳುವುದಕ್ಕೆ ಸಮರ್ಥವಾಗಿಲ್ಲ, ಅದು ಮತ್ತಷ್ಟು ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ ಎಂದು ನನಗೆ ಭಯ ಇದೆ.

ಈ ರಾಜ್ಯದ ನೀರಾವರಿ ಪ್ರಚ್ಛನ್ನತೆ ಅಂದರೆ ಪೊರ್ಟೆನ್ಷಿಯಾಲಿಟಿ ಶೇಕಡ 24 ಅಥವಾ 25 ಇರಬಹುದೆಂದು ಅಂದಾಜಾಗಿದೆ. ಆ ಶಿವಪ್ಪನಾಯಕನ ಕಾಲದಿಂದ ಆ ವಿಶ್ವೇಶ್ವರಯ್ಯನವರ ಆಡಳಿತದ ಕಾಲದವರೆಗೂ ಇನ್ನಂಥ ಕೆರೆಕಟ್ಟೆಗಳು ಹಾಗೂ ಆ ಮಾರೀಕಣಿವೆ ಕೆರೆ ಇವುಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಂಡರೆ 1947ರಲ್ಲಿ ಅಂದರೆ ದೇಶಕ್ಕೆ ಸ್ವಾತಂತ್ರ್ಯ ಬರುವ ಮುನ್ನ ನಮ್ಮ ಹಳೇ ಮೈಸೂರು ವಿಭಾಗದಲ್ಲಿ ಈ ನೀರಾವರಿ ಬೇಸಾಯ ಸುಮಾರು ಶೇಕಡ ನಾಲ್ಕೂವರೆ ಅಥವಾ ಶೇಕಡ 5 ರಷ್ಟು ಇತ್ತೆಂದು ಹೇಳಬಹುದು. ಅನಂತರ 1956ರ ವೇಳೆಗೆ ಆ ತುಂಗಾಜಲಾಶಯ, ಗೋಕಾಕ್, ಮಲಪ್ರಭ ಮತ್ತು ಘಟಪ್ರಭಾ ಇವುಗಳೆಲ್ಲಾ ಸೇರಿದರೆ ನಮ್ಮ ರಾಜ್ಯದ ನೀರಾವರಿ ವ್ಯವಸಾಯ ಶೇಕಡ ಇರಡೂವರೆಯಷ್ಟು ಇನ್ನೂ ಹೆಚ್ಚಾಯಿತೆಂದು ಹೇಳಬಹುದು. ಅದು ಈ ದಿವಸ ಶೇಕಡ 7.6 ಅಥವಾ 7.8 ಇರಬಹುದು. ಆದರೆ ನಮ್ಮ ಲೆಕ್ಕಗಳಲ್ಲಿ ಶೇಕಡ 8.5 ಎಂತ ಇದೆ. ಆದರೆ ಅದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಜಲಾಶಯ ಪ್ರದೇಶದಲ್ಲಿ ಇವರು ಹೇಳಿರುವಷ್ಟು ಅಚ್ಚುಕಟ್ಟಿಗೆ ನೀರು ದೊರೆಯುತ್ತಿಲ್ಲ. ನೂಗೂ ಪ್ರಾಜೆಕ್ಟಿನ ಕೆಳಗೆ ಈ ದಿವಸ 3 ಲಕ್ಷ ಎಕರೆಗೆ ನೀರು ಸಿಗುತ್ತದೆ ಎಂತ ಇದೆ. ಅವರೆ ಅಷ್ಟಕ್ಕೂ ನೀರು ದೊರೆಯುತ್ತಿಲ್ಲ. ಹಾಗೇ ಮಾರಿಕಣಿವೆ ಕೆಳಗೆ ಆ ಹಿರಿಯೂರು ತಾಲ್ಲೂಕಿನಲ್ಲಿ ಇಷ್ಟು ಸಾವಿರ ಎಕರೆ ನೀರಾವರಿ ಎಂದೇನು ಬರೆದುಕೊಂಡಿದ್ದಾರೆ ಅದರಲ್ಲಿ ನೀರಿಲ್ಲದೆ ಒಣಗತಕ್ಕ ಪ್ರದೇಶ ನೂರಾರೆಕರೆಗಳಷ್ಟಿದೆ. ಹೀಗೆ ನೀರು ಸರಬರಾಯಿ ಆಗದೆ ಇರತಕ್ಕ ಜಮೀನುಗಳನ್ನು ಕೈಬಿಟ್ಟುಕೊಂಡರೆ ನಮ್ಮಲ್ಲಿ ಖಚಿತವಾಗಿ ನೀರಾವರಿ ಸಾಗುವಳಿಯಲ್ಲಿರತಕ್ಕ ಪ್ರದೇಶ ಶೇಕಡ 8 ರಷ್ಟು ಇದ್ದರೆ ಹೆಚ್ಚಾಯಿತು. ಇದು ನಾವು 1940 ರಿಂದಲೂ ಸಾಧಿಸಿರತಕ್ಕ ಪ್ರಗತಿ. ಇದು 29 ವರ್ಷಗಳ ಸಾಧನೆ. ಈ ಅವಧಿಯಲ್ಲಿ ನಡೆದ ಆಗುಹೋಗುಗಳ ಬಗ್ಗೆ ಯಾವ ಒಂದು ಮಂತ್ರಿಮಂಡಲವನ್ನೂ ಆಪಾದನೆ ಮಾಡತಕ್ಕ ವಿಷಯವಲ್ಲ ಇದು. ಶ್ರೀಮಾನ್ ಎಚ್.ಎಂ. ಚನ್ನಬಸಪ್ಪನವರೂ ಕೂಡ ಹಿಂದೆ ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿದ್ದರು. ಅವರು ಆಗಿನ ಕಾಲದಲ್ಲಿ ಆ ಶರಾವತಿ ಅಣೆಕಟ್ಟನ್ನು ಕಟ್ಟತಕ್ಕ ವಿಚಾರದಲ್ಲಿ ಅಲ್ಲಿ ಮೊದಲಿನ ರೇಟನ್ನು

(ಶ್ರೀ ಎಸ್. ಗೋಪಾಲಗೌಡ)

ಬದಲಾವಣೆ ಮಾಡಿದರು. ಆ ವೇಳೆಯಲ್ಲಿ ನಾನು ಕೂಡ ಅಲ್ಲಿ ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಅನುಕೂಲಮಾಡಲು ಆ ಕೆಲಸಗಳಿಗೆ 12 ಕೋಟಿ ರೂಪಾಯಿಗಳನ್ನು ಅಂದಾಜು ಮಾಡಿದ್ದಾರೆ ಎಂದು ಟೀಕೆ ಮಾಡಿದ್ದೇನೆ. ಕಾರಣ ಆ ದಿವಸ ನನಗೆ ಅದು ಬಹಳ ದುಬಾರಿ ವೆಚ್ಚ ಅನಿಸಿತ್ತು. ಆ ದಿವಸ ಶ್ರೀಮಾನ್ ಚನ್ನಬಸಪ್ಪನವರು ಹಾಗೆ ಆ ಒಂದು ಬದಲಾವಣೆಯನ್ನು ಮಾಡಿ ಕೆಲಸವನ್ನು ತ್ವರಿತವಾಗಿ ಮುಂದುವರಿಸದೆ ಹೋಗಿದ್ದರೆ ಇಷ್ಟು ಬೇಗ ಆ ಕೆಲಸಗಳನ್ನು ಮುಗಿಸುವುದಕ್ಕೆ ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಸಾಧ್ಯವಾಗುತ್ತಿರಲಿಲ್ಲ ಎಂದು ಈಗ ನನಗೆ ಅನಿಸುತ್ತಿದೆ. ನೀರಾವರಿ ಯೋಜನೆಗಳ ವಿಚಾರದಲ್ಲಿ ನಾವು ಸಾಕಷ್ಟು ಪ್ರಗತಿಯನ್ನು ಸಾಧಿಸದಿರುವುದಕ್ಕೆ ನಾನು ಆ ಶ್ರೀಮಾನ್ ಕೆ. ಸಿ. ರೆಡ್ಡಿಯವರ ಮಂತ್ರಿಮಂಡಲದಿಂದ ಹಿಡಿದು ಶ್ರೀಮಾನ್ ವೀರೇಂದ್ರ ಪಾಟೀಲರ ಮಂತ್ರಿಮಂಡಲದವರೆಗೂ ಅಂದರೆ ಎಲ್ಲರ ಮೇಲೂ ಇದೇ ನನ್ನ ಆಪಾದನೆ. ಆಡಳಿತ ಪಕ್ಷದವರು ಈ ವಿಚಾರದಲ್ಲಿ ಇಷ್ಟು ಮಂದಗತಿಯಿಂದ ಮತ್ತು ಅಶ್ರದ್ಧೆಯಿಂದ ಕೆಲಸಮಾಡಬಾರದಾಗಿತ್ತು. ಈ ಅಶ್ರದ್ಧೆಯಿಂದ ರಾಜ್ಯದಲ್ಲಿ ಇನ್ನೂ ಅನೇಕ ಭಾಗಗಳು ಕ್ಷಾಮಪ್ರದೇಶಗಳಾಗೇ ಉಳಿದಿವೆ. ಇನ್ನು ಕೆಲವು ಕಡೆ ಮಳೆ ಅಧಿಕವಾಗಿ ಬಿದ್ದು ಇನ್ನು ಕೆಲವು ಕಡೆ ಮಳೆ ಕಡಮೆಯಾಗಿ ಬಿದ್ದು ಹೀಗೆ ಅತಿವೃಷ್ಟಿ ಅನಾವೃಷ್ಟಿಗಳಿಂದಲೂ ನಮ್ಮ ರಾಜ್ಯದಲ್ಲಿ ಕ್ಷಾಮಪ್ರದೇಶವನ್ನು ಅನೇಕ ಕಡೆಗಳಲ್ಲಿ ಕಾಣಬಹುದು. ನಾವು ನಮ್ಮ ರಾಜ್ಯದಲ್ಲಿ ಎಲ್ಲಿಯವರೆಗೆ ನೀರಾವರಿ ಸೌಲಭ್ಯಗಳನ್ನು ಸುಮಾರು ಎರಡೂವರೆಕೋಟಿ ಎಕರೆಗೆ ಒದಗಿಸುವುದಿಲ್ಲ ಅಲ್ಲಿಯವರೆಗೂ ನಮಗೆ 6 ಲಕ್ಷ ಟನ್ ಆಹಾರದ ಕೊರತೆ ತಪ್ಪುವುದಿಲ್ಲ; ಕೊರತೆ ಇದ್ದೇ ಇರುತ್ತದೆ. ಈ ದೃಷ್ಟಿಯಿಂದ ರಾಜ್ಯದ ಹಾಗೂ ರಾಷ್ಟ್ರದ ಹಿತದೃಷ್ಟಿಯಿಂದ ಈ ಅಭಿವೃದ್ಧಿ ಕಾರ್ಯಗಳು ಅತ್ಯವಶ್ಯಕವಾದವುಗಳಾಗಿವೆ. ಆದರೆ ನಾನು ಈ ದಿವಸ ಆ ಆಂಧ್ರ ಬೇರೆ, ಮದ್ರಾಸ್ ಬೇರೆ ಮತ್ತು ಆ ಕೇರಳವೇ ಬೇರೆ ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಕೆಲವು ರಾಜ್ಯಗಳಲ್ಲಿ ನೀರಾವರಿಗೆ ಆದ್ಯತೆಯನ್ನು ಕೊಟ್ಟು ಅಲ್ಲಿ ಅನೇಕ ದೊಡ್ಡ ದೊಡ್ಡ ಜಲಾಶಯಗಳನ್ನು ನಿರ್ಮಾಣಮಾಡಿದ್ದಾರೆ. ಆಂಧ್ರದಲ್ಲಿ ನಾಗಾರ್ಜುನಸಾಗರ, ಮದ್ರಾಸಿನಲ್ಲಿ ಭವಾನಿ ಇತ್ಯಾದಿ ಕೆಲವು ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಕಾರ್ಯಗತವಾಗಿವೆ. ಹೀಗೆ ಇನ್ನೂ ಅನೇಕ ದೊಡ್ಡ ದೊಡ್ಡ ಕೆರೆಗಳನ್ನು ಅಲ್ಲಿ ನಿರ್ಮಾಣಮಾಡಿದ್ದಾರೆ. ಅದಕ್ಕೆ ನಾವು ಅವರನ್ನು ಮೆಚ್ಚಬೇಕು. ಅದು ರಾಷ್ಟ್ರದ ಹಿತದೃಷ್ಟಿಯಿಂದ ಅಗತ್ಯ. ಈ ಹಿಂದೆ ಆ ಗುಲ್ ಹಾತಿ ಕಮಿಷನ್ನಿನವರು ನೀರು ಒಂದು ಪ್ರಕೃತಿ ಸಂಪತ್ತು. ಅದನ್ನು ಯಾವ ಯಾವ ರಾಜ್ಯದವರು ಎಷ್ಟೆಷ್ಟರಮಟ್ಟಿಗೆ ಉಪಯೋಗ ಮಾಡಿಕೊಳ್ಳುತ್ತಾರೋ ಆ ರಾಜ್ಯಗಳು ಅಷ್ಟರಮಟ್ಟಿಗೆ ಉತ್ತಮ ಸ್ಥಿತಿಗೆ ಬರುತ್ತವೆಂದು ಹೇಳಿದ್ದಾರೆ. ಈ ಒಂದಂಶವನ್ನು ನಾವು ಮರೆಯಬಾರದು. ಆದ್ದರಿಂದ ಈ ನೀರನ್ನು ಬಳಸತಕ್ಕ ವಿಚಾರದಲ್ಲಿ ಶ್ರೀಮಾನ್ ವೀರೇಂದ್ರಪಾಟೀಲರೂ ಮತ್ತು ಶ್ರೀಮಾನ್ ಎಚ್. ಎಂ ಚನ್ನಬಸಪ್ಪನವರೂ ಇಬ್ಬರೂ ಸೇರಿ ಒಂದು ಒಡಂಬಡಿಕೆಗೆ ಬರಬೇಕು. ಕಳೆದ 20 ವರ್ಷಗಳಲ್ಲಿ ಆದದ್ದನ್ನು ನೆನೆಸಿಕೊಂಡರೆ ಪಶ್ಚಾತ್ತಾಪ ಪಡಬಹುದು ; ಅದು ಗತಜಲಸೇತುಬಂಧನ ಆಗುತ್ತದೆ. ಆದರೆ ಈ ನೀರಿನ ಸಮಸ್ಯೆ ಅಂತರರಾಜ್ಯಗಳಿಗೆ ಸಂಬಂಧಪಟ್ಟಿದ್ದು. ಇದೇ ಮನೆಯಲ್ಲಿ ಆ ಕೃಷ್ಣಾ ಗೋದಾವರಿ ನದಿಗಳ ನೀರಿನ ಬಗ್ಗೆ ಚರ್ಚೆ ನಡೆದಾಗ ಇತ್ತಕಡೆ ಇದ್ದ ಶ್ರೀಮಾನ್ ಚನ್ನಬಸಪ್ಪನವರಾದಿಯಾಗಿ ನಾನೂ ಮತ್ತು ಇನ್ನೂ ಅನೇಕ ಮಾನ್ಯ ಸದಸ್ಯರುಗಳು ಈ ವಿಚಾರದಲ್ಲಿ ಸರ್ಕಾರದವರು ಬಹಳ ಎಚ್ಚರಿಕೆಯಿಂದ ಕಾರ್ಯ ಕೈಗೊಳ್ಳಬೇಕು ಮತ್ತು ಈ ವಿಚಾರದಲ್ಲಿ ಟ್ರೈಬುನಲ್ಲಿಗೂ ಹೋಗುವುದಕ್ಕೆ ನಮ್ಮ ಸರ್ಕಾರ ಸಿದ್ಧವಾಗಿರಬೇಕು ಎಂದು ಹೇಳಿದ್ದಲ್ಲದೆ, ಅವರು ಆ ಅಡಾಕ್ ನೀರನ್ನು ಬಳಸುವುದಕ್ಕೆ ಬಹಳ ವಿಷಾದವನ್ನು ಇಲ್ಲಿ ವ್ಯಕ್ತಪಡಿಸಿದ್ದೇವೆ. ಇನ್ನು ಕಾವೇರಿಯ ನೀರಿನ ವಿಚಾರದಲ್ಲಿ ಇವರು ಕಂಡುಹಿಡಿದಿದ್ದ ಸ್ಕೀಮನ್ನು ಕಾರ್ಯಗತ ಮಾಡಿದರೆ ಅಲ್ಲಿ ಅನೇಕ ಪ್ಲಾಂಟೇಷನ್‌ಗಳು ಮುಳುಗಡೆಯಾಗುತ್ತವೆಂದು ಇಲ್ಲಿ ಕೆಲಸ ನಿಧಾನವಾಯಿತು. ಆದರೆ ಈ ವಿಷಯ ಎಷ್ಟು ಗಹನವಾದದ್ದೋ ಅಷ್ಟೇ ಗಂಭೀರವೂ ಆದುದ್ದು. ಇದನ್ನು ಚರ್ಚೆಮಾಡಿ ಎಲ್ಲರೂ ಒಂದು ಸೂಕ್ತ ನಿರ್ಣಯಕ್ಕೆ ಬರಬೇಕು ಎಂದು ನಾನು ಎಲ್ಲರಲ್ಲೂ ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ. ಆದರೆ ಕಾವೇರಿನದೀ ನೀರನ್ನು ಬಳಸತಕ್ಕ ವಿಚಾರದಲ್ಲಿ ಶ್ರೀಮಾನ್ ಚನ್ನಬಸಪ್ಪನವರ ನಿಲುವೂ ಮತ್ತು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರ ನಿಲುವೂ ಎರಡೂ ಸ್ವಲ್ಪ ಹೆಚ್ಚುಕಡಮೆ ಒಂದೇ ಆಗಿವೆ. ಮುಖ್ಯಮಂತ್ರಿಯವರು ಮತ್ತು ನಾನು ಆ ಕೃಷ್ಣಾ ಜಲಾಶಯ ಭೂಮಿಯವರು. ಶ್ರೀಮಾನ್ ಚನ್ನಬಸಪ್ಪನವರು ಕಾವೇರಿ ಜಲಾನಯನ ಪ್ರದೇಶದವರು. ಆದರೆ ಇದನ್ನು ಯಾರೂ ವೈಯಕ್ತಿಕ ಪ್ರಶ್ನೆಯನ್ನಾಗಿ ಮಾಡಿಕೊಳ್ಳಬಾರದು. ಒಟ್ಟು ರಾಜ್ಯದ ಹಿತದೃಷ್ಟಿಯಿಂದ ನಾವು ಈ ಕೆಲಸವನ್ನು ತ್ವರಿತಗೊಳಿಸಬೇಕು. ಒಂದು ಆತಂಕಕಾರಿ ವಿಷಯವೆಂದರೆ, ಕಾವೇರಿ ನದಿ ವಿವಾದ ಹಿಂದೆ ಬಂದಾಗ್ಗೆ ಮೈಸೂರು ಸಂಸ್ಥಾನವಾಗಿದ್ದಾಗ

ಮದ್ರಾಸ್, ಆಂಧ್ರ ಒಟ್ಟು ಇತ್ತು. ಆ ಪ್ರಾಂತ್ಯಗಳು ಬ್ರಿಟೀಷರ ನೇರ ಆಡಳಿತದಲ್ಲಿದ್ದಾಗ ದಿವಂಗತ ವಿಶ್ವೇಶ್ವರಯ್ಯನವರು ಮೈಸೂರು ಪರವಾಗಿ ಆ ಒಪ್ಪಂದಕ್ಕೆ ರುಜು ಹಾಕಿದ್ದರು. ರಾಜ್ಯ ವಿಸ್ತಾರವಾದಮೇಲೆ ಕೊಡಗು ಮತ್ತು ಕೊಳ್ಳೇಗಾಲ ಇಲ್ಲಿಗೆ ಸೇರಿದ ಮೇಲೆ ಆ ಒಂದು ಒಪ್ಪಂದದಲ್ಲಿ ವ್ಯತ್ಯಾಸ ಆಗಬೇಕಾದುದು ನ್ಯಾಯ. ಈಗಾಗಲೇ ಅವರು ಉದಹರಿಸಿರತಕ್ಕ ವರದಿಗಳು ಏನಿವೆಯೋ ಅವುಗಳ ಬಗ್ಗೆ ಹಾಗೂ ತಾಂತ್ರಿಕ ತಜ್ಞರ ಹೇಳಿಕೆಗಳ ಬಗ್ಗೆ ನಾವು ಬಹಳ ಎಚ್ಚರಿಕೆಯಿಂದ ಕಾರ್ಯೋನ್ಮುಖರಾಗಬೇಕು. ಈಗ ಒಂದು ದೊಡ್ಡ ತೊಡಕು ಎಂದರೆ ಹಣಕಾಸಿನ ತೊಂದರೆ. ಈಗಾಗಲೇ ಒಂದು, ಎರಡು, ಮೂರನೇ ಯೋಜನೆಗಳನ್ನು ಮುಗಿಸಿದ್ದೇವೆ. 4ನೇ ಯೋಜನೆಗೆ ಕಾಲಿಟ್ಟಿದ್ದೇವೆ. ಈ ಮೂರು ಯೋಜನೆಗಳಲ್ಲಿ ಕಾವೇರಿ ಜಲಾನಯನದಲ್ಲಿ ಆಗತಕ್ಕ ಅಣೆಕಟ್ಟುಗಳಿಗೆ ವರ್ಷಕ್ಕೆ ಎರಡೆರಡು ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ, ಈ 20 ವರ್ಷಗಳಲ್ಲಿ 40 ಕೋಟಿ ರೂಪಾಯಿಗಳಷ್ಟು ಅಣೆಕಟ್ಟುಗಳಾಗಿ ಲಕ್ಷಾಂತರ ರೂಪಾಯಿಗಳಷ್ಟು ಜಮೀನು ಆಬಾದು ಆಗುತ್ತಿತ್ತು. ಇದರಿಂದ ಚನ್ನಬಸಪ್ಪನವರ ಕ್ಷೇತ್ರವಾದ ಪೆರಿಯಾಪಟ್ಟಣ ಮತ್ತು ಶ್ರೀ ದೇವರಾಜ ಅರಸ್ ಅವರ ಕ್ಷೇತ್ರವಾದ ಹುಣಸೂರುಗಳಲ್ಲಿ ಜಮೀನು ಸಾಗುವಳಿ ಇನ್ನೂ ಚೆನ್ನಾಗಿ ಆಗುತ್ತಿತ್ತು. ಆ ರೀತಿ ನಾನು ವೈಯುಕ್ತಿಕವಾಗಿ ವಾದ ಮಾಡುತ್ತಾ ಇಲ್ಲ. ನಾನು ಯಾವಾಗಲೂ ವಾದ ಮಾಡುವವನೇ. ವೈಯುಕ್ತಿಕವಾಗಿ ಸ್ವಾರ್ಥ ದೃಷ್ಟಿಯಿಂದ ಅವರು ಈ ವಾದವನ್ನು ಮಾಡುತ್ತಾ ಇದ್ದಾರೆಂದು ನಾನು ಹೇಳುತ್ತಾ ಇಲ್ಲ. ಈ 2 ಕೋಟಿ ರೂಪಾಯಿಗಳನ್ನು ಕಾವೇರಿ ಜಲಾನಯನದ ಯೋಜನೆಗಳಿಗೆ ಕೊಡುವುದಕ್ಕೆ ಆಗುತ್ತಿರಲಿಲ್ಲವೆಂದು ಸುಮ್ಮನೆ ಹೇಳುವುದು ಸರಿಯಲ್ಲ. ಬಜೆಟ್ಟನ್ನು ತಯಾರು ಮಾಡುವ ಕಾಲದಲ್ಲಿ ಹಣಕಾಸಿನ ಇಲಾಖೆಯ ಅಧಿಕಾರಿ ಅಷ್ಟು ಹಣವನ್ನು ಇದಕ್ಕಾಗಿ ಪ್ರೊವೈಡ್ ಮಾಡಬಹುದಾಗಿತ್ತು. ಇನ್ನೊಂದು ವಿಷಾದ ಸಂಗತಿ ಅಂದರೆ ಕೆಲವು ಐಟಂಗಳಲ್ಲಿ ಹಣ ಖರ್ಚು ಮಾಡದೇ ಇರುವುದನ್ನೂ ಸಹ ಬಜೆಟ್ಟಿನಲ್ಲಿ ಸೇರಿಸಿದ್ದಾರೆ. ಇದರಿಂದ ಎಷ್ಟುಮಟ್ಟಿಗೆ ರಾಜ್ಯದ ಹಿತಕ್ಕೆ ಧಕ್ಕೆ ಬಂದಿದೆ ಎನ್ನುವುದನ್ನು ಎಲ್ಲರೂ ಒಪ್ಪಬೇಕು. ಅಂಥಾದ್ದಕ್ಕೆ ಖಂಡಿತವಾಗಿ ಎಡೆಕೊಡಕೂಡದು. ಇದಕ್ಕಾಗಿ ಸಂಪನ್ಮೂಲಗಳನ್ನು ಹುಡುಕಿಕೊಡಿ ಎಂದು ಹೇಳುತ್ತಿದ್ದಾರೆ. ನಾನು ಸಂಪನ್ಮೂಲಗಳನ್ನು ಹುಡುಕುವ ಸಮಿತಿಯಲ್ಲಿದ್ದರೂ ಅದು ಬಹಳ ಸುಲಭಸಾಧ್ಯವಾದ ಕೆಲಸವಲ್ಲ. ಇದನ್ನು ಪುನರ್ವಿಮರ್ಶೆ ಮಾಡುವುದಕ್ಕೆ ಒಂದು ಸಮಿತಿ ಈಗಾಗಲೇ ಬೇರೆ ಕಡೆ ಕೂತು ಕೆಲಸಮಾಡುತ್ತಿದೆ. ಈಗ ಹೊಸ ತೆರಿಗೆ ಬೇರೆ ಹಾಕಿದ್ದಾರೆ. ನಮ್ಮ ಮೈಮೇಲೆ ತೆರಿಗೆ ಹಾಕಲು ಜಾಗವೇ ಉಳಿದಿಲ್ಲ. ಅಂದರೆ ಮನುಷ್ಯನ ಎಲ್ಲಾ ಭಾಗದ ಮೇಲೂ ತೆರಿಗೆ ಹಾಕಿದೆ. ಆದ್ದರಿಂದ ಸಂಪತ್ತು ಎಲ್ಲಿದೆಯೆಂಬುದನ್ನು ಪುನರ್ವಿಮರ್ಶೆ ಮಾಡಬೇಕು. ತೆರಿಗೆ ಕೊಡುವ ಶಕ್ತಿ ಯಾರಿಗೆ ಇದೆಯೋ ಅವರು ಬೇಸಾಯಗಾರರೋ ವ್ಯಾಪಾರಸ್ಥರೋ, ಅಥವಾ ರಾಜಕಾರಣಿಗಳೋ ಅಥವಾ ರಾಜರೋ ನನಗೆ ಗೊತ್ತಿಲ್ಲ. ಸಮಾಜವಾದ ತರಬೇಕೆಂದರೆ, ಅದು ಬಾಯಿಮಾತು ಕೆಲಸ ಅಲ್ಲ, ಸಂಪತ್ತು ಇದ್ದವರ ಹತ್ತಿರ ತೆಗೆದುಕೊಂಡು ಅದನ್ನು ಬಡವರಿಗೆ ಹಂಚಬೇಕಾಗುತ್ತದೆ. ಅದಕ್ಕಾಗಿ ಬಹಳ ವರ್ಷಗಳವರೆಗೂ ಕಾಯುವುದಕ್ಕಾಗುವುದಿಲ್ಲ. ಇಲ್ಲದಿದ್ದರೆ ಇದ್ದವರಿಂದ ಇಲ್ಲದೇ ಇರುವವರು ಬಂದಷ್ಟು ಹಣವನ್ನು ಕಿತ್ತುಕೊಂಡು ಒಂದು ದೊಡ್ಡ ರಣರಂಗವಾಗಿ ಆಮೇಲೆ ರಕ್ತ ಕ್ರಾಂತಿಗೆ ಗುರಿಯಾಗುತ್ತದೆ. ಅದು ಆಗಬಾರದು. ಈ ವಿಚಾರವನ್ನು ಸಂಪನ್ಮೂಲ ಸಮಿತಿಯಲ್ಲಿ ನಾವು ಚರ್ಚೆಮಾಡಿದ್ದೇವೆ. ಆದರೆ ಮಾನ್ಯ ಶ್ರೀ ಚನ್ನಬಸಪ್ಪನವರು ಕೇಳಿದ ಹಾಗೆ ಇದೇ ವರ್ಷ 30 ಕೋಟಿ ರೂಪಾಯಿಗಳನ್ನು ಒಂದೇಸಾರಿ ತೆಗೆದಿಡುವುದು ಬಹಳ ಕಷ್ಟವಿದೆ. ಈಗಾಗಲೇ ಬಜೆಟ್ ತಯಾರಾಗಿದೆ. ಯಾವಾಗಲೂ ಸಚಿವರೇ ಆಗಲೀ, ಯಾವ ಇಲಾಖೆಯ ಮುಖ್ಯಾಧಿಕಾರಿಗಳೇ ಆಗಲೀ ಕೋಟಿಗಟ್ಟಲೆ ರೂಪಾಯಿಗಳನ್ನು ಉಳಿಸುವುದಕ್ಕೆ ತಯಾರು ಇಲ್ಲ. ಎಲ್ಲಾ ಇಲಾಖೆಗಳೂ ಒಟ್ಟು ಸೇರಿ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಉಳಿಸಬಹುದು. ಆದರೆ ಪೆನ್ಸಿಲ್ ಕೊಂಡುಕೊಳ್ಳುವುದು ಬೇಡವೆಂದು ಹೇಳಿ ಈ ತರಹ ಉಳಿತಾಯ ಮಾಡಿ ಉಳಿಸುವುದಕ್ಕೆ ಸಾಧ್ಯವಿಲ್ಲ. ನಾವು ಈ ವಿಷಯವನ್ನು ಗಂಭೀರವಾಗಿ ಚರ್ಚೆಮಾಡಬೇಕೆಂದು ಈ ತಿಂಗಳಲ್ಲಿ ಒಂದು ಸಭೆಯನ್ನು ಹಣಕಾಸಿನ ಸಚಿವರು ಕರೆದಿದ್ದಾರೆ. ಈ ವರ್ಷ ಅದೃಷ್ಟವಶಾತ್ ಅಬ್ಕಾರಿ ಇಲಾಖೆಯಿಂದ ಆರೇಳು ಕೋಟಿ ರೂಪಾಯಿಗಳು ಬಂದಿವೆ. ಅದೇ ರೀತಿಯಲ್ಲಿ ಸೇಲ್ಸ್‌ಟ್ಯಾಕ್ಸ್‌ಗಳಲ್ಲಿಯೂ ಕೂಡ ಎಂಟುಹತ್ತು ಕೋಟಿ ರೂಪಾಯಿಗಳು ನಿರೀಕ್ಷಿಸಿದ್ದಕ್ಕಿಂಲೂ ಜಾಸ್ತಿಯಾಗಿಯೇ ಬಂದಿದೆ. ಎಲ್ಲವನ್ನೂ ವಸೂಲುಮಾಡಿದರೆ ಇನ್ನೂ ಜಾಸ್ತಿ ಬರುತ್ತದೆ. ಅದನ್ನೆಲ್ಲಾ ನಾನು ವಿವರವಾಗಿ ಇಲ್ಲಿ ಹೇಳುವುದಿಲ್ಲ. ಫೈನಾನ್ಸ್ ಕಮಿಷನ್ನಿನವರು ನಿಮಗೆ ಎಚ್ಚರಿಕೆ ಕೊಟ್ಟಿದ್ದಾರೆ. ಅವರ ಬಗ್ಗೆ ನಾನು ದೂರುವುದಿಲ್ಲ. ನಮ್ಮ ಪರ್ ಕ್ಯಾಪಿಟಾ ಇನ್‌ಕಂ ಜಾಸ್ತಿ ಇದೆ ಎಂದು ಹೇಳಿ ಮತ್ತು ನಮಗೆ ಹೊಟ್ಟೆಗೆ ಇಲ್ಲವೆಂದು ಹೇಳಿದರೆ ಯಾರು ಕೇಳುತ್ತಾರೆ. ಈಗ ತುಕೋಳ್ ಕಮಿಷನ್ ಶಿಫಾರಸುಗಳನ್ನು ಬೇರೆ ಜಾರಿಮಾಡಬೇಕಾಗಿದೆ. ಅದಕ್ಕೆ ಹೆಚ್ಚಿನ ಹಣ ಬೇಕಾಗಿದೆ. ನೀರಾವರಿ ಸೌಲಭ್ಯಗಳಿಗೆ ಹಣ ಬೇಕು. ಹಣದ ಕೊರತೆಯೇನೋ ಈ ರಾಜ್ಯಕ್ಕಿದೆ.

(ಶ್ರೀ ಎಸ್. ಗೋಪಾಲಗೌಡ)

ಆ ಒಂದು ದೃಷ್ಟಿಯಿಂದ ಶ್ರೀ ತ್ಯಾಗಿಯವರ ಹತ್ತಿರ, ಪ್ರಧಾನಮಂತ್ರಿಗಳ ಹತ್ತಿರ ಹೋಗೋಣ. ರಾಷ್ಟ್ರಾಧ್ಯಕ್ಷರು ಬೇರೆ ಬರುತ್ತಾರೆ. ಭಿಕ್ಷೆ ಬೇಡೋಣ. ವಿರೋಧಪಕ್ಷದವರ ಸಹಾಯವನ್ನೂ ಸಹ ಕೇಳೋಣ. ಸಾಲ ಮಾಡುವುದರಲ್ಲಿ ತಪ್ಪಿಲ್ಲ. ಒಟ್ಟಿನಲ್ಲಿ ಯಾವ್ಯಾವ ಮೂಲಗಳಿಂದ ಹಣವನ್ನು ಒದಗಿಸಬೇಕೆಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿಗೆ ಪ್ರಯತ್ನಮಾಡಬೇಕು. ಮಾನ್ಯ ಶ್ರೀ ಡಿ.ಎಂ. ಸಿದ್ದಯ್ಯನವರು ಈ ನಿರ್ಣಯಕ್ಕೆ ಏಕೆ ತಿದ್ದುಪಡಿಕೊಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಅವರಿಗೂ, ಇವರಿಗೂ ವಿರೋಧವೇನಾದರೂ ಇದೆಯೇ ?

ಶ್ರೀ ಡಿ. ಎಂ. ಸಿದ್ದಯ್ಯ.—ಸ್ವಲ್ಪ ಲ್ಯಾಟಿಟ್ಯೂಡ್ ಇರಲಿ ಎಂಬ ಒಂದು ಉದ್ದೇಶದಿಂದ ಆ ರೀತಿ ಮಾಡಿರುವುದು.

8-00 P. M.

ಶ್ರೀ ಎಸ್. ಗೋಪಾಲಗೌಡ.—ಈಗ ಲ್ಯಾಟಿಟ್ಯೂಡ್ ಕೊಡುವುದಕ್ಕೆ ತಿದ್ದುಪಡಿ ಬೇಕಾದರೂ ತರಬಹುದು. ಸರ್ಕಾರದವರನ್ನು ಶಬ್ದಗಳಿಂದ, ಕಾಲದಿಂದ, ಹಣದ ಬಗ್ಗೆ ಬಂಧಿಸಬೇಕೆಂದು ಅಥವಾ ಅವರ ಕೈಕಾಲು ಕಟ್ಟಿಹಾಕಬೇಕೆಂದು ಹೇಳುವ ಮಾತಿಗೆ ಒಪ್ಪಿಗೆ ಕೊಡುವುದಿಲ್ಲ. ಆದರೆ ಸ್ಪಷ್ಟವಾಗಿ ಈ ನಿರ್ಣಯವನ್ನು ಸಭೆ ಅಂಗೀಕಾರ ಮಾಡದಿದ್ದರೆ, ಸರ್ಕಾರ ಬಗ್ಗುವುದಿಲ್ಲ, ಮಣಿಯುವುದಿಲ್ಲ, ಮತ್ತು ತೀವ್ರಗತಿಯಿಂದ ಸಾಗುವುದಿಲ್ಲ ಎನ್ನುವ ಒಂದು ತೀವ್ರತೆಯು ಈ ನಿರ್ಣಯಯದಲ್ಲಿ ಇರುತ್ತದೆಯೇ ಹೊರತು, ಬೇರೇನೂ ಅಲ್ಲ. ನಾನ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಎರಡು ನಿರ್ಣಯಗಳು ಅಭಾಸವಾಗದ ರೀತಿಯಲ್ಲಿ, ಹೊಂದಾಣಿಕೆ ಮಾಡಿ, ಈ ಸಭೆಯಲ್ಲಿ ಹಿಂದೆ ಯಾವ ರೀತಿಯಲ್ಲಿ ಸರ್ವಾನುಮತದಿಂದ ನಿರ್ಣಯ ಆಗಿತ್ತೋ, ಹಾಗೆ ಸರ್ವಾನುಮತದಿಂದ ನಿರ್ಣಯ ಆದರೆ, ಕೇವಲ ಕಾವೇರಿ ಜಲಾನಯನದಲ್ಲಿರತಕ್ಕ ಭೂಮಿಯ ಜನರಿಗೆ ಮಾತ್ರವಲ್ಲ, ಅದರ ಹೊರಗೆ ಇರತಕ್ಕ ಜನರಿಗೂ ಸಂತೋಷವಾಗುತ್ತದೆ ಮತ್ತು ಅದರಿಂದ ರಾಷ್ಟ್ರದ ಹಿತವನ್ನು ಕಾಪಾಡಿದಂತಾಗುತ್ತದೆಂದು ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್.—ಸನ್ಮಾನ್ಯ ಸಭಾಧ್ಯಕ್ಷರೇ, ಮತ್ತೊಂದು ಸಲ ಕಾವೇರಿ ನದಿಯ ಜಲಾನಯನದಲ್ಲಿರುವ ಯೋಜನೆಗಳನ್ನು ಕಾರ್ಯಗತ ಮಾಡುವುದರ ಬಗ್ಗೆ ಈ ಮನೆಯಲ್ಲಿ ಚರ್ಚೆ ಪ್ರಾರಂಭವಾಗಿದೆ. ಈ ಚರ್ಚೆ ಇಲ್ಲಿ ಆಗಬೇಕಾದದ್ದು ಇಲ್ಲ, ಅವಶ್ಯಕತೆ ಇಲ್ಲ ಎನ್ನುವಂತಹ ವಿಚಾರವನ್ನು ನಾನು ಇಟ್ಟುಕೊಂಡವನು. ಇದು ಚರ್ಚೆಯಾಗಲಾರದಂತೆ ನೋಡಿಕೊಳ್ಳುವುದಕ್ಕೆ ಸರ್ವ ಪ್ರಯತ್ನಗಳನ್ನು ಮಾಡಿದೆ, ಆದರೂ ಅದು ಸಾಧ್ಯವಾಗಲಿಲ್ಲ. ನಿರ್ಣಯದ ಪ್ರಕಾರ ಚರ್ಚೆ ಆಗಬೇಕೆಂದು ಈಗಾಗಲೇ ಅನೇಕ ಮಾನ್ಯಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನಾದರೂ ತಿಳಿದುಕೊಂಡಿದ್ದೇನೆ, ಏನೆಂದರೆ, ಈ ಕಾವೇರಿ ನೀರಿನ ಉಪಯೋಗದ ಪ್ರಶ್ನೆ ಅಥವಾ ಸಮಸ್ಯೆ, ಇದು ಯಾವುದೇ ಒಂದು ಪಕ್ಷದ ಸಮಸ್ಯೆಯಲ್ಲ, ರಾಜಕೀಯ ಸಮಸ್ಯೆಯಲ್ಲ, ಇದು ಒಂದು ನಮ್ಮ ರಾಜ್ಯದಲ್ಲಿರುವಂತಹ ಎಲ್ಲಾ ಜನರಿಗೆ ಸಂಬಂಧಪಟ್ಟ ಒಂದು ಸಮಸ್ಯೆಯಾಗಿದೆ. ಅದಕ್ಕಾಗಿ ಇದರಲ್ಲಿ ರಾಜಕೀಯ ಬೆರೆಸಬೇಕಾದಂತಹ ಅವಶ್ಯಕತೆ ಇಲ್ಲ ; ಮತ್ತು ರಾಜಕೀಯ ದೃಷ್ಟಿಯಿಂದ ಈ ಒಂದು ಸಮಸ್ಯೆಯನ್ನು ನೋಡಬೇಕಾದಂತಹ ಅವಶ್ಯಕತೆ ಇಲ್ಲ. ಆ ಒಂದು ದೃಷ್ಟಿಯಲ್ಲಿ, ಇವತ್ತಿನ ದಿವಸ ಆದ ಚರ್ಚೆಗೆ ಉತ್ತರವಾಗಿ ಅನೇಕ ವಿಚಾರಗಳನ್ನು ಹೇಳಬೇಕೆನ್ನುವ ಮನಸ್ಸು ನನಗೆ ಇದ್ದರೂ, ಇವತ್ತಿನ ಪರಿಸ್ಥಿತಿಯನ್ನು ಎಲ್ಲಾ ಲೆಕ್ಕಕ್ಕೆ ತೆಗೆದುಕೊಂಡು ಶ್ರೀಮಾನ್ ದೇವೇಗೌಡರು ಯಾವ ಒಂದು ವಿಚಾರವನ್ನು ಹೇಳಿದ್ದಾರೆ ಅದನ್ನು ಕೂಡ ಗಮನದಲ್ಲಿ ಇಟ್ಟುಕೊಂಡು, ನಾನು ಬಹಳ ಜಾಗರೂಕತೆಯಿಂದ, ಬಹಳ ತೂಕದಿಂದ ಉತ್ತರ ಕೊಡಬೇಕಾದ ಪರಿಸ್ಥಿತಿಯಲ್ಲಿ ಇದ್ದೇನೆ. ಆದರಿಂದ ಮಾನ್ಯಸದಸ್ಯರಿಗೆ ಇವತ್ತು ಸರ್ಕಾರದ ಹತ್ತಿರ ಇರುವಂತಹ ಎಲ್ಲಾ ಮಾಹಿತಿಗಳನ್ನು ಬಯಲಿಗೆ ಎಳೆದು ಈ ಸಭೆಯಲ್ಲಿ ಇಡುವುದಕ್ಕಾಗುವುದಿಲ್ಲ. ಬಹುಶಃ ಈ ವಿಚಾರವನ್ನು ಹೇಳಿ ಯಾರ ಮೇಲೂ ದೋಷಾರೋಪ ಮಾಡಬೇಕೆಂದು ಏನೂ ಇಲ್ಲ. ಇಲ್ಲಿ ನಾನು ಕೂತಾಗ, ಹಿಂದಿನ ಪೇಪರುಗಳು ಮತ್ತು ಅಂಕಿಅಂಶಗಳೆನ್ನೆಲ್ಲಾ ನೋಡಿದಾಗ ನನ್ನ ಮನಸ್ಸಿನಲ್ಲಿ ಒಂದು ಭಾವನೆ ಬಂತು. ಶ್ರೀಮಾನ್ ಗೋಪಾಲಗೌಡರು ಅದನ್ನು ಹೇಳಿದ್ದಾರೆ. ಒಂದು ವಿಚಾರ ನನಗೆ ಗೊತ್ತಿಲ್ಲ, ಏನೆಂದರೆ, 1947ರ ಪೂರ್ವದಲ್ಲಿರತಕ್ಕ ವಿಚಾರಗಳನ್ನು ಮಾತನಾಡುವುದಕ್ಕೆ ನಮಗೆ ಅಧಿಕಾರವಿಲ್ಲ. ಏಕೆಂದರೆ ಅವಾಗ ಪ್ರಜಾಪ್ರಭುತ್ವ ಇರಲಿಲ್ಲ ; ಮತ್ತು ರೈತರು ಒತ್ತಾಯ ಮಾಡುತ್ತಲೂ ಇರಲಿಲ್ಲ. ಆದರೆ ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದ ಮೇಲೆ, ಪ್ರಜಾರಾಜ್ಯ ಸ್ಥಾಪನೆಯಾದ ಮೇಲೆ, ಪ್ರಜಾಪ್ರಭುತ್ವದ

ಆಧಾರದ ಮೇಲೆ ಸರ್ಕಾರಗಳು ರಚನೆಯಾದಮೇಲೆ ನಾವು ಏನೇನು ಕೆಲಸಕಾರ್ಯಗಳು ಮಾಡಿದ್ದೇವೆ ಎನ್ನುವುದರ ಬಗ್ಗೆ ಒಂದು ರೀತಿಯ ರಿವ್ಯೂ ಮಾಡುವ ಅವಕಾಶ ನಮಗೆ ಇದೆ. ತಪ್ಪಾಗಿದ್ದರೆ, ತಿದ್ದಿಕೊಳ್ಳುವಂತಹ ಮತ್ತು ಒಪ್ಪಿಕೊಳ್ಳುವಂತಹ ಅವಕಾಶ ನಮಗೆ ಇದೆ. ಒಂದು ವಿಚಾರವೇನೆಂದರೆ, ಕಾವೇರಿ ಅಗ್ರಿಮೆಂಟ್ 1924ರಲ್ಲಿ ಆಗಿದ್ದು 50 ವರ್ಷಗಳಲ್ಲಿ ಅಂದರೆ, 1974ರಲ್ಲಿ ಪೂರ್ತಿಯಾಗುತ್ತದೆ. ಆದರೆ 1924ರಲ್ಲಿ ಆದಂತಹ ಅಗ್ರಿಮೆಂಟ್ ಬಗ್ಗೆ 1947ರವರೆಗೆ ನಾನು ಏನೂ ಹೇಳುವ ಹಾಗೆ ಇಲ್ಲ. ಆದರೆ 1947ರಿಂದ 1956ರವರೆಗೆ ಸಬ್ಜೆಕ್ಟ್ ಟು ಕರೆಕ್ಷನ್, ಕಾವೇರಿ ಬೇಸಿನ್‌ನಲ್ಲಿ ಒಂದು ಪ್ರೊಜೆಕ್ಟ್ ಕೂಡ ತೆಗೆದುಕೊಳ್ಳಲಿಲ್ಲ. ಈ ವಿಚಾರದಲ್ಲಿ ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬಾರದು. ಅದು, ಏನು ಏಕೆ ಎಂದು ಗೊತ್ತಾಗಲಿಲ್ಲ. ಅಧಿಕಾರಿಗಳನ್ನು ಕೇಳಿದರೆ, ಅವರು ಹೇಳುತ್ತಾರೆ, ನಮಗೆ ಗೊತ್ತಿದ್ದಹಾಗೆ, ನುಗು ಪ್ರಾಜೆಕ್ಟ್ 1955-56ರಲ್ಲಿ ಪ್ರಾರಂಭ ಆಗಿದೆ ಎಂದು ಅಷ್ಟೇ ಅಲ್ಲದೆ, ಶೆಡ್ಯೂಲ್ಡ್ ರಿವರ್ಸ್ ಮೇಲೆ ಯಾವ ಒಂದು ಪ್ರಾಜೆಕ್ಟನ್ನು 1947ರಿಂದ 1956ರವರೆಗೆ ತೆಗೆದುಕೊಂಡಿಲ್ಲ. ಆದರೆ ಯಾವುದಾದರೂ, ಅರ್ಧ ಟಿ.ಎಂ.ಸಿ.ಎಫ್ ಟಿ. ಒಂದು ಟಿ.ಎಂ.ಸಿ.ಎಫ್ ಟಿ. ಉಪಯೋಗಿಸಿಕೊಂಡಿರಬಹುದು. ಇದು ಏಕೆ ಹೀಗೆ ಆಯ್ತು ಎಂದು ಗೊತ್ತಾಗಿಲ್ಲ. ನಮ್ಮ ಮಿತ್ರರಾದ ಪುಟ್ಟಸ್ವಾಮಿಯವರು ಹೇಳಿದರು, ಬಹುಶಃ ಕೆ.ಆರ್.ಎಸ್. ಕಮ್ಯಾಂಡ್ ಏರಿಯಾ ಡೆವಲಪ್ ಮಾಡುವುದಕ್ಕೆ, ಇದರಲ್ಲೇ ಎಲ್ಲಾ ಕಾನ್‌ಸೆಂಟ್ರೇಟ್ ಮಾಡಿರಬೇಕು ಎಂಬುದಾಗಿ. ಅದಕ್ಕಾಗಿ ಬೇರೆ ಯಾವ ಪ್ರಾಜೆಕ್ಟ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲವೆನ್ನುವುದು ಅವರ ಅಭಿಪ್ರಾಯ. ಈ ರೀತಿ ಬೇರೆ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಅವಾಗ ಎರಡು ಮೇಜರ್ ಪ್ರಾಜೆಕ್ಟ್ ತೆಗೆದುಕೊಂಡಿದ್ದರು. ಒಂದು ಶರಾವತಿ. ಇನ್ನೊಂದು ಭದ್ರಾ.

ಶ್ರೀ ವೀರೇಂದ್ರ ಪಾಟೀಲ್.—ಪ್ರಾಜೆಕ್ಟ್ ರಿಪೋರ್ಟ್ ತಯಾರಾಗಿರಬಹುದು, ಇನ್‌ವೆಸ್ಟಿಗೇಷನ್ ತಯಾರಾಗಿರಬಹುದು. ಆ ಮಾತು ಬೇರೆ. ಮೊದಲನೆಯದು ಎಸ್.ಕೆ. ಪಾಟೀಲರು 1957ರಲ್ಲಿ ಫೌಂಡೇಷನ್ ಹಾಕಿದ್ದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ಕಾವೇರಿ ಬೇಸಿನ್ನಿನಲ್ಲಿ ಪ್ರಾಜೆಕ್ಟಿಗೆ ಸರಿಯಾದ ಸೈಟ್ಸ್ ದೊರಕಿರಲಿಲ್ಲ. ಸ್ವಲ್ಪ ಸಮಯದ ನಂತರ ನಮಗೆ ಕಂಬದಕಡ ಪ್ರಾಜೆಕ್ಟಿಗೆ ಸೈಟ್ ದೊರಕಿದ್ದು.

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಪ್ರಾಸಾಂಗಿಕವಾಗಿ ನಾನು ಈ ವಿಚಾರವನ್ನು ಹೇಳಿದ್ದೇನೆ. ಆಗ ಸೈಟು ಸಿಕ್ಕಲಿಲ್ಲ, ಈಗ ಇರುವ ಇಂಜನಿಯರು ಆಗ ಸಿಕ್ಕಲಿಲ್ಲ ಎನ್ನುವ ಮಾತು ಬೇರೆ. ಅದನ್ನು ನಾನು ಒಪ್ಪುವುದಿಲ್ಲ. ಆದರೆ ಇದರ ಒಳಹೊಕ್ಕು ಸತ್ಯಾಂಶ ಏನಿದೆ ಎಂಬುದನ್ನು ನೋಡಿದರೆ 1947ನೇ ಇಸವಿಯಿಂದ 1956ನೇ ಇಸವಿಯವರೆಗೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಏತಕ್ಕೆ ಯಾವ ಪ್ರಾಜೆಕ್ಟಿನ ಕೆಲಸವನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ ಎಂದು ನಾನು ಕೇಳುತ್ತೇನೆ. ಶ್ರೀಮಾನ್ ಚನ್ನಬಸಪ್ಪನವರು ಪ್ರತಿ ಸಲ ಇದೇ ಧಾಟಿಯಲ್ಲಿ ಮಾತನಾಡುತ್ತಿದ್ದಾರೆ. ಅವರ ಭಾಷಣವನ್ನು ಕೇಳಿ ನನಗೆ ಸಿಟ್ಟು ಬರಲಿಲ್ಲ. ಏತಕ್ಕೆಂದರೆ ಅವರು ಇವೊತ್ತು ಹೊಸದಾಗಿ ಒಂದು ರೂಪತಾಳಿ ಭಾಷಣವನ್ನು ಮಾಡಿದ್ದರೆ ನನಗೆ ನೋವು ಆಗುತ್ತಿತ್ತು ಮತ್ತು ಸಿಟ್ಟು ಬರುತ್ತಿತ್ತು. ಆದರೆ ಅವರು ಸ್ವಾಭಾವಿಕವಾದ ಧಾಟಿಯಲ್ಲೇ ಮಾತನಾಡಿದ್ದಾರೆ. ಒಂದು ವಿಚಾರವನ್ನು ನಾನು ಅವರಿಗೆ ಹೇಳುತ್ತೇನೆ. ಅವರು ಮಾತನಾಡುತ್ತಾ ನಮ್ಮ ಹೆಸರಿಗೆ ಕಪ್ಪು ಮಸಿ ಬಳಿಯುತ್ತಿದ್ದೀರಿ ಇದರಿಂದ ನಮ್ಮ ಮುಂದಿನ ಪೀಳಿಗೆ ನಮ್ಮನ್ನು ಶಪಿಸುತ್ತದೆ ಎಂದು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅವರ ಹೆಸರಿಗೆ ಕಪ್ಪು ಮಸಿಯನ್ನು ಬಳಿಯುತಕ್ಕ ಪ್ರಯತ್ನವನ್ನು ಮಾಡಿದ್ದೇವೆ ಎನ್ನುವ ಮಾತು ಸರಿಯಲ್ಲ. ಅಂಥಾದ್ದು ಏನೂ ನಾವು ಮಾಡಿಲ್ಲ. ಆದ್ದರಿಂದ ಮಾನ್ಯ ಸದಸ್ಯರಾದ ಶ್ರೀಮಾನ್ ಚನ್ನಬಸಪ್ಪನವರು ಹೇಳಿದಂತಹ ಮಾತನ್ನು ನಾನು ಒಪ್ಪುವುದಿಲ್ಲ ; ಮತ್ತು ಈ ಕಾವೇರಿ ಯೋಜನೆಯನ್ನು ಕಾರ್ಯಗತ ಮಾಡುವ ಸಂಬಂಧದಲ್ಲಿ ನಾವೇನೂ ಕೆಲಸ ಮಾಡಿಲ್ಲ ಎಂದು ಶ್ರೀಮಾನ್ ಚನ್ನಬಸಪ್ಪನವರು ಏನು ಹೇಳಿದರು ಆ ಮಾತನ್ನು ನಾನು ಒಪ್ಪುವುದಿಲ್ಲ. ಈ ಕೆಲಸವನ್ನು ಇನ್ನೂ ವೇಗವಾಗಿ ಮಾಡಿ ಎಂದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನೀವು ಬಂದಮೇಲೆ ಈ ಬಗ್ಗೆ ಏನೂ ಮಾಡಿಲ್ಲ ಎಂದರೆ ಅದು ನನಗೆ ಒಪ್ಪಲಾರದಂತಹ ವಿಚಾರವಾಗುತ್ತದೆ. ಅದೇ ಶ್ರೀಮಾನ್ ಚನ್ನಬಸಪ್ಪನವರು 3 ವರ್ಷಗಳ ಕಾಲ ಲೋಕೋಪಯೋಗಿ ಶಾಖೆಯ ಮಂತ್ರಿಗಳಾಗಿದ್ದಾಗ ಏನೂ ನಡೆದಿಲ್ಲ. ಅದಕ್ಕೆ ಕಾರಣ ಏನಾದರೂ ಇರಲಿ. ಮತ್ತು ಶ್ರೀಮಾನ್ ಚನ್ನಬಸಪ್ಪನವರು ಈ ಕಾವೇರಿ ಬೇಸಿನ್‌ನಲ್ಲಿರತಕ್ಕ ಯೋಜನೆಗಳನ್ನು ಕಾರ್ಯಗತ

(ಶ್ರೀ ವೀರೇಂದ್ರ ಪಾಟೀಲ್)

ಮಾಡಲು ಒಂದು ವರ್ಷಕ್ಕೆ 30 ಕೋಟಿ ರೂಪಾಯಿಗಳನ್ನು ತೆಗೆದಿಡಿ, ಒದಗಿಸಿ ಎಂದು ಹೇಳಿದರು. ಅದು ಅಷ್ಟು ಸುಲಭವಲ್ಲ. ಬಹಳ ಕಷ್ಟ ಇದೆ. ಈ ಕಷ್ಟ ಶ್ರೀಮಾನ್ ಚನ್ನಬಸಪ್ಪನವರಿಗೂ ಗೊತ್ತಿದೆ. ಅವರು ಈ ಕಷ್ಟವನ್ನು ಅನುಭವಿಸಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವರ್ಷಕ್ಕೆ 6 ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಒಪ್ಪಿಕೊಳ್ಳಿ ಮುಂದಿನ ವರ್ಷದಿಂದ 30 ಕೋಟಿ ರೂಪಾಯಿಗಳನ್ನು ಒದಗಿಸಿ ಎಂದು ಹೇಳುವುದು.

ಶ್ರೀ ವೀರೇಂದ್ರ ಪಾಟೀಲ್.—ಶ್ರೀಮಾನ್ ಚನ್ನಬಸಪ್ಪನವರು 30 ಕೋಟಿ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಿ ಎನ್ನುವ ಒಂದು ವಿಚಾರವನ್ನು ಹೇಳುತ್ತಿದ್ದಾರೆ. ಇವರು 3 ವರ್ಷಗಳ ಕಾಲ ಲೋಕೋಪಯೋಗಿ ಶಾಖೆಯ ಸಚಿವರಾಗಿದ್ದರು. ಅವರ ಕಾಲದಲ್ಲಿ ಒಂದು ಪ್ರಾಜೆಕ್ಟನ್ನೂ ಸ್ಟಾರ್ಟ್ ಮಾಡಿಲ್ಲ. ಸುಮ್ಮನೇ ಇವರು ನಮ್ಮನ್ನು ಮಾತ್ರ ಕೆಲಸ ಮಾಡಿಲ್ಲ ಎಂದು ಆಕ್ಷೇಪಣೆ ಮಾಡಿದರು. ಇವರು ಮಂತ್ರಿಗಳಾಗಿದ್ದಾಗ್ಗೆ ಹೇಮಾವತಿ ಪ್ರಾಜೆಕ್ಟನ್ನು ಸ್ಟಾರ್ಟ್ ಮಾಡಿಲ್ಲ. ಹಾರಂಗಿ ಪ್ರಾಜೆಕ್ಟನ್ನು ಸ್ಟಾರ್ಟ್ ಮಾಡಿಲ್ಲ. ಮೂರು ವರ್ಷಗಳು ಇವರು ಲೋಕೋಪಯೋಗಿ ಶಾಖೆಯ ಸಚಿವರಾಗಿದ್ದಾಗ ಯಾವ ಹೊಸ ಪ್ರಾಜೆಕ್ಟುಗಳನ್ನೂ ಇವರು ಸ್ಟಾರ್ಟ್ ಮಾಡಿಲ್ಲ. ಮೂರು ವರ್ಷಗಳು ಇವರು ಮಂತ್ರಿಗಳಾಗಿದ್ದ ಅವಧಿಯಲ್ಲಿ ಇವರು ಖರ್ಚು ಮಾಡಿದಂತಹ ಹಣದ ಲೆಕ್ಕವನ್ನು ತೆಗೆದುಕೊಂಡರೆ 1958-59ನೇ ಇಸವಿಯಲ್ಲಿ 16 ಲಕ್ಷ 74 ಸಾವಿರ ರೂಪಾಯಿಗಳನ್ನು ಮಾತ್ರ ಕಾವೇರಿ ಬೇಸಿನ್ನಿನ ಪ್ರಾಜೆಕ್ಟುಗಳಿಗೆ ಖರ್ಚು ಮಾಡಿದ್ದಾರೆ. 1959-60ನೇ ಸಾಲಿನಲ್ಲಿ 36 ಲಕ್ಷದ 65 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. 1960-61ನೇ ಸಾಲಿನಲ್ಲಿ 48 ಲಕ್ಷ 13 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಒಟ್ಟು ಮೂರು ವರ್ಷಗಳ ಅವಧಿಯಲ್ಲಿ 99 ಲಕ್ಷ 52 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. 1956-57 ರಿಂದ ನಾನು ಲೋಕೋಪಯೋಗಿ ಶಾಖೆಯ ಸಚಿವನಾಗುವವರೆಗೆ ಒಟ್ಟು 2,15,57,000 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಯಾವ ಯಾವ ಪ್ರಾಜೆಕ್ಟುಗಳಿಗೆ ಖರ್ಚು ಮಾಡಿದ್ದೀರಿ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರೆ ಒಳ್ಳೆಯದು.

ಶ್ರೀ ವೀರೇಂದ್ರ ಪಾಟೀಲ್.—ನುಗು ರಿಜರ್ವಾಯರ್, ಲಕ್ಷ್ಮಣತೀರ್ಥ, ಹಾರಂಗಿ, ಸುವರ್ಣಾವತಿ, ಮಂಗಳಪ್ರಾಜೆಕ್ಟ್, ಹೆಬ್ಬಳ್ಳ, ಹೇಮಾವತಿ, ಚಿಕ್ಕಹೊಳೆ, ಕೃಷ್ಣರಾಜಸಾಗರ ಮುಂತಾದ ಪ್ರಾಜೆಕ್ಟುಗಳಿಗೆ ನಾವು ಹಣವನ್ನು ಖರ್ಚು ಮಾಡಿದ್ದೇವೆ. ಈ ವಿಚಾರದಲ್ಲಿ ನಾನು ತಮಗೆ ಹೇಳಬೇಕಾಗಿದ್ದರೆ ಅಗ್ರಿಮೆಂಟ್ ಪ್ರಕಾರ 4 ಟಿ. ಎಂ. ಸಿ. ಎಫ್. ಟಿ. ನೀರನ್ನು ನಾವು ಸ್ಟೋರ್ ಮಾಡಬೇಕಾಗಿದೆ. ಇದು ಷೆಡ್ಯೂಲ್ ರಿವರ್‌ನಿಂದ ಸ್ಟೋರ್ ಮಾಡಬೇಕು ಎನ್ನುವಂಥಾದ್ದು. ಕಪಿನಿ, ಸುವರ್ಣಾವತಿ, ಹೇಮಾವತಿ, ಲಕ್ಷ್ಮಣತೀರ್ಥ, ಮತ್ತು ಕಂಬದಕಡ ಈ ಯೋಜನೆಗಳು ಷೆಡ್ಯೂಲ್ ರಿವರ್‌ಗೆ ಸಂಬಂಧಪಟ್ಟಂಥವುಗಳು. ಷೆಡ್ಯೂಲ್ ರಿವರ್‌ಗೆ ಸಂಬಂಧಪಟ್ಟ ಹಾಗೆ ಹಿಂದೆ ಯಾವ ಯೋಜನೆ ಕೆಲಸವೂ ಪ್ರಾರಂಭವಾಗಿಲ್ಲ. ಅವುಗಳ ಕೆಲಸ ಪ್ರಾರಂಭವಾದದ್ದು ಇತ್ತೀಚೆಗೆ. ನಾನು ಪಿ. ಡಬ್ಲ್ಯೂ. ಡಿ. ಮಂತ್ರಿಯಾಗುವತನಕ ಕೇವಲ ಈ ಯೋಜನೆಗಳಿಗೆ 2,15,57,000 ರೂಪಾಯಿಗಳು ಖರ್ಚಾಗಿದೆ. ನಾನು ಪಿ. ಡಬ್ಲ್ಯೂ. ಡಿ. ಮಂತ್ರಿಯಾದ ಕಾಲದಿಂದ ಇಲ್ಲಿಯವರೆಗೆ 8,25,00,000 ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ನಾನು ಪಿ.ಡಬ್ಲ್ಯೂ.ಡಿ. ಮಂತ್ರಿಯಾದಾಗಿನಿಂದ ಎಂದರೆ 1962ನೇ ಇಸವಿಯಿಂದ 1968-69ನೇ ಇಸವಿಯ ಕೊನೆಯವರೆಗೆ ನಾವು 8,25,00,000 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

Sri H. M. CHANNABASAPPA.—On a point of personal clarification, Sir. It is correct that on major irrigation under Cauvery Basin, amounts were not spent during those three years; probably he tries to shelve the reasons. The Hon. Chief Minister must know that there were no projects: Harangi was not there; Kambadakada was not there; Hemavathi was still under investigation. Therefore, during those three years we had to strive to get up prejects for Hemavathi, Kambadakada and Harangi. In the year 1959, a small beginning was made because there were disputes. Therefore, it is wrong to say that nothing was

done. These projects were prepared during that period and included in the Third Plan and given to the then Hon. Minister for P.W.D.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುತ್ತಾ ಇದ್ದುದು ಶ್ರೀಮಾನ್ ಚನ್ನಬಸಪ್ಪನವರು ಲೋಕೋಪಯೋಗಿ ಶಾಖೆಯ ಸಚಿವರಾಗಿದ್ದ ಮೂರು ವರ್ಷಗಳ ಅವಧಿಯಲ್ಲಿ ಅವರು ಯಾವ ಪ್ರಾಜೆಕ್ಟಿನ ಕೆಲಸವನ್ನೂ ಪ್ರಾರಂಭ ಮಾಡಿಲ್ಲ ಎಂದು. ಅವರು ಕೆಲವು ಯೋಜನೆಗಳನ್ನು ತಯಾರು ಮಾಡಿ ನಮ್ಮ ಕೈಯಲ್ಲಿ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಈಗ ನಾನು ಪ್ರಶ್ನೆ ಮಾಡುತ್ತಾ ಇಲ್ಲ. ಈಗ ಸತ್ಯಾಂಶ ಏನಿದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ.

ಈಗ ಒಂದು ಪ್ರಶ್ನೆ ಏನೆಂದರೆ, ಮಾನ್ಯ ದೇವೇಗೌಡರಿಗೆ ಅನೇಕ ಮಾನ್ಯ ಸದಸ್ಯರು ಹೇಳುತ್ತಿದ್ದರು, ನಿಮ್ಮ ನಿರ್ಣಯ ಪಾಸಾದ ಮೇಲೆ ಸರ್ಕಾರ ಯಾವ ಒಂದು ಕೆಲಸವನ್ನೂ ಸಹ ಮಾಡಿಲ್ಲ ಎಂಬ ಮಾತನ್ನು. ಮತ್ತು ಆ ರೀತಿ ನಿರ್ಣಯ ಪಾಸಾದ ಮೇಲೆ ಯಾವ ಕೆಲಸವನ್ನೂ ಮಾಡದವರನ್ನು ಇಂಪೀಚ್ ಮಾಡಬೇಕೆಂದು ಸಹ ಹೇಳಿದರು. ಮಾನ್ಯ ದೇವೇಗೌಡರ ನಿರ್ಣಯ ಪಾಸಾದ ಮೇಲೆ ನಾವು ಏನು ಮಾಡಿದ್ದೇವೆ ಎಂಬುದನ್ನು ಹೇಳುತ್ತೇನೆ. ಹೇಮಾವತಿ ಯೋಜನೆಗೆ ಯಾವ ರೀತಿ ಖರ್ಚು ಮಾಡಲಾಗಿದೆ ಎಂಬುದನ್ನು ಹೇಳುತ್ತೇನೆ :

1962–63ರಲ್ಲಿ	2 ಲಕ್ಷ ರೂಪಾಯಿಗಳು.
1963–64ರಲ್ಲಿ	1 ಲಕ್ಷದ ಎರಡು ಸಾವಿರ ರೂಪಾಯಿಗಳು.
1964–65ರಲ್ಲಿ	1 ಲಕ್ಷದ 13 ಸಾವಿರ ರೂಪಾಯಿಗಳು.
1965–66ರಲ್ಲಿ	1 ಲಕ್ಷದ 24 ಸಾವಿರ ರೂಪಾಯಿಗಳು.
1966–67ರಲ್ಲಿ 1967–68ರಲ್ಲಿ }	24 ಲಕ್ಷದ 15 ಸಾವಿರ ರೂಪಾಯಿಗಳು.
1968–69ರಲ್ಲಿ	74 ಲಕ್ಷದ 53 ಸಾವಿರ ರೂಪಾಯಿಗಳು.

1969–70ನೇ ಸಾಲಿಗೆ ಬಡ್ಜೆಟ್ಟಿನಲ್ಲಿ 50 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೂ ಕೂಡ ಇದುವರೆಗಾಗಲೇ 52 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದೇ ರೀತಿಯಿಂದ ಕಪಿನಿ ಯೋಜನೆಗೆ 1966–67ರಲ್ಲಿ 49·90 ಲಕ್ಷ ರೂಪಾಯಿಗಳನ್ನು, 1967–68ರಲ್ಲಿ 67 ಲಕ್ಷದ 51 ಸಾವಿರ ರೂಪಾಯಿಗಳನ್ನು, 1968–69ರಲ್ಲಿ ಒಂದು ಕೋಟಿ 7 ಲಕ್ಷದ 9 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇವನ್ನೆಲ್ಲಾ ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ನಾವು ಏನೂ ಕೆಲಸವನ್ನು ಮಾಡಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಕ್ಕೋಸ್ಕರವಾಗಿ. ಈ ಕಾರಣದಿಂದ ನಾವು ಏನೂ ಕೆಲಸವನ್ನೇ ತೆಗೆದುಕೊಂಡಿಲ್ಲ ಎಂಬ ಪ್ರಶ್ನೆ ಇಲ್ಲಿ ಬರುವುದೇ ಇಲ್ಲ. ಮಾನ್ಯ ದೇವೇಗೌಡರ ನಿರ್ಣಯ ಪಾಸ್ ಆದಮೇಲೆ ಸುವರ್ಣಾವತಿ ಪ್ರಾಜೆಕ್ಟನ್ನು ತೆಗೆದುಕೊಂಡಿದ್ದೇವೆ. ಈ ಯೋಜನೆಗೆ 1966–67ರಲ್ಲಿ 5 ಲಕ್ಷದ 96 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, 1967–68ರಲ್ಲಿ 27 ಲಕ್ಷದ 79 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1968–69ರಲ್ಲಿ 51 ಲಕ್ಷದ 61 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮುಂದಿನ ಜೂನ್ 1970ರ ಹೊತ್ತಿಗೆ ಸುವರ್ಣಾವತಿ ಯೋಜನೆಯಲ್ಲಿ ನೀರು ನಿಲ್ಲುತ್ತದೆ ಎಂಬ ಭರವಸೆಯನ್ನು ಕೊಡುತ್ತೇನೆ. ಈಗ ನಮ್ಮ ಮುಂದೆ ಇರುವ ಪ್ರಶ್ನೆ ಎಂದರೆ, ಷೆಡ್ಯೂಲ್ ರಿವರ್ಸ್ ಏನಿವೆ ಕಪಿನಿ, ಸುವರ್ಣಾವತಿ ಮತ್ತು ಹೇಮಾವತಿ, ಈ ನದಿಗಳ ಮೂಲಕ 45 ಟಿ. ಎಂ. ಸಿ. ಯಷ್ಟು ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗಿರುವುದು. ಈಗಾಗಲೇ ಕಪಿನಿ ಪ್ರಾಜೆಕ್ಟನ್ನು ಪ್ರಾರಂಭ ಮಾಡಿದ್ದೇವೆ. ಸುವರ್ಣಾವತಿ ಯೋಜನೆಯಲ್ಲಿ ಮುಂದಿನ ಜೂನ್ 70ರ ಹೊತ್ತಿಗೆ ನೀರು ನಿಲ್ಲುತ್ತದೆ ಎಂಬುದನ್ನು ಈಗಾಗಲೇ ಹೇಳಿದ್ದೇನೆ. ಇನ್ನು ಕಬಿನಿ ಮತ್ತು ಹೇಮಾವತಿ ಯೋಜನೆಗಳ ಬಗ್ಗೆ ಹೇಳಬೇಕೆಂದರೆ, 1974ರೊಳಗೆ ಈ ಎರಡು ಜಲಾಶಯಗಳು ನಿರ್ಮಾಣವಾಗುತ್ತವೆ ಮತ್ತು ಆ ಜಲಾಶಯಗಳಲ್ಲಿ ನೀರು ನಿಲ್ಲುತ್ತದೆ ಎಂಬ ಭರವಸೆಯನ್ನು ಕೊಡುತ್ತೇನೆ. ಇತರೇ ಷೆಡ್ಯೂಲ್ ರಿವರ್ಸ್ ಯಾವುವು ಎಂದರೆ ಲಕ್ಷ್ಮಣತೀರ್ಥ ಮತ್ತು ಕಾವೇರಿ ಲಕ್ಷ್ಮಣತೀರ್ಥ ಯೋಜನೆಯಿಂದ 1.1 ಟಿ.ಎಂ.ಸಿ. ಯಷ್ಟು ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಬರುತ್ತದೆ. ಮತ್ತು ಕಾವೇರಿ (ಕಂಬದಕಡ) ಯೋಜನೆಯಿಂದ 5.7 ಟಿ ಎಂ.ಸಿ. ಯಷ್ಟು ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಬರುತ್ತದೆ. ಷೆಡ್ಯೂಲ್ ರಿವರ್ಸ್ ಪೈಕಿ ಇವು ಎರಡು ಯೋಜನೆಗಳು ಮಾತ್ರ ಉಳಿದಿವೆ. ಇದನ್ನೆಲ್ಲಾ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾವು ಏನೂ ಕೆಲಸವನ್ನೇ ಮಾಡಿಲ್ಲ, ಕೈಕಟ್ಟಿಕೊಂಡು ಕುಳಿತಿದ್ದೇವೆ, ನಿರ್ಲಕ್ಷದಿಂದ ಈ ಭಾಗದ ಕಡೆ ನೋಡುತ್ತಿದ್ದೇವೆ ಮತ್ತು ಕಡೆಗಣಿಸುತ್ತಿದ್ದೇವೆ ಎಂಬುದಾಗಿ ಮಾನ್ಯ ಸದಸ್ಯರು ಹೇಳಿದ್ದರಿಂದ ನಾವು ಅಧಿಕಾರಕ್ಕೆ ಬಂದಮೇಲೆ ಹೆಚ್ಚಿನ ಗಮನವನ್ನು ಈ ಷೆಡ್ಯೂಲ್

(ಶ್ರೀ ವೀರೇಂದ್ರ ಪಾಟೀಲ್)

ರಿವರ್ಸ್ ಮೇಲೆ ಕೊಡುತ್ತಿದ್ದೇವೆ. ಈ ನದಿಗಳ ನೀರನ್ನು ಉಪಯೋಗ ಮಾಡಿಕೊಳ್ಳುವ ಬಗ್ಗೆ ನಾವು ಪೂರ್ತಾ ಪ್ರಯತ್ನ ಮಾಡುತ್ತಿದ್ದೇವೆ. ಮುಖ್ಯವಾಗಿ ಶ್ರೀಮಾನ್ ಚನ್ನಬಸಪ್ಪನವರಿಗೆ ವಿಶೇಷವಾದ ಆಶ್ವಾಸನೆ ಕೊಡುತ್ತೇನೆ, 1974 ರೊಳಗೆ 45 ಟಿ. ಎಂ.ಸಿ. ನೀರನ್ನು ಉಪಯೋಗ ಮಾಡುವ ಶಕ್ತಿ ನಮಗೆ ಇದೆ ಎಂಬುದನ್ನು ಮತ್ತು ಆ ಬಗ್ಗೆ ಮನವರಿಕೆಯಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—1974ರೊಳಗೆ ಎಲ್ಲಾ ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆಂಬ ಆಶ್ವಾಸನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವುದರಿಂದ ಅಲ್ಲಿಯವರೆಗೂ ಅವರೇ ಮುಖ್ಯ ಮಂತ್ರಿಗಳಾಗಿರುವುದಕ್ಕೆ ಶ್ರೀಮಾನ್ ಚನ್ನಬಸಪ್ಪನವರು ಆಶ್ವಾಸನೆ ಕೊಡುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—1974 ರೊಳಗೆ ಎಲ್ಲಾ ಯೋಜನೆಗಳ ಕೆಲಸವನ್ನು ಮುಗಿಸುವುದಾದರೆ ಅವರೇ ಅಲ್ಲಿಯವರೆಗೆ ಮುಖ್ಯ ಮಂತ್ರಿಗಳಾಗಿರಲಿ, ಅದಕ್ಕೆ ನನ್ನ ಅಡ್ಡಿ ಇಲ್ಲ. ಮುಖ್ಯವಾಗಿ ನಮಗೆ ಕೆಲಸವಾಗಬೇಕು.

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ನಮಗೆ ಏನಾಗಿದೆ ಎಂದರೆ, ನಾವು ಇಷ್ಟಕ್ಕೆ ನಿಲ್ಲುವಹಾಗಿಲ್ಲ. ಎಲ್ಲಾ ವಿವರಗಳನ್ನು ಸಹ ಕೇಳುವುದಕ್ಕೆ ಹೋಗಬೇಡಿ, ಎಲ್ಲವನ್ನೂ ನಮಗೆ ಬಿಡಿ ಎನ್ನುವ ಮಾತನ್ನು ನಾನು ಅನೇಕ ಸಲ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಈಗ ನಾನ್ ಷೆಡ್ಯೂಲ್ ರಿವರ್ಸ್ ಏನಿವೆ, ಅವುಗಳ ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಮತ್ತು ಪ್ರಾಜೆಕ್ಟ್‌ಗಳನ್ನು ಕಟ್ಟಬೇಕಾಗಿದೆ. ಈ ನದಿಗಳ ಬಗ್ಗೆ ಅಗ್ರಿಮೆಂಟ್‌ನಲ್ಲಿ ಹೇಳಿಲ್ಲ. 1974ರ ಹೊತ್ತಿಗೆ ಪರಿಸ್ಥಿತಿ ಏನಾಗಬಹುದು ಎಂಬುದನ್ನು ನಾನು ಇವತ್ತು ಹೇಳುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ಚನ್ನಬಸಪ್ಪನವರು ಪದೇ ಪದೇ ಹೇಳುತ್ತಿದ್ದಾರೆ, ಏನೆಂದರೆ, ಕಾವೇರಿ ಬೇಸಿನ್‌ನೊಳಗೆ ನಮ್ಮ ಪಾಲಿಗೆ ಇನ್ನು 10 ಟಿ.ಎಂ.ಸಿ. ಯಷ್ಟು ನೀರು ಮಾತ್ರ ಉಳಿದಿದೆ 1974 ರೊಳಗೆ ಅದನ್ನು ಸಹ ಉಪಯೋಗ ಮಾಡಿಕೊಳ್ಳದಿದ್ದರೆ ನಮ್ಮ ಹಕ್ಕು ಹೋಗಿಬಿಡುತ್ತದೆ ಎಂಬುದನ್ನು. ನಾನು ಮುಖ್ಯ ಮಂತ್ರಿಯಾಗಿದ್ದುಕೊಂಡು ಹೇಳುವುದಾದರೆ, ಇನ್ನು 10 ಟಿ.ಎಂ.ಸಿ. ಯಷ್ಟು ನೀರು ಮಾತ್ರ ಇದೆ ಎಂಬುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಮತ್ತು 1974 ರೊಳಗೆ ನಾವು ಉಪಯೋಗಮಾಡಿಕೊಳ್ಳದಿದ್ದರೆ ನಮ್ಮ ಹಕ್ಕು ಕೈಬಿಟ್ಟುಹೋಗುತ್ತದೆ ಎಂಬುದನ್ನು ಸಹ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಯಾವ ಮುಖ್ಯ ಮಂತ್ರಿಗಳೇ ಆಗಲಿ ಈ ಮಾತನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಆ ರೀತಿ ಹೇಳಲಿಲ್ಲ. ರೂಲ್ಸ್ ಆಫ್ ರೆಗ್ಯುಲೇಷನ್ ಪ್ರಕಾರ ಲೆಕ್ಕ ಹಾಕಿದರೆ ಇನ್ನು ನಮಗೆ 10 ಟಿ.ಎಂ.ಸಿ. ಯಷ್ಟು ನೀರು ಸಿಗುತ್ತದೆ ಎಂದು ಹೇಳಿದ್ದೇನೆ. ಯಾವ ರೀತಿ ಲೆಕ್ಕ ಹಾಕಿದರೂ ಕೂಡ ನಮಗೆ ರೂಲ್ಸ್ ಆಫ್ ರೆಗ್ಯೂಲೇಷನ್ ಪ್ರಕಾರ 10 ಟಿ.ಎಂ.ಸಿ. ಮೇಲೆ ಸಿಗುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅನೇಕ ನಾನ್ ಷೆಡ್ಯೂಲ್ ರಿವರ್ಸ್‌ಗಳು ಇವೆ. ನಾನು ಹೇಳಬೇಕಾಗಿದ್ದರೆ, ಸುಮಾರು 300 ಜನ ರೈತರು ಹಾರಂಗಿ ಪ್ರಾಜೆಕ್ಟ್‌ನ್ನು ಜಾಗ್ರತೆ ತೆಗೆದುಕೊಳ್ಳಬೇಕೆಂದು ಕೇಳುವುದಕ್ಕಾಗಿ ನನ್ನ ಹತ್ತಿರ ಬಂದಿದ್ದರು. ಅವರ ಹತ್ತಿರ ನಾನು ಚರ್ಚೆಮಾಡಿದೆ. ಅವರು ಹೇಳಿದರು, ನಾವು ಏನು ಮಾಡುವುದಕ್ಕೂ ತಯಾರಿದ್ದೇವೆ, ನಮಗೆ ನೀರಿನ ಅನುಕೂಲ ಮಾಡಿಕೊಡಿ, ಬೇಕಾದರೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ, ಅದನ್ನು ವಸೂಲಿ ಮಾಡಲು ಒಂದು ಕಮಿಟಿ ಮಾಡಿ ನಿಮ್ಮ ಅಧಿಕಾರಿಗಳನ್ನು ನೇಮಕ ಮಾಡಿ, ಹಣ ಇರುವವರು ಕ್ಯಾಷ್ ಕೊಡುತ್ತೇವೆ, ಇಲ್ಲದವರು ಜಮೀನನ್ನು ಅಡ ಇಟ್ಟು ಹಣ ಕೊಡಿಸಿಕೊಡುತ್ತೇವೆ ಎಂಬುದನ್ನು ಹೇಳಿದರು. ಅವರು ಹೇಳಿದ್ದು ನನ್ನ ಮನಸ್ಸಿಗೆ ನಾಟಿತು. ನಾನು ಅವರಿಗೆ ಹೇಳಿದೆ, ಹಾರಂಗಿ ಕೆಲಸವನ್ನು ಕೈಬಿಡುವುದಿಲ್ಲ, ಕೆಲಸ ಮಾಡುತ್ತೇವೆ ಎಂಬ ಭರವಸೆಯನ್ನು ಕೊಟ್ಟೆ. ಈ ಬಗ್ಗೆ ಎಲ್ಲರೂ ವಿಚಾರ ಮಾಡಬೇಕಾಗಿದೆ. ಈಗ ಬ್ಯಾಂಕುಗಳು ರಾಷ್ಟ್ರೀಕರಣವಾಗಿವೆ. ಈ ಕಾರಣದಿಂದ ನಾವು ಸಾಧ್ಯವಾದಷ್ಟನ್ನು ಈ ಬ್ಯಾಂಕ್‌ಗಳಿಂದ ಉಪಯೋಗ ಪಡೆಯಬೇಕಾಗಿದೆ ಎಂಬ ಮಾತನ್ನು ಪದೇ ಪದೇ ಹೇಳುತ್ತಿದ್ದೇನೆ. ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಬಿಲ್ ಈ ಮನೆಯ ಮುಂದೆ ಬಂದಿತ್ತು. ಅದನ್ನು ಪಾಸ್ ಮಾಡಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಈಗ ಆ ಬಿಲ್ಲನ್ನು ಸೆಲೆಕ್ಟ್ ಕಮಿಟಿಗೆ ಕಳಿಸಿದ್ದರಿಂದ ಮತ್ತೆ ನಾಲ್ಕಾರು ತಿಂಗಳ ತಡವಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಪ್ರಾಜೆಕ್ಟ್‌ನ್ನೇ ಬ್ಯಾಂಕ್‌ಗೆ ಈಡ್ ಮಾಡಿ ಸಾಲ ತೆಗೆದುಕೊಳ್ಳಬಹುದಲ್ಲಾ ?

ಶ್ರೀ ವೀರೇಂದ್ರ ಪಾಟೀಲ್.—ನಾವು ಈಗ ಯಾರನ್ನೂ ಒತ್ತಾಯ ಮಾಡುತ್ತಿಲ್ಲ. ನಮ್ಮಲ್ಲಿ ಹೆಚ್ಚು ರಿಸೋರ್ಸಸ್ ಇಲ್ಲದಿರುವುದರಿಂದ ಜನರಿಂದ ಕಾಂಟ್ರಿಬ್ಯೂಷನ್ ಎತ್ತಬೇಕಾಗಿದೆ. ಅವರು ತಮ್ಮ ಆಸ್ತಿಯನ್ನು ಬ್ಯಾಂಕ್‌ಗೆ ಈಡ್ ಮಾಡಿದರೆ ಬ್ಯಾಂಕ್‌ನವರು ಸಾಲ ಕೊಡುತ್ತಾರೆ. ಈಗ ಯಾರಾದರು ಒಬ್ಬ ರೈತ ತನ್ನ ಭೂಮಿಯನ್ನು ಈಡ್ ಮಾಡಿ ಕಾಂಟ್ರಿಬ್ಯೂಷನ್ ಕೊಡುತ್ತೇನೆ ಎಂದು ಹೇಳಿದರೆ, ಅದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಈಗಾಗಲೇ ರೈತರು ತಮ್ಮ ಭೂಮಿಯನ್ನು ಈಡ್ ಮಾಡಿ ಸಾಲ ತೆಗೆದುಕೊಂಡಿರುತ್ತಾರೆ, ಮತ್ತೆ ಯಾರು ಸಾಲ ಕೊಡುತ್ತಾರೆ ಎನ್ನುವ ಮಾತನ್ನು ಕೆಲವರು ಹೇಳಿದರು. ನಾವು ಪ್ರಾಜೆಕ್ಟ್ ತೆಗೆದುಕೊಳ್ಳುತ್ತೇವೆ ಎಂದರೆ ಆ ಭಾಗದ ಜಮೀನಿನ ಬೆಲೆ ಹೆಚ್ಚಾಗುತ್ತದೆ. ಮಾರ್ಕೆಟ್ ರೇಟ್ ಜಾಸ್ತಿಯಾದರೆ ಯಾರು ಬೇಕಾದರೂ ಸಾಲ ಕೊಡುತ್ತಾರೆ. ಅದೂ ಅಲ್ಲದೆ ಪ್ರಧಾನ ಮಂತ್ರಿಗಳು ಕ್ರೆಡಿಟ್ ವರ್ದಿಯಿಂದ ನೋಡಬೇಕಾಗಿಲ್ಲ ಎಂದು ಹೇಳಿದ್ದಾರೆ. ಇವತ್ತು ಯಾವುದು ಪ್ರಾಜೆಕ್ಟ್ ಫೀಜಿಬಲ್ ಆಗಿದೆಯೋ ಅದಕ್ಕೆ ಧನ ಸಹಾಯ ಮಾಡುವ ನೀತಿಯನ್ನು ಅನುಸರಿಸಿದ್ದಾರೆ. ಅದನ್ನು ಜಾಗ್ರತೆ ಮಾಡಿದರೆ ನಮ್ಮಲ್ಲಿ ಬೇಕಾದಷ್ಟು ದುಡ್ಡನ್ನು ಉಪಯೋಗ ಮಾಡಬಹುದು. ಅದಕ್ಕಾಗಿ ನಾವೂ ನೀವೂ ಕಲೆತು ಪ್ರಯತ್ನ ಮಾಡಬೇಕಾಗುತ್ತದೆ. ನನಗೆ ಗೊತ್ತಿರುವ ಹಾಗೆ ಮೈಸೂರು ಬ್ಯಾಂಕಿನಲ್ಲಿ 350 ಕೋಟಿ ರೂಪಾಯಿಗಳು ಡಿಪಾಜಿಟ್ ಇದ್ದರೆ, ನಮ್ಮಲ್ಲಿ ಖರ್ಚು ಆಗುವುದು 150 ಕೋಟಿ ರೂಪಾಯಿಗಳು ಮಾತ್ರ. ನಮ್ಮ ಹಣ ಎರಡನೇ ನೆರೆ ಪ್ರಾಂತಗಳಿಗೆ ಉಪಯೋಗ ಆಗುತ್ತಿದೆ. ಅದರ ಉಪಯೋಗ ನಾವು ಮಾಡಿಕೊಳ್ಳಬೇಕು. ಅದರಿಂದೇನೇನು ಅನುಕೂಲವಾಗುತ್ತದೋ ಅದೆಲ್ಲವನ್ನೂ ಇವತ್ತು ವಿಚಾರ ಮಾಡಿ ಆ ರೀತಿ ದುಡ್ಡು ಒದಗಿಸುವ ಪ್ರಯತ್ನ ಮಾಡಬೇಕು.

8–30 P.M.

ಶ್ರೀ ಎಸ್. ಶಿವಪ್ಪ.—ಒಂದು ಕ್ಲಾರಿಫಿಕೇಷನ್. ನೀವು ಮಸೂದೆಯನ್ನು ತಂದಿದ್ದೀರಿ. 100 ಎಕರೆ ಮೇಲೆ ಇರತಕ್ಕ ಎಲ್ಲಾ ಕಾಮಗಾರಿಗಳು ಪ್ರಾರಂಭವಾಗಿರುವುದು ಕಾಮಗಾರಿಗಳು ಪ್ರಾರಂಭವಾಗಬೇಕಾಗಿರುವುದು, ಕಾಮಗಾರಿಗಳು ನೋಟಿಫೈ ಮಾಡಿರುವುದು - ಈ ಕಾಮಗಾರಿಗಳಿಗೆ ಹಣ ಕೊಡಬೇಕೆಂದರೆ, ಎನ್‌ಕಂಬರನ್ಸ್ ಪ್ರಶ್ನೆ ಏಳುತ್ತದೆ. ಅದಕ್ಕೆ ಮತ್ತೊಂದು ಕಾನೂನನ್ನು ತರಬೇಕು. ಈ ಕಾರಣದಿಂದ ಅದನ್ನು ವಿರೋಧ ಮಾಡುತ್ತೇವೆಯೇ ಹೊರತು ಸರ್ಕಾರಕ್ಕೆ ಹಣ ಬರುವ ಬಗ್ಗೆ ನಾವು ವಿರೋಧ ಮಾಡುತ್ತಾ ಇಲ್ಲ. ಯಾರೋ ನಿಮ್ಮ ಒಬ್ಬ ಸ್ನೇಹಿತರು ಹೇಳುತ್ತಿದ್ದಾರೆಂದು ಅದನ್ನು ಸಾರ್ವತ್ರಿಕವಾಗಿ ಅನ್ವಯ ಮಾಡಿದರೆ ಹೇಗೆ ?

ಶ್ರೀ ವೀರೇಂದ್ರ ಪಾಟೀಲ್.—ಸೇಕಡ 66 ರಷ್ಟು ಜನ ತಾವಾಗಿಯೇ ಮುಂದೆ ಬಂದರೆ ಅದನ್ನು ಮಾಡುತ್ತೇವೆ. ಇಲ್ಲದಿದ್ದರೆ ಆಗುವುದಿಲ್ಲ.

ಇನ್ನೊಂದು ವಿಷಯ. ಎಲ್ಲರೂ ವಿಚಾರ ಮಾಡುವುದು ಒಂದಿದೆ. ಇವತ್ತು ಅನೇಕ ಪ್ರಾಜೆಕ್ಟ್‌ಗಳನ್ನು ಟೆಕ್ನಿಕಲ್ ಕ್ಲಿಯರೆನ್ಸ್ ಇಲ್ಲದೆ ಮಾಡುವುದಕ್ಕೆ ಆಗಿಲ್ಲ. ನಮಗೆ ಎಲ್ಲಿಯವರೆಗೆ ಅದು ಸಿಗುವುದಿಲ್ಲವೋ ಅಲ್ಲಿಯವರೆಗೆ ಪ್ಲಾನಿಂಗ್ ಕಮಿಷನ್ನಿನವರು ದುಡ್ಡು ಒದಗಿಸುವುದಿಲ್ಲ. ಅವರು ದುಡ್ಡು ಒದಗಿಸಲಿ, ಬಿಡಲಿ ನಾವು ಮುಂದೆ ಹೋಗಬೇಕು ಎಂಬುದಾಗಿ ಹೇಳಿದರೆ ತಾವೆಲ್ಲರೂ ಹೆಚ್ಚಿನ ದುಡ್ಡನ್ನು ಒದಗಿಸಿಕೊಡಬೇಕಾಗುತ್ತದೆ. ಅದ್ದರಿಂದ ನಾನು ಇಲ್ಲಿ ಪದೇಪದೇ ಹೇಳುತ್ತಿದ್ದೇವೆ. ಇದರಲ್ಲಿ ಏನೂ ರಾಜಕೀಯವಿಲ್ಲ. ಇರ್ರಿಗೇಷನ್ ಪ್ರಾಜೆಕ್ಟ್‌ಗಳಿಗೆ ಏನು ಹಣ ಬೇಕಾಗುತ್ತದೆ, ಯಾವರೀತಿ ಶೇಖರಣೆ ಮಾಡಬೇಕೆಂಬ ಬಗ್ಗೆ ವಿಚಾರಮಾಡಲು ತಾವು 17ನೇ ತಾರೀಖಿನಲ್ಲಿ ಸೇರುತ್ತಿದ್ದೀರಿ, ಆಗ ನೀವು ಯೋಗ್ಯ ನಿರ್ಣಯ, ಸಲಹೆಗಳನ್ನು ಸರ್ಕಾರಕ್ಕೆ ನೀಡುತ್ತಿರೆಂಬ ಭರವಸೆಯನ್ನು ಇಟ್ಟುಕೊಂಡಿದ್ದೇನೆ. ತಾವೆಲ್ಲರೂ ಸಹಕಾರ ಮಾಡಿದರೆ ನಿಮ್ಮ ಹಕ್ಕುಬಾಧ್ಯತೆಗಳಿಗೇನೂ ಚ್ಯುತಿ ಬರುವುದಿಲ್ಲ. ಇದರಲ್ಲಿ ಯಾರೂ ನಿರ್ಲಕ್ಷ್ಯ ಮಾಡಿಲ್ಲ. ಅದಕ್ಕಾಗಿ ಸಿದ್ಧತೆಯನ್ನು ಮಾಡಿದ್ದೇವೆ. ಕಾವೇರಿ ಕಡೆಗೆ ಯಾರೂ ಗಮನಕೊಟ್ಟಿಲ್ಲವೆಂದು ಭಾವನೆಯನ್ನು ಇಟ್ಟುಕೊಳ್ಳಬೇಡಿ. ಮುಖ್ಯಮಂತ್ರಿಯಾಗಿರುವ ನಾನು ಕಾವೇರಿನದಿಯ ಹತ್ತಿರವಿರುವ ರೈತರಿಗೆ ಅನುಕೂಲತೆ ಮಾಡಿ ಮಾಡಿಕೊಡುವುದು ನನ್ನ ಪವಿತ್ರ ಧರ್ಮ. ಅದೇ ರೀತಿಯಲ್ಲಿ ಎರಡನೇ ಜೇಸಿನ್‌ನಲ್ಲಿರುವವರಿಗೂ ಅನುಕೂಲ ಮಾಡಿಕೊಡುವುದು ನನ್ನ ಧರ್ಮ. ಒಂದು ಕಡೆ ಕಡಿಮೆ, ಒಂದು ಕಡೆ ಹೆಚ್ಚು ಎನ್ನದೆ ಎಲ್ಲರ ಹಿತರಕ್ಷಣೆ ಮಾಡಿಕೊಳ್ಳುವುದಕ್ಕೆ ಎಲ್ಲ ರೀತಿಯಿಂದಲೂ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ನಮಗೆ ಇರುವ ಅನಾನುಕೂಲತೆ ಹಣದ ಮುಗ್ಗಟ್ಟು. ಆ ಒಂದು ಸಹಾಯ ದೊರೆತರೆ ದೇಶದಲ್ಲಿ ಇಂತಹ ಪರಿಸ್ಥಿತಿ ಉಳಿಯುವುದಿಲ್ಲ. ನಮ್ಮ ರೈತರು ಏನು ನೀರಾವರಿ ಸೌಲಭ್ಯವಿಲ್ಲದೆ ಕಷ್ಟದಲ್ಲಿದ್ದಾರೋ ಆ ಕಷ್ಟ ನಮ್ಮ ಕಾಲಕ್ಕೆ ನಿವಾರಣೆಯಾಯಿತು ಎಂಬುದಾಗಿ ಸ್ಪಷ್ಟವಾಗುತ್ತದೆ. ಈ ರೀತಿಯಾಗಿ ನನಗೆ ಸಹಕಾರ ಕೊಡಬೇಕೆಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri S. SIVAPPA.—I have right to reply.

Mr. SPEAKER.—It should have been done earlier. If the Hon. Member replies, then again Government will have its final say.

†**ಶ್ರೀ ಎಸ್. ಶಿವಪ್ಪ.**—ಸಭಾಪತಿಗಳೇ, ಈಗ ಈ ಸಭೆಯಲ್ಲಿ ಕಾವೇರಿ ನದಿಯ ಯೋಜನೆಗಳ ಬಗ್ಗೆ ದೀರ್ಘವಾಗಿ ಚರ್ಚೆ ನಡೆದಿದೆ. ಈ ಚರ್ಚೆಗೆ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡುವಾಗ ಕೆಲವು ವಿಚಾರಗಳನ್ನು ಹೇಳಿದರು. ಅವರು ಉತ್ತರ ಕೊಡುವುದರಲ್ಲಿ ಬಹಳ ಜಾಣರು. ಅವರು ಲಾಯರ್. ಲಾಯರ್‌ತನದಲ್ಲಿ ಚಾಕಚಕ್ಯತೆ, ಕ್ಲೆವರ್‌ನೆಸ್ ಎಂದು ಏನು ಹೇಳಬೇಕೋ ಆ ಒಂದು ಜಾಣತನದಿಂದ ಉತ್ತರ ಹೇಳಿದ್ದಾರೆ. He is more a clever man than an administrator. ಇವತ್ತು ನಮ್ಮ ನಿರ್ಣಯದ ಉದ್ದೇಶ ಇಷ್ಟೇ. ಇಲ್ಲಿ ಚರ್ಚೆಮಾಡಿ ಅನಗತ್ಯವಾಗಿ ಮದ್ರಾಸ್ ಸರ್ಕಾರಕ್ಕೆ ಅನುಕೂಲವಾದಂಥ ಅಂಕಿ ಅಂಶಗಳನ್ನು ಹೊರಗೆಡವಿ ನಿಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆಂಬ ಮನೋಭಾವನೆ ಮಾನ್ಯ ಶ್ರೀ ಚನ್ನಬಸಪ್ಪನವರಿಗೂ ಇಲ್ಲ ಮತ್ತು ಇನ್ನು ಯಾರಿಗೂ ಇಲ್ಲವೆಂದು ಹೇಳುತ್ತೇನೆ. ಈ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳುವುದಕ್ಕೆ ಏನೇನು ಬೇಕೋ ಆ ಕೆಲಸಗಳನ್ನು ಮಾಡಬೇಕೆಂಬುದಾಗಿ ನಾವು ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ಹೇಳಿದ್ದೇವೆ. 1947ನೇ ಇಸವಿಯಿಂದ ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದಮೇಲೆ, ನಿಮ್ಮ ಕಾಂಗ್ರೆಸ್ಸಿನ ಅಧಿಕಾರದ ಅವಧಿಯಲ್ಲಿ ಏನೂ ಆಗಲಿಲ್ಲವೆಂಬುದನ್ನು ಸಮರ್ಥನೆ ಮಾಡಿದ್ದೇವೆ. ನಿಮ್ಮ ಕಾಂಗ್ರೆಸ್ ಸರ್ಕಾರ ಇವತ್ತು ಅದರ ಬಗ್ಗೆ ಏನೂ ಮಾಡಲಿಲ್ಲವೆಂದು ಒಪ್ಪಿಕೊಂಡಿದ್ದು ಒಳ್ಳೆಯದು. ಮಾಜೀ ಮುಖ್ಯ ಮಂತ್ರಿಗಳೂ, ಮತ್ತು ಮಾನ್ಯ ಶ್ರೀ ಕೃಷ್ಣಪ್ಪನವರೂ ಕೂಡ ಅವರ ಮಂತ್ರಿಮಂಡಲದಲ್ಲಿ ಇದರ ಬಗ್ಗೆ ಏನೂ ಮಾಡಲಿಲ್ಲವೆಂದು ಹೇಳಿದ್ದು ಬಹಳ ಒಳ್ಳೆಯದು. ಎಲೆಕ್ಷನ್ ಬಂದಾಗ ಎಲ್ಲರೂ ಒಂದಾಗುತ್ತಾರೆ. ಕಾವೇರಿ ಯೋಜನೆಗಳನ್ನು 1974ನೇ ಇಸವಿಯೊಳಗೆ ಕಟ್ಟುತ್ತೇವೆಂದು ಹೇಳಿದಾಗ ನಿಮ್ಮ ಕಡೆ ಚಪ್ಪಾಳೆ ತಟ್ಟಿದರು. 1974ನೇ ಇಸವಿಯೊಳಗೆ ಅಲ್ಲಿ ನೀರನ್ನು ತುಂಬಿ ಪೂರ್ತಿಯಾಗಿ ಆ ನೀರನ್ನು ಉಪಯೋಗಿಸುತ್ತೇವೆಂದು ಹೇಳಿದ್ದನ್ನು ಕೂಡಲೇ ನೆರವೇರಿಸಬೇಕೆಂದು ನಾವು ಈ ನಿರ್ಣಯವನ್ನು ತಂದಿದ್ದೇವೆ. ನಿಮ್ಮ ಸ್ನೇಹಿತರಾದ ಮಾನ್ಯ ಶ್ರೀ ದೇವೇಗೌಡರು 1966ನೇ ಇಸವಿಯಲ್ಲಿ ತಂದಿರುವ ನಿರ್ಣಯದ ಪ್ರಕಾರ 1974ರೊಳಗೇ ಎಲ್ಲಾ ನದಿಗಳಲ್ಲಿರುವ ನೀರಿನ ಸಫಲತ್ತನ್ನು ಉಪಯೋಗಿಸಿ ಕಾವೇರಿ ನದಿಯ ನೀರನ್ನು ಪೂರ್ತಿಯಾಗಿ ಉಪಯೋಗಿಸುತ್ತೇವೆಂದು ಹೇಳಿದ್ದಾರೆ. ಈ ನಿರ್ಣಯವನ್ನೇ ನಾನು ಪುನರುಚ್ಚಾರ ಮಾಡಿದ್ದೇನೆ. ಚಾಚೂ ತಪ್ಪು ಮಾಡಿಲ್ಲ. ಮೊನ್ನೆ ಈ ತಿದ್ದುಪಡಿ ತಂದು ಅವರು ಮಾಡಿದ ನಿರ್ಣಯಕ್ಕೆ ಅವರೇ ಅವಮಾನ ಮಾಡಿದ್ದಾರೆ. ನೀವು ನಮ್ಮ ನಿರ್ಣಯಕ್ಕೆ ಅವಮಾನ ಮಾಡಿದರೂ ನಾನು ಬಿಡುವುದಿಲ್ಲ. ಶ್ರೀಮಾನ್ ದೇವೇಗೌಡರು ಏನು ಒಂದು ನಿಲುವು ತೆಗೆದುಕೊಂಡಿದ್ದಾರೆ ಅದು ಶ್ಲಾಘನೀಯವಾದುದು. ಆ ನಿಲುವನ್ನು ಪುಷ್ಟೀಕರಿಸಿದ್ದೇವೆಯೇ ಹೊರತು ಬೇರೆ ಏನೂ ಇಲ್ಲ. ಯಾವುದೇ ನಿರ್ಣಯ ಇರಲಿ, ಸ್ಪಷ್ಟವಾಗಿರಬೇಕು. ತಿದ್ದುಪಡಿ ಕೊಟ್ಟಿರುವುದು ಅಸ್ಪಷ್ಟವಾಗಿದೆ. ಮುಖ್ಯಮಂತ್ರಿಗಳು 1974ರ ಒಳಗೆ ಯೋಜನೆಗಳನ್ನು ಕಾರ್ಯಗತ ಮಾಡುತ್ತೇವೆ ಎಂದು ಹೇಳಿರುವುದರಿಂದ ತಮ್ಮ ಅಮೆಂಡ್‌ಮೆಂಟ್ ಅನಾವಶ್ಯಕ. ಆದುದರಿಂದ ತಾವು ತಂದಿರತಕ್ಕ ತಿದ್ದುಪಡಿ ವಾಪಸ್ಸು ತೆಗೆದುಕೊಂಡು ಈ ಮೂಲ ನಿರ್ಣಯವನ್ನು ಒಪ್ಪಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ತಮ್ಮ ಮೋಷನ್‌ನಲ್ಲಿ ಸ್ಪೆಸಿಫಿಕ್ ಪ್ರಾಜೆಕ್ಟ್ಸ್ ಮೆನ್‌ಷನ್ ಮಾಡಿದ್ದೀರಿ. ಇದರಲ್ಲಿ ಷೆಡ್ಯೂಲ್ ಮತ್ತು ನಾನ್ ಷೆಡ್ಯೂಲ್ ರಿವರ್ಸ್ ಕವರ್ ಆಗುತ್ತದೆ. 45 ಟಿ.ಎಂ.ಸಿ.ಎಫ್.ಟಿ. ನೀರು 1974ರ ಒಳಗೆ ಉಪಯೋಗಿಸಿಕೊಳ್ಳಬೇಕು ಎಂದು ಶ್ರೀ ಗೋಪಾಲಗೌಡರೂ ಒಂದು ಅಭಿಪ್ರಾಯ ಕೊಟ್ಟರು. ಅದನ್ನು ಇನ್‌ಕಾರ್ಪೋರೇಟ್ ಮಾಡಿ ಬೇರೆ ರೆಸಲ್ಯೂಷನ್ ತನ್ನಿ.

ಶ್ರೀ ಎಸ್. ಶಿವಪ್ಪ.—ಮುಖ್ಯಮಂತ್ರಿಗಳು ಈ ಸಭೆಗೆ ಏನು ಆಶ್ವಾಸನೆ ಕೊಟ್ಟರೋ ಅದು ಬಿಟ್ಟು ಬೇರೆ ಏನೂ ಇಲ್ಲ, ಅದನ್ನು ಒಪ್ಪಿಕೊಳ್ಳುವುದರಿಂದ ನಿಮಗೂ ಕೂಡ ಇದರಿಂದ ಶಕ್ತಿ ಬರುವುದಲ್ಲದೆ ನೀವು ಏನು ಮಾಡಿದರೂ ನಿಮ್ಮ ಹಿಂದೆ ಶಾಸನಸಭೆ ಇದೆ ಎನ್ನುವುದು ಸ್ಪಷ್ಟವಾಗುತ್ತದೆ. ಆದುದರಿಂದ ಈ ನಿರ್ಣಯಕ್ಕೆ ತಂದಿರತಕ್ಕಂಥ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡು ಈ ಮೂಲ ನಿರ್ಣಯವನ್ನು ಒಪ್ಪಿಕೊಳ್ಳಬೇಕು ಎಂದು ಹೇಳಿ ಈ ನಿರ್ಣಯವನ್ನು ಸಭೆಯ ಒಪ್ಪಿಗೆಗೆ ಇಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮುಖ್ಯಮಂತ್ರಿಗಳು ಉತ್ತರದಲ್ಲಿ ಹೇಳಿದರು ಕಾವೇರಿ ನೀರಿನ ವಿಷಯದಲ್ಲಿ ಜನಗಳ ಹಕ್ಕುಭಾಧ್ಯತೆಗಳನ್ನು ಕಾಪಾಡುವುದು ಧರ್ಮ ಎಂದು ತಿಳಿದು

ಕೊಂಡಿದ್ದೇವೆ ಎಂದು. ಹಾಗಿದ್ದರೆ 1956ನೇ ಇಸವಿಯಿಂದ ಇಲ್ಲಿಯವರೆಗೆ ಕೃಷ್ಣಾ ಬೇಸಿನ್‌ಗೆ 37 ಕೋಟಿ 89 ಲಕ್ಷ ರೂಪಾಯಿ ಖರ್ಚಾಗಿದೆ. ಕಾವೇರಿ ಬೇಸಿನ್‌ಗೆ 8 ಕೋಟಿ 90 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಇಷ್ಟು ದುಡ್ಡನ್ನು 1974ನೇ ಇಸವಿಯ ದೃಷ್ಟಿ ಇಟ್ಟುಕೊಂಡು ಸಮಭಾಗ ವಾಗಿ ಹಂಚಿ ಕೆಲಸ ಮಾಡಬೇಕಾಗಿತ್ತು. ಅದನ್ನು ಮಾಡುವುದಕ್ಕೆ ತೊಂದರೆ ಏನು ಇತ್ತು ?

ಶ್ರೀ ಎನ್. ಎ. ಚನ್ನೇಗೌಡ.—ಸ್ವಾಮಿ, ಶ್ರೀಮಾನ್ ಚೆನ್ನಬಸಪ್ಪನವರ ಭಾಷಣವನ್ನೂ ಕೇಳಿದೆ. ಶ್ರೀಮಾನ್ ವೀರೇಂದ್ರಪಾಟೀಲರ ಭಾಷಣವನ್ನೂ ಕೇಳಿದೆ. ಶ್ರೀಮಾನ್ ಚೆನ್ನಬಸಪ್ಪ ನವರು ಹೇಳಿದರು ವೀರೇಂದ್ರ ಪಾಟೀಲರವರ ಕಾಲದಲ್ಲಿ ಕಾವೇರಿ ಬೇಸಿನ್ ಕೆಲಸ ಆಗಲಿಲ್ಲ ಎಂದು. ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ ಚೆನ್ನಬಸಪ್ಪನವರ ಕಾಲದಲ್ಲಿ ಏನೂ ಆಗಲಿಲ್ಲ ಎಂದು ಹೇಳಿದರು. 1966ನೇ ಇಸವಿಯಲ್ಲಿ ಆಗಿರತಕ್ಕಂಥ ರೆಸಲ್ಯೂಷನ್‌ಗೆ ಉತ್ತರವಾಗಿ ಆಗಿನ ಮಂತ್ರಿಗಳು 1974ನೇ ಇಸವಿಯೊಳಗೆ ಎಲ್ಲಾ ಕೆಲಸ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದೇ ರೀತಿ 1974 ಆದ ಮೇಲೆ ಕಾಂಗ್ರೆಸ್ ಮುಖ್ಯಮಂತ್ರಿಗಳು ಬೇರೆ ಇನ್ನು ಯಾರಾದರೂ ಬಂದು 1974ರ ತನಕ ವೀರೇಂದ್ರ ಪಾಟೀಲರ ಕಾಲದಲ್ಲಿ ಏನೂ ಕೆಲಸ ಆಗಲಿಲ್ಲ ಎಂದು ಅವರು ಉತ್ತರ ಹೇಳಿದರೆ ಕಾವೇರಿ ಬೇಸಿನ್‌ನಲ್ಲಿರತಕ್ಕಂಥವರ ಗತಿ ಕಾವೇರಮ್ಮನ ಪಾಲು ಆಗಬೇಕಾಗುತ್ತದೆ.

ಶ್ರೀ ಹೆಚ್. ಎನ್. ನಂಜೇಗೌಡ.—ನಾನ್ ಷೆಡ್ಯೂಲ್ ರಿವರ್ಸ್ ಹಾರಂಗಿ, ಕಂಬದಕಡ ಇದರ ಬಗ್ಗೆ ನಿರ್ದಿಷ್ಟವಾಗಿ ಉತ್ತರ ಕೊಡಲಿಲ್ಲ. ಆ ಪ್ರದೇಶದಿಂದ ಬರತಕ್ಕ ಜನರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಟ್ಟರೆ ನೀವು ಕೆಲಸ ಮಾಡುತ್ತೀರಾ ಎಂದು ತಿಳಿದುಕೊಳ್ಳೋಣವೇ ಅಥವಾ ಸುವೋಮೋಟೊ ಸರ್ಕಾರದವರೇ ಮಾಡುತ್ತಾರೆಯೇ ಎಂದು ತಿಳಿದುಕೊಳ್ಳೋಣವೇ ? ಇದರ ಬಗ್ಗೆ ಸರ್ಕಾರದವರು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಮುಖ್ಯವಾದ ಪ್ರಾಜೆಕ್ಟ್ಸ್ ಏನು ಇವೆ ಅವುಗಳನ್ನು ಪೂರೈಸಿ 1974ರಲ್ಲಿ ನೀರು ನಿಲ್ಲಿಸುವ ಹಕ್ಕು ಹೋಗದಂತೆ ಏರ್ಪಾಡು ಮಾಡಬೇಕಾದುದು ಧರ್ಮ, ಮಾಡುತ್ತೇವೆ ಎಂದು ಹೇಳಿದರು. ಇದು ಷೆಡ್ಯೂಲ್ ಮತ್ತು ನಾನ್ ಷೆಡ್ಯೂಲ್ ಪ್ರಶ್ನೆ ಅಲ್ಲ. Let us not go into details because it is only two people who can understand the technical details. I take it that the Chief Minister would stand by his assurance that he would take it as a mission to see that all the projects come to impounding stage and utilization stage. ಕಾವೇರಿ, ಕಂಬದಕಡ, ಹೇಮಾವತಿ, ಕಬಿನಿ ಇವು ನಾಲ್ಕೂ ಮುಖ್ಯವಾದುದು. ಬಾಕಿಯುದು ಅಷ್ಟು ಪ್ರಾಮುಖ್ಯವಾದುದಲ್ಲ. ಈ ನಾಲ್ಕು ಪ್ರಾಜೆಕ್ಟ್‌ಗಳು ಏನು ಇವೆ ಅದನ್ನು ತೆಗೆದುಕೊಳ್ಳುವುದಕ್ಕೆ ತಾವು ಅಭಿಪ್ರಾಯ ಪಟ್ಟಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಅದು ಸರಿ ತಾನೆ ?

ಶ್ರೀ ವೀರೇಂದ್ರ ಪಾಟೀಲ್.—ಮೊಟ್ಟಮೊದಲನೆಯದಾಗಿ ಶ್ರೀಮಾನ್ ಹುಚ್ಚಮಾಸ್ತಿಗೌಡರು ಒಂದು ಪ್ರಶ್ನೆ ಕೇಳಿದರು. ಕೃಷ್ಣಾ ಬೇಸಿನ್‌ಗೆ ಎಷ್ಟು ದುಡ್ಡು ಖರ್ಚು ಮಾಡಿದರು ಅಷ್ಟು ದುಡ್ಡನ್ನು ಕಾವೇರಿ ಬೇಸಿನ್‌ಗೆ ಖರ್ಚು ಮಾಡಿಲ್ಲ ಎಂದು. ಮಾನ್ಯ ಸದಸ್ಯರಿಗೆ ಈ ವಿಷಯ ಗೊತ್ತಾಗಬೇಕು. ಕಾವೇರಿ ಬೇಸಿನ್‌ನಲ್ಲಿ ಅವರ ಅಗ್ರಿಮೆಂಟ್ ಪ್ರಕಾರ ನಾವು ನೀರು ಉಪಯೋಗ ಮಾಡಿಕೊಳ್ಳ ಬೇಕಾದ್ದು 45 ಟಿ.ಎಂ.ಸಿ.ಎಫ್.ಟಿ. ಕೃಷ್ಣಾದಲ್ಲಿ ಅಗ್ರಿಮೆಂಟ್ ಆಗಿಲ್ಲ. ಆರ್ಬಿಟ್ರೇಷನ್‌ಗೆ ಹೋಗಿದೆ. ಈ ಮಧ್ಯದಲ್ಲಿ ಗೌರ್ನಮೆಂಟ್ ಆಫ್ ಇಂಡಿಯಾ ಸ್ಟೇಟ್‌ಮೆಂಟ್ ಮುಖಾಂತರ ಇಂಟೀರಿಯಮ್ ಅಲೋಕೇಷನ್ 600 ಟಿ.ಎಂ.ಸಿ.ಎಫ್.ಟಿ. ಇದೆ. ಅದರ ಪ್ರಕಾರ 300 ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಅವರು ಯಾವ ವಿಚಾರಕ್ಕೆ ಹೇಳಿದರೋ ಗೊತ್ತಿಲ್ಲ. ಕಾವೇರಿಗೆ ಎಷ್ಟು ದುಡ್ಡನ್ನು ಖರ್ಚು ಮಾಡಬೇಕೋ ಅಷ್ಟನ್ನು ಅಲ್ಲ ಖರ್ಚು ಮಾಡುತ್ತೇವೆ. ಆದರೆ ಕಾವೇರಿ ಪ್ರಾಜೆಕ್ಟಿಗೆ ಇಟ್ಟಿದ್ದ ದುಡ್ಡನ್ನು ಅಪ್ಪರ್ ಕೃಷ್ಣಾಗೆ ಕೊಡಿರಿ ಎಂದು ಹೇಳುವುದಕ್ಕಾಗುವುದಿಲ್ಲ. ಅಪ್ಪರ್ ಕೃಷ್ಣದಂತಹ ಯೋಜನೆಯನ್ನು ಎಲ್ಲ ಕಡೆಯೂ ಕಟ್ಟುವುದಕ್ಕಾಗುವುದಿಲ್ಲ, ತುಂಗಭದ್ರ ಯೋಜನೆಯನ್ನು ಎಲ್ಲ ಕಡೆಯೂ ಕಟ್ಟುವುದ ಕ್ಕಾಗುವುದಿಲ್ಲ. ನಮಗೆ ಈ ಹೊತ್ತಿನ ದಿವಸ ವಿಚಾರವೇನಿರಬೇಕು ಎಂದರೆ ರಾಜ್ಯದಲ್ಲಿ ಎಲ್ಲೆಲ್ಲಿ ಜಲಾಶಯಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲ ನಿರ್ಮಾಣ ಮಾಡಿ ನೀರಿನ ಪೂರ್ಣ ಉಪಯೋಗ ಮಾಡಿಕೊಳ್ಳಬೇಕೆಂಬ ಅಭಿಪ್ರಾಯವಿದೆಯೇ ಹೊರತು ಇಂಥ ಕಡೆಯೇ ಖರ್ಚು ಮಾಡಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ ಎನ್ನುವ ಮಾತನ್ನು ನಾನು ವಿನಯದಿಂದ ಹೇಳುತ್ತೇನೆ.

(ಶ್ರೀ ವೀರೇಂದ್ರ ಪಾಟೀಲ್)

ಮಾನ್ಯ ಚನ್ನಬಸಪ್ಪನವರು ಒಂದು ವಿಚಾರವನ್ನು ಹೇಳಿದರು. 1974ರ ಒಳಗಾಗಿ ಇಂಪೌಂಡಿಂಗ್ ಸ್ಟೇಜಿಗೆ ಎಲ್ಲಾ ಯೋಜನೆಗಳೂ ಬರುತ್ತವೆ ಎನ್ನುವ ಮಾತನ್ನು ಹೇಳಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅದು ನಿಜವಲ್ಲವೇ ಎಂದು ಕೇಳಿದರು. ನಾನು ಷೆಡ್ಯೂಲ್ಡ್ ರಿವರ್ಸ್ ಬಗ್ಗೆ ಮಾತನಾಡುತ್ತ ಹೇಳಿದೆ, ಹೇಮಾವತಿ ಮತ್ತು ಕಬಿನಿ ಇವೆರಡರಲ್ಲಿಯೂ 1974ರ ಒಳಗೆ ನೀರು ನಿಲ್ಲುವಂತೆ ಮಾಡುತ್ತೇವೆ ಎನ್ನುವಂಥ ಭರವಸೆಯನ್ನು ಕೊಟ್ಟಿದ್ದೇನೆ. ಷೆಡ್ಯೂಲ್ ರಿವರ್ಸ್ ಮೇಲೆ ಉಳಿದಂಥದ್ದು ಲಕ್ಷಣತೀರ್ಥ 1.5 ಟಿ.ಎಂ.ಸಿ. ಅಡಿ, ಕಂಬದಕಡ ಇಂಥ ಸಣ್ಣಪುಟ್ಟ ಪ್ರಾಜೆಕ್ಟ್‌ಗಳು. ನಾನ್ ಷೆಡ್ಯೂಲ್ಡ್ ರಿವರ್ಸ್‌ನಲ್ಲಿ ಬರುವ ಪ್ರಾಜೆಕ್ಟ್‌ಗಳನ್ನೂ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಇದೆ. ಈ ಹೊತ್ತು ಹಾರಂಗಿ ಯೋಜನೆಗೆ ಸಂಬಂಧಪಟ್ಟಂತೆ ಅನೇಕ ಜನ ರೈತರು ಬಂದಿದ್ದರು. ದುಡ್ಡು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ, ನಮ್ಮ ಆಸ್ತಿಯನ್ನು ಈಡುಮಾಡಿ ಸಾಲ ತೆಗೆದುಕೊಂಡು ಕೊಡುತ್ತೇವೆ, ಕೆಲಸ ಮಾಡಿಕೊಡಿ ಎಂದು ಹೇಳಿದರು. ನೀವು ದುಡ್ಡು ಕೊಡುವುದಾಗಿ ಉತ್ಸಾಹದಿಂದ ಬಂದಿರುವಾಗ ಹಾರಂಗಿ ಯೋಜನೆಯ ಕೆಲಸವನ್ನು ತೆಗೆದುಕೊಳ್ಳಲು ಕ್ರಮ ತೆಗೆದುಕೊಳ್ಳುತ್ತೇವೆ, ನಿಮ್ಮ ಮಾತಿನಂತೆ ನೀವು ನಡೆದುಕೊಳ್ಳಿ, ನಮ್ಮ ಮಾತಿನಂತೆ ನಾವೂ ನಡೆದುಕೊಳ್ಳುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೇನೆಂದು ನಗಲೇ ಹೇಳಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಬಿನಿ ಯೋಜನೆಯನ್ನು ಇದರಲ್ಲಿ ಸೇರಿಸುವುದಕ್ಕೆ ಆಗುವುದಿಲ್ಲ. ಅದು ಅಫ್‌ಸೆಟ್ ರಿಸರ್ವಾಯರ್. 45 ಟಿ.ಎಂ.ಸಿ.ಯಲ್ಲಿ ಅದು ಬರುವುದಿಲ್ಲ. ಅದಕ್ಕೂ ಇದಕ್ಕೂ ಲಾಗು ಮಾಡುವುದು ಸರಿಯಲ್ಲ. ಕಂಬದಕಡ, ಹೇಮಾವತಿ, ಲಕ್ಷ್ಮಣತೀರ್ಥ, ಹಾರಂಗಿ, ಇದರಲ್ಲಿ ಹಾರಂಗಿ ಷೆಡ್ಯೂಲ್ ರಿವರ್ ಅಲ್ಲ. 45 ಟಿ.ಎಂ.ಸಿ. ಯಲ್ಲಿ ಕಂಬದಕಡ 5 ಟಿ.ಎಂ.ಸಿ. ಹೇಮಾವತಿ 22 ಟಿ.ಎಂ.ಸಿ. ಲಕ್ಷ್ಮಣ ತೀರ್ಥ ಇವೆಲ್ಲ ಬರುತ್ತವೆ. 45 ಟಿ.ಎಂ.ಸಿ. ಯಲ್ಲಿ ಕಬಿನಿ ಬರುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೇ ನಾನು ಹೇಳಿದೆ, ಅನೇಕ ವಿಚಾರಗಳನ್ನು ಕೆದರಿ ಕೆದರಿ ಕೇಳಬೇಕಾದ ಅವಶ್ಯಕತೆ ಇಲ್ಲವೆಂದು. 45 ಟಿ.ಎಂ.ಸಿ. ನೀರು ಉಪಯೋಗ ಮಾಡಿಕೊಳ್ಳಲು ಷೆಡ್ಯೂಲ್ ರಿವರ್ಸ್ ಮೇಲೆ ಮಾಡುವುದಕ್ಕೆ ನಮ್ಮ ಹತ್ತಿರ ಪ್ರಾಜೆಕ್ಟ್‌ಗಳಿಲ್ಲ. 45 ಟಿ.ಎಂ.ಸಿ. ನಾವು ಉಪಯೋಗ ಮಾಡುತ್ತೇವೆ, ಹಾಗೆ ಮಾಡುವಂಥ ಪರಿಸ್ಥಿತಿಗೆ ಬರುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದೇನೆ. ಮಾನ್ಯ ಸದಸ್ಯರು ಕಬಿನಿ ಬಗ್ಗೆ ಕೇಳುತ್ತಿದ್ದಾರೆ. ಹೆಚ್ಚು ಹೇಳುವುದಕ್ಕೆ ಹೋದರೆ ಕಾಂಪ್ಲಿಕೇಷನ್ಸ್ ಆಗುತ್ತವೆ; ಬಹಳ ಕಷ್ಟವಾದ ಪ್ರಶ್ನೆ ಬರುತ್ತದೆ. ಅಗ್ರಿಮೆಂಟ್ ಪ್ರಕಾರ 45 ಟಿ.ಎಂ.ಸಿ. ನೀರು ಇದೆ. ಅದನ್ನು ಹೋಗುವುದಕ್ಕೆ ಬಿಡದಂತೆ ಯಾವರೀತಿಯಿಂದ ಉಪಯೋಗ ಮಾಡೋಣ ಎನ್ನುವುದು ನಮ್ಮ ಪ್ರಯತ್ನವಾಗಿದೆ. ಷೆಡ್ಯೂಲ್ಡ್ ಅಥವಾ ನಾನ್ ಷೆಡ್ಯೂಲ್ಡ್ ರಿವರ್ಸ್ ಯಾವುದೇ ಆಗಲೀ 45 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳುವಂಥ ಪರಿಸ್ಥಿತಿಗೆ ನಾವು ಬರಬೇಕಾಗಿದೆ. ಆ ತಯಾರಿ ಮಾಡುತ್ತಿದ್ದೇವೆ. ಅದನ್ನು ಕೆದರಿ ಕೆದರಿ ಏನು ಮಾಡುತ್ತೀರಿ, ಏನು ಮಾಡುತ್ತೀರಿ, ಎಲ್ಲವನ್ನೂ ಹೊರಗೆಡವಿ ಎಂದು ಕೇಳಿದರೆ ಆ ರೀತಿ ಮಾಡುವುದಕ್ಕಾಗುವುದಿಲ್ಲ ಎಂದು ಮಾತ್ರ ಹೇಳುತ್ತೇನೆ.

Sri H. SIDDAVEERAPPA.—I hope the Leader of the House also will advise his partymen not to press the amendment, in view of what he has stated. There will be no need for the amendment. If the amendment is allowed, it will nullify his statement.

ಶ್ರೀ ವೀರೇಂದ್ರ ಪಾಟೀಲ್.—ನಾವೆಲ್ಲ ವಿಚಾರ ಮಾಡಿ ಈ ರೀತಿಯ ತಿದ್ದುಪಡಿಯನ್ನು ತಂದಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ತಂದಿರುವಂಥ ಮೋಷನ್‌ನಲ್ಲಿ ಅಥವಾ ರೆಸಲ್ಯೂಷನ್‌ನಲ್ಲಿರುವ ಎರಡು ವಿಚಾರಗಳ ಬಗ್ಗೆ ನಾವು ಒಪ್ಪುವುದಕ್ಕಾಗುವುದಿಲ್ಲ, ಹಾರಂಗಿ, ಹೇಮಾವತಿ ಮತ್ತು ಕಬಿನಿ ಇತ್ಯಾದಿ ಎಂದು ಅವರು ಹೇಳಿದ್ದಾರೆ. ಹೇಳಿದರೆ ಕಷ್ಟ, ಹೇಳಲಾಗದೆ ಇದ್ದರೆ ಕಷ್ಟವಾಗುತ್ತದೆ. ಕ್ಲಿಯರೆನ್ಸ್ ಸಲುವಾಗಿ ಕಷ್ಟವಿರುವುದರಿಂದ, ಕ್ಲಿಯರೆನ್ಸ್ ಬಗ್ಗೆ ಜಗಳವಿರುವುದರಿಂದ ರೆಸಲ್ಯೂಷನ್ ಬಗ್ಗೆ ಎರಡು ಮಾತು ಬೇಡ ಎನ್ನುವ ದೃಷ್ಟಿಯಿಂದ ಜನರಲ್ ಆಗಿ ಮಾಡಿದ್ದೇವೆ. ಅಗ್ರಿಮೆಂಟ್ ರೆಫರೆನ್ಸ್ ಕೊಡುತ್ತಿದ್ದಾರೆ, ಅಗ್ರಿಮೆಂಟ್ ಪ್ರಕಾರ ಏನು ಉಳಿಯುತ್ತದೆ ಎನ್ನುವ ವಿಚಾರವನ್ನು ಮಾನ್ಯ ಚನ್ನಬಸಪ್ಪನವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದಕ್ಕಾಗಿ ಅಗ್ರಿಮೆಂಟ್ ರೆಫರೆನ್ಸ್ ಬೇಡ, ಇಂಥದೇ ಪ್ರಾಜೆಕ್ಟ್ ಎನ್ನುವ ರೆಫರೆನ್ಸ್ ಬೇಡ ಎನ್ನುವ ದೃಷ್ಟಿಯಿಂದ ನಾವು ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಅವರು ತಂದಿರುವ

ನಿರ್ಣಯಕ್ಕಿಂತಲೂ ತಿದ್ದುಪಡಿ ಹೆಚ್ಚು ಎಫೆಕ್ಟಿವ್ ಆಗಿದೆ ಮತ್ತು ರಾಜ್ಯಕ್ಕೆ ಅನುಕೂಲ ವಾಗುವಂಥ ತಿದ್ದುಪಡಿಯಿರುವುದರಿಂದ ಅವರೇ ಯುನಾನಿಮಸ್ ಆಗಿ ಒಪ್ಪಿಕೊಂಡರೆ ಈ ಪ್ರಶ್ನೆ ಬಗೆಹರಿಯುತ್ತದೆ.

Mr. SPEAKER.—Now, I shall put the amendment first to the vote of the House.

Sri H. N. NANJE GOWDA.—It may be taken up tomorrow.

Sri S. SIVAPPA.—Well, Sir, what are you doing? If you want to put it to the vote of the House, we will walk out. This is an issue where we should come to an understanding. If possible, the Chair may please adjourn the House.

Mr. SPEAKER.—Who prevents the members from coming to an understanding?

Sri H. N. NANJE GOWDA.—The Chair may please put it to the vote of the House tomorrow.

Mr. SPEAKER.—It is not possible; I cannot wait till tomorrow. If it is to be postponed till tomorrow, I shall put the Motion to the House, and if they agree, it is all right.

Sri S. SIVAPPA.—We know the mind of the Chief Minister. If he is sincere in his words that he is going to implement all the important projects sincerely by 1974 in the Cauvery basin, he has to agree to the Motion.

Sri VEERENDRA PATIL.—I have made my position very clear in my speech, as to how I am going to take up this programme on what project I am going to concentrate and how the projects are going to take shape by 1974. It is for the House to accept the amendment or reject it. So far as the Chair is concerned, it is not for you, Sir, to effect any compromise between the Leader of the Opposition and the Leader of the House. It is for both of them to sit and come to an understanding. Since the Leader of the Opposition says that he cannot agree to the amendment, the only course left to the Chair is to leave it to the House.

9-00 P.M.

Sri K. H. PATIL.—I rise to a point of order. The hour of the meeting was up to 7 P.M. and there was no motion put before the House for extending the time. It would therefore not be proper if the motion is put to vote at this late hour when many of the hon. Members may not be aware of the session going on beyond 7 P.M.

Sri L. SRIKANTIAH.—Sir, with the permission of the Chair and if no one in this House mistakes me, I would like to make a suggestion for consideration of this House. There has been a good deal of discussion on the subject and let us leave it at that. Let not the motion be voted by this House.

Mr. SPEAKER.—It is a very good suggestion.

ಶ್ರೀ ಎಚ್. ಎಂ. ಚನ್ನಬಸಪ್ಪ.—ಓಟು ಮಾಡಿಯೇ ತೀರಬೇಕೆಂದಿದ್ದರೆ ಮಾಡಿಸಿಬಿಡಿ. ಅದರಿಂದ ಪ್ರಪಂಚ ತಲೆಕೆಳಗಾಗುವುದೇ ?

Sri K. PUTTASWAMY (Minister for Law, Labour and Parliamentary Affairs).—Sir, a suggestion has been made by hon. Member Sri Srikantiah that the discussion may conclude at this stage and the motion need need not be voted. I think by agreeing to that suggestion both sides would have gained their points of view. I would also request the House to accept the suggestion made by the hon. Member.

Mr. SPEAKER.—The hon. Member Sri Srikantiah has made a suggestion that voting need not be insisted upon by either side. What has the Hon. Leader of the Opposition to say in the matter ?

Sri S. SIVAPPA.—If the House feels that they cannot give a verdict on a resolution like this I have nothing to say. It is left to the House to decide in any manner it desires.

Sri K. H. PATIL.—I want a ruling on my point of order.

Mr. SPEAKER.—As to the point of order raised by hon. Member Sri K. H. Patil, by implication the time happens to be extended with the consent of the House and as such there is no point of order.

Fortunately now that the hon. Member Sri Srikantiah has made a very good suggestion, may I request both the sides not to press their motions and allow them to be dropped.

Sri K. PUTTASWAMY.—No question of dropping, Sir. It is just talked over. Anyway, it is left to the Hon. Leader of the Opposition Sri S. Sivappa to decide whether to drop the motion or not, since he has moved the motion?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮಗೆ ಗೊತ್ತಿರುವುದು ಅದೊಂದೇ. ರೂಲ್ 146 ನೆಯ ನಿಯಮದ ಪ್ರಕಾರ ಮಾಡಬಹುದು.

† ಶ್ರೀ ಡಿ. ದೇವರಾಜ ಅರಸ್.—146 ನೆಯ ರೂಲ್ ಪ್ರಕಾರ ಮೋಷನ್ ಅಡ್ಮಿಟ್ ಮಾಡಿದ್ದೀರಿ, ಅದರ ಪ್ರಕಾರ ಓಟಿಗೆ ಹಾಕಬೇಕೆಂದು ಶ್ರೀ ಚನ್ನಬಸಪ್ಪನವರು ಹೇಳುತ್ತಿದ್ದಾರೆ. ಈ ಸಭೆ ಒಪ್ಪಿದರೆ ತಾವು ಅನುಮತಿ ಕೊಟ್ಟರೆ ಯಾವ ರೂಲ್ ಬೇಕಾದರೂ ಸಸ್ಪೆಂಡ್ ಮಾಡಬಹುದು, ಅದು ದೊಡ್ಡದಲ್ಲ. ಶ್ರೀಮಾನ್ ಶ್ರೀಕಂಠಯ್ಯನವರು ಕೊಟ್ಟಿರುವ ಸಲಹೆ ಸಾಧುವಾಗಿದೆ ಎಂದು ಲಾ ಸಚಿವರು ಸಹ ಹೇಳಿದ್ದಾರೆ, ಅದನ್ನು ಒಪ್ಪಬಹುದು, ಅದು ಎಲ್ಲರಿಗೂ ಸಮಾಧಾನಕರವಾಗಿರಬಹುದು. ಇದನ್ನು ಶ್ರೀಮಾನ್ ಚನ್ನಬಸಪ್ಪನವರು ಮತ್ತು ಇತರರು ಯೋಚನೆಮಾಡುವುದು ಒಳ್ಳೆಯದು. 1966 ರಲ್ಲಿ ಒಂದು ನಿರ್ಣಯ ಸರ್ವಾನುಮತದಿಂದ ಒಪ್ಪಲ್ಪಟ್ಟಿದೆ, ಶ್ರೀ ಶಿವಪ್ಪನವರು ತಂದಿರುವ ಮೋಷನ್ ಕೂಡ ಅದೇ ಧಾಟಿಯಲ್ಲಿದೆ. ಇಲ್ಲೇನು ಮಾಡಿದ್ದಾರೆಂದರೆ ಸ್ಪೆಸಿಫಿಕ್ಕಾಗಿ ಕೆಲವು ಪ್ರಾಜೆಕ್ಟ್‌ಗಳ ಹೆಸರುಗಳನ್ನು ತಿಳಿಸಿ ಇತ್ಯಾದಿ ಎಂದು ಸೂಚಿಸಿದ್ದಾರೆ. ಮುಖ್ಯ ಮಂತ್ರಿಗಳು ಹೇಳಿರುವ ಪ್ರಕಾರ ಪ್ರಾಜೆಕ್ಟ್ ಹೆಸರುಗಳನ್ನು ಹಾಕುವುದರಿಂದ ಕೆಲವು ತೊಂದರೆಗಳು ಬರುತ್ತವೆ, ನಮ್ಮ ಪಾಲಿನ ನೀರಿನ ಉಪಯೋಗ ಮಾಡುವ ಹಿತದೃಷ್ಟಿಯಿಂದ ಹಾಗೆ ಮಾಡುವುದು ಸರಿಯಲ್ಲವೆಂಬುದು ಖಚಿತವಾಗಿದೆ. ಹಾಗಿರುವಾಗ ಒಂದು ತಿದ್ದುಪಡಿ ಬಂದಿದೆ. ನನ್ನ ಅಭಿಪ್ರಾಯವನ್ನು ಮೊದಲೇ ಮಾತನಾಡುವಾಗ ಸೂಚಿಸಿದ್ದೇನೆ. 1966 ರ ನಿರ್ಣಯ ನಮ್ಮ ಮುಂದಿಲ್ಲದಿದ್ದರೆ ನಮ್ಮ ಮಿತ್ರರು ತಂದಿರುವ ತಿದ್ದುಪಡಿಯನ್ನು ಯೋಚನೆಮಾಡಬಹುದಾಗಿತ್ತು. ಹಿಂದೆ ಒಂದು ನಿರ್ಣಯ ಆಗಿದೆ. 1974 ರೊಳಗೆ ಮುಗಿಸಬೇಕೆಂದು ಹಿಂದೆ ಒಪ್ಪಿ ಇಲ್ಲಿ ನಾಲ್ಕನೆಯ ಯೋಜನೆಯಲ್ಲಿ ಸಾಧ್ಯವಾದಮಟ್ಟಿಗೆ ಮಾಡಿ ಎಂದು ಹೇಳುವುದು ಸಮಂಜಸವಲ್ಲ; ವಿರೋಧ ಎಂದು ಹೇಳುವುದಿಲ್ಲ. ಒಂದುವೇಳೆ ಓಟುಮಾಡದೆ ಹಾಗೆಯೇ ಬಿಟ್ಟರೆ ಏನೂ ಪ್ರಮಾದವಾಗುವುದಿಲ್ಲ. 1966 ರ ನಿರ್ಣಯ ಇದ್ದೇಇದೆ. ಕೊಟ್ಟಿರುವ

ಭರವಸೆ ಇದೆ, ಸ್ಪಷ್ಟವಾಗಿ ಮುಖ್ಯ ಮಂತ್ರಿಗಳು ಹೇಳಿರುವುದಿದೆ. ಇಲ್ಲಿಗೆ ಈ ವಿಷಯುವನ್ನು ಬಿಡೋಣ ಎಂದು ಮನವಿಮಾಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ.--ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ವಿನಂತಿಮಾಡಿದೆ ಇಂಥ ವಿಷಯುವನ್ನು ಸಭೆಯು ಓಟಿಗೆ ಹಾಕಿ ಇಂಥ ನಿರ್ಣಯುವೇನಾದರೂ ಬಿದ್ದುಹೋದರೆ ಕೆಟ್ಟ ಪರಿಣಾಮವಾಗುವುದು. ಇದನ್ನು ತಿಳಿದು ಮುಖ್ಯ ಮಂತ್ರಿಗಳು ಮತ್ತು ಶಿವಪ್ಪನವರು ಒಂದು ರಾಜಿಗೆ ಬಂದಿದ್ದರೆ ಇಷ್ಟು ಗಲಭೆಯಾಗುತ್ತಿರಲಿಲ್ಲ. ಈಗ ಒಪ್ಪಿರುವುದು ಇಷ್ಟೇ. ಸಲಹೆ ಬಂದಿದೆ. ಟಾಕ್ಡ್ ಓವರ್ ಎಂದು ಶ್ರೀ ಪುಟ್ಟಸ್ವಾಮಿಯುವರು ಹೇಳಿದರು.

Mr. SPEAKER.—It is better there should be an honourable understanding. I wish that nobody from this side or that side should stand on prestige. The rule 275 reads thus :

> "(1) A member who has made a motion may withdraw the same by leave of the House"

Therefore, in view of the assurance given by the Hon. Chief Minister and if both the sides agree, the motion can be withdrawn.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ, ಈಗ ಶ್ರೀಮಾನ್ ಚನ್ನಬಸಪ್ಪನವರು ಮಾನ್ಯ ಶ್ರೀಕಂಠಯ್ಯನವರು ಮಾಡಿದ ಸಲಹೆಗೆ ಒಪ್ಪಿಗೆ ಕೊಡುವವರಿದ್ದಾರೆ. ಅದಕ್ಕೆ ಒಂದು ಷರತ್ತು ಏನೆಂದರೆ ಮಾನ್ಯ ಸಚಿವರು ಹಾರಂಗಿಯನ್ನು ಪ್ರಸ್ತಾಪ ಮಾಡುವುದನ್ನು ಬಿಡುತ್ತಿದ್ದಾರೆ, ಅವರ ಬಾಯಲ್ಲಿ ಹಾರಂಗಿ ವಿಚಾರ ಬರಲಿ ಎಂದು ಹೇಳುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್ :—ನಾನು ಈ ವಿಚಾರವನ್ನು ಮೂರನೆಯು ಸಲ ಹೇಳುತ್ತಿದ್ದೇನೆ. ಎಷ್ಟು ಸಲ ಹೇಳಬೇಕೋ ಗೊತ್ತಾಗುತ್ತಿಲ್ಲ. ನಾನ್ ಷೆಡ್ಯೂಲ್ ರಿವರ್ಸ್ ಮೇಲೆ ಕೆಲವು ಪ್ರಾಜೆಕ್ಟ್‌ಗಳು ತಯಾರಾಗಿದ್ದು ಅವುಗಳನ್ನು ತೆಗೆದುಕೊಳ್ಳಬೇಕಾದ ಪ್ರಶ್ನೆ ಇದೆ. ಈ ಹೊತ್ತು ಬೆಳಗ್ಗೆ ಹಾರಂಗಿ ಭಾಗದ ಅನೇಕ ರೈತರು ಬಂದಿದ್ದು ಏನಾದರೂ ಮಾಡಿ ಹಾರಂಗಿ ಯೋಜನೆಯನ್ನು ತೆಗೆದುಕೊಳ್ಳಿ, ನಾವು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ತಯಾರಿದ್ದೇವೆ. ನಮ್ಮ ಆಸ್ತಿಯನ್ನು ಈಡು ಮಾಡಿ ಸಾಲ ತೆಗೆದುಕೊಂಡು ಹಣವನ್ನು ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು. ನೀವು ಇಷ್ಟು ಉತ್ಸಾಹದಿಂದ ಮುಂದೆ ಬಂದು ಹಣವನ್ನು ಕೊಡುತ್ತೇವೆಂದು ಹೇಳುವಾಗ ನಿಮಗೆ ನಿರುತ್ಸಾಹ ಮಾಡುವುದಿಲ್ಲ, ಪ್ರಾಜೆಕ್ಟ್ ಕೆಲಸವನ್ನು ತೆಗೆದುಕೊಳ್ಳುತ್ತೇವೆ, ನೀವು ಹೇಳಿದ ಹಾಗೆ ನೀವು ನಡೆದುಕೊಳ್ಳಿ, ನಾನು ಹೇಳಿದಂತೆ ನಾನೂ ನಡೆದುಕೊಳ್ಳುತ್ತೇನೆ ಎನ್ನುವ ಮಾತನ್ನು ನಾನು ಹೇಳಿದೆ. ಅವರು ಬಹಳ ಸಂತೋಷದಿಂದ ಹೋದರು.

Mr. SPEAKER.—There is a general consensus that this matter should be closed to-day, and in view of this the debate is closed.

Announcement of Election to Subordinate Legislation Committee

Mr. SPEAKER.—There is a small announcement to be made :

"As the number of nominations received is equal to the number of places to be filled in the Subordinate Legislation Committee, the following persons are declared elected to the Subordinate Legislation Commitee and there will be no election in this behalf.

Sriyuths :

1. D. Devaraj Urs
2. N. Hutchmasthy Gowda
3. B. P. Kadam